
ಗಡೇಕಾರ ಪ್ರಕಾಶನ
ಗಡೇಕಾರ ಸರಣಿಯ
ಉತ್ಕೃಷ್ಟ ಫಲಿತಾಂಶ ನೀಡುತ್ತಾ ಬಂದಿರುವ ಗಡೇಕಾರ ಪ್ರಕಾಶನದ
ಹೆಮ್ಮೆಯ ಮತ್ತೊಂದು ಕೊಡುಗೆ
4ನೆಯ ಆವೃತ್ತಿ
ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (6–8) ಅರ್ಹತಾ ಕೈಪಿಡಿ
KARNATAKA
TEACHER
ELIGIBILITY
TEST
TET
ವಿಶ್ಲೇಷಣಾತ್ಮಕ ವಿವರಣೆಯ ಪ್ರಶ್ನೋತ್ತರ ಮಾಲಿಕೆ
ಪತ್ರಿಕೆ–II ಕಲಾ ವಿಭಾಗ
ಸಮಾಜ ವಿಜ್ಞಾನ
* ಭಾಷೆ I ಕನ್ನಡ ಮತ್ತು ಬೋಧನಾ ಶಾಸ್ತ್ರ
* ಭಾಷೆ II ಇಂಗ್ಲಿಷ್ ಮತ್ತು ಬೋಧನಾ ಶಾಸ್ತ್ರ
* ಬಾಲವಿಕಾಸ ಮತ್ತು ಬೋಧನಾ ಶಾಸ್ತ್ರ
* ಸಮಾಜ ವಿಜ್ಞಾನ ಮತ್ತು ಬೋಧನಾ ಶಾಸ್ತ್ರ
2014 2015 2017 2019
2020 2021 2022 2023
2024
GPSTR ಮತ್ತು HSTR
ನೇಮಕಾತಿಗೂ ಸಹಾಯಕ
ಪುಸ್ತಕದ ವಿಶೇಷತೆಗಳು :
❖ ಕನ್ನಡ ಭಾಷೆ, ಇಂಗ್ಲಿಷ ಭಾಷೆ, ಬಾಲವಿಕಾಸ ಮತ್ತು ಬೋಧನಾ ಶಾಸ್ತ್ರ ಹಾಗೂ ಸಮಾಜ ವಿಜ್ಞಾನ ವಿಷಯಗಳ ಪ್ರಶ್ನೆಗಳಿಗೆ ನಿಖರವಾದ ಮಾಹಿತಿ.
❖ ಬೇರೆ ಯಾವ ಪುಸ್ತಕದಲ್ಲಿಯೂ ಇರದಂತಹ ವಿಶ್ಲೇಷಣಾತ್ಮಕ ವಿವರಣೆ.
❖ ಪ್ರತಿ ವರ್ಷದ ಪ್ರತಿ ಪ್ರಶ್ನೆಯನ್ನೂ ವಿಶ್ಲೇಷಣೆ ಮಾಡಿರುವ ಏಕೈಕ ಪುಸ್ತಕ.
❖ ಶಿಕ್ಷಕ ಆಕಾಂಕ್ಷಿಗಳ ಬಳಿ ಇರಲೇಬೇಕಾದ ಪುಸ್ತಕ.
ಶ್ರೀ ಲಕ್ಷ್ಮಣ ಗಡೇಕಾರ
M.A., B.Ed., K-SET
Downloaded From: www.kpscvaani.com

# ಪರಿವಿಡಿ


| ಕ್ರ. ಸಂ | ವಿಷಯ | ಪುಟ ಸಂಖ್ಯೆ |
|---|---|---|
| 1. | ಕರ್ನಾಟಕ ರಾಜ್ಯ ಶಿಕ್ಷಕರ ಅರ್ಹತಾ ಪರೀಕ್ಷೆ ಬಗ್ಗೆ ಸಮಗ್ರ ಮಾಹಿತಿ | 01–04 |
| 2. | ಕರ್ನಾಟಕ ರಾಜ್ಯ ಶಿಕ್ಷಕರ ಅರ್ಹತಾ ಪರೀಕ್ಷೆ – 2014 ಪತ್ರಿಕೆ – 2, ಸಮಾಜ ವಿಜ್ಞಾನ (22–06–2014) | 05–73 |
| 3. | ಕರ್ನಾಟಕ ರಾಜ್ಯ ಶಿಕ್ಷಕರ ಅರ್ಹತಾ ಪರೀಕ್ಷೆ – 2015 ಪತ್ರಿಕೆ – 2, ಸಮಾಜ ವಿಜ್ಞಾನ (27–09–2015) | 74–133 |
| 4. | ಕರ್ನಾಟಕ ರಾಜ್ಯ ಶಿಕ್ಷಕರ ಅರ್ಹತಾ ಪರೀಕ್ಷೆ – 2017 ಪತ್ರಿಕೆ – 2, ಸಮಾಜ ವಿಜ್ಞಾನ (15–11–2017) | 134–193 |
| 5. | ಕರ್ನಾಟಕ ರಾಜ್ಯ ಶಿಕ್ಷಕರ ಅರ್ಹತಾ ಪರೀಕ್ಷೆ – 2019 ಪತ್ರಿಕೆ – 2, ಸಮಾಜ ವಿಜ್ಞಾನ (03–02–2019) | 194–241 |
| 6. | ಕರ್ನಾಟಕ ರಾಜ್ಯ ಶಿಕ್ಷಕರ ಅರ್ಹತಾ ಪರೀಕ್ಷೆ – 2020 ಪತ್ರಿಕೆ – 2, ಸಮಾಜ ವಿಜ್ಞಾನ (04–10–2020) | 242–287 |
| 7. | ಕರ್ನಾಟಕ ರಾಜ್ಯ ಶಿಕ್ಷಕರ ಅರ್ಹತಾ ಪರೀಕ್ಷೆ – 2021 ಪತ್ರಿಕೆ – 2, ಸಮಾಜ ವಿಜ್ಞಾನ (22–08–2021) | 288–340 |
| 8. | ಕರ್ನಾಟಕ ರಾಜ್ಯ ಶಿಕ್ಷಕರ ಅರ್ಹತಾ ಪರೀಕ್ಷೆ – 2022 ಪತ್ರಿಕೆ – 2, ಸಮಾಜ ವಿಜ್ಞಾನ (06–11–2022) | 341–394 |
| 9. | ಇತರೆ ಮಾಹಿತಿ | 395–402 |
| 10. | ಕರ್ನಾಟಕ ರಾಜ್ಯ ಶಿಕ್ಷಕರ ಅರ್ಹತಾ ಪರೀಕ್ಷೆ – 2023 ಪತ್ರಿಕೆ – 2, ಸಮಾಜ ವಿಜ್ಞಾನ (03–09–2023) | 403–463 |
| 11. | ಕರ್ನಾಟಕ ರಾಜ್ಯ ಶಿಕ್ಷಕರ ಅರ್ಹತಾ ಪರೀಕ್ಷೆ – 2024 ಪತ್ರಿಕೆ – 2, ಸಮಾಜ ವಿಜ್ಞಾನ (30–06–2024) | 464–508 |


Downloaded From: www.kpscvaani.com

# ಸ್ಪರ್ಧಾರ್ಥಿಗಳಿಗೆ ಸಲಹೆ – ಸೂಚನೆ

- ❖ ಪ್ರಶ್ನೆಗಳನ್ನು ಅತ್ಯಂತ ಜಾಗರೂಕರಾಗಿ ಓದಿರಿ. ಪ್ರಶ್ನೆ ಏನು ಕೇಳುತ್ತಿದೆ ? ಎಂಬುದನ್ನು ಗಮನಿಸಿರಿ.
- ❖ ಮೊದಲು ನಿಮಗೆ ಸಂಪೂರ್ಣವಾಗಿ ಅರ್ಥ ಗೊತ್ತಿರುವ ಪ್ರಶ್ನೆಗಳಿಗೆ ಉತ್ತರಿಸಿ.
- ❖ All these / None of these ಎಂಬ ಪ್ರಶ್ನೆಗಳನ್ನು ಉತ್ತರಿಸುವಾಗ ಅತ್ಯಂತ ಜಾಗರೂಕತೆಯಿಂದ ಪ್ರಶ್ನೆಗಳಿಗೆ ಉತ್ತರಿಸಿ.
- ❖ ಯಾವ ಆಯಾಮದಿಂದ / ದೃಷ್ಟಿಕೋನದಿಂದ ಪ್ರಶ್ನೆಗಳನ್ನು ಕೇಳಲಾಗಿದೆ ಎಂದು ಗಮನಿಸಿರಿ.
- ❖ ತಪ್ಪಾದ ಎರಡು ಆಯ್ಕೆಗಳನ್ನು ಗುರುತಿಸಿರಿ. ಇದರಿಂದ ನಿಮ್ಮಲ್ಲಿ ಗೊಂದಲ ಕಡಿಮೆಯಾಗಬಹುದು, ಹಾಗೂ ಸ್ವಲ್ಪ ಮಟ್ಟದ ಸ್ಪಷ್ಟತೆ ದೊರೆಯಬಹುದು. ಸಮಯದ ಪಾಲನೆ ಮಾಡಿ.
- ❖ ವೇಗವಾಗಿ ಓದುವ ಅಭ್ಯಾಸ ಮಾಡಿಕೊಳ್ಳಿ. ಇದರಿಂದ Paragraph ಗಳಿಗೆ ಉತ್ತರಿಸುವಾಗ ಸಹಾಯಕವಾಗುತ್ತದೆ.
- ❖ ಪ್ರತಿ ಪ್ರಶ್ನೆಗೂ ಮಾನಸಿಕವಾಗಿ ಸಿದ್ದರಾಗಿರಿ. ಹಳೆಯ ಪ್ರಶ್ನೆಯ ಗುಂಗಿನಲ್ಲಿಯೇ ಉಳಿಯಬೇಡಿ.
- ❖ ಪಠ್ಯಕ್ರಮದ ಸ್ಪಷ್ಟತೆ ಮತ್ತು ಕಾರ್ಯವ್ಯಾಪ್ತಿಯನ್ನು ಅರಿತುಕೊಳ್ಳಬೇಕು. ಇದರಿಂದ ಏನನ್ನು ಓದಬೇಕು? ಮತ್ತು ಯಾವ–ಯಾವ ವಿಭಾಗದಿಂದ ಯಾವ–ಯಾವ ಅಧ್ಯಾಯಗಳ [Unit] ಮೇಲೆ ಹೆಚ್ಚಿನ ಪ್ರಶ್ನೆಗಳನ್ನು ಕೇಳಲಾಗಿದೆ ಎಂದು ತಿಳಿದುಕೊಳ್ಳಬಹುದು.

  ಉದಾ: ಶೈಕ್ಷಣಿಕ ಮನೋವಿಜ್ಞಾನದಲ್ಲಿ (ಬೆಳವಣಿಗೆ ಮತ್ತು ವಿಕಾಸ, ವ್ಯಕ್ತಿತ್ವ ಇತ್ಯಾದಿ)
- ❖ ಹಿಂದಿನ ವರ್ಷದ ಪ್ರಶ್ನೆ ಪತ್ರಿಕೆಗಳ ಅಧ್ಯಯನವನ್ನು ಮಾಡಿ ಹಾಗೂ GPSTR ಪ್ರಶ್ನೆ ಪತ್ರಿಕೆಗಳನ್ನು ಗಮನಿಸಿ.
- ❖ ಅಧ್ಯಯನ ಸಾಮಗ್ರಿಗಳು ಅತ್ಯುತ್ತಮ ಆಯ್ಕೆಯಾಗಿರಬೇಕು. [ಸಾಧ್ಯವಾದರೆ ಇಲಾಖೆ ನೀಡಿರುವ ಆದ್ಯತಾ ಪಟ್ಟಿ ಗಮನಿಸುವುದು]
- ❖ ನಿಮ್ಮ ಓದುವಿಕೆಯ ವಿಧವನ್ನು ಬೇರೆಯವರೊಂದಿಗೆ ಹೋಲಿಸಿಕೊಳ್ಳಬೇಡಿ. ಏಕೆಂದರೆ ಇಲ್ಲಿ ನೀವು ಉತ್ತಮ ಅಂಕ ಗಳಿಕೆಗೆ ಪ್ರಯತ್ನಿಸುತ್ತಿದ್ದೀರಿ, ಹೊರತು ಬೇರೊಬ್ಬರ ಅಧ್ಯಯನ ವಿಧಾನದೊಂದಿಗೆ ಅಲ್ಲ.
- ❖ ನಿಮ್ಮ ಅಧ್ಯಯನ ಅತ್ಯಂತ ಗುಣಮಟ್ಟದ್ದಾಗಿರಲಿ. ಓದುವಿಕೆ / ಅಧ್ಯಯನವನ್ನು ಎಷ್ಟು ಗಂಟೆ ಓದಿದಿರಿ ಎನ್ನುವುದನ್ನು ಲೆಕ್ಕ ಹಾಕದೆ, ಆ ಓದು ಎಷ್ಟು ಗುಣಮಟ್ಟದ್ದಾಗಿದೆ ಎಂದು ತಿಳಿಯಿರಿ.
- ❖ ಓದುವಾಗ ಸಾಧ್ಯವಾದ ಕಡೆಯಲ್ಲಾ **"ನೋಟ್ಸ್ ಮಾಡಿಟ್ಟುಕೊಳ್ಳಿ"**. ಪುನರಾವರ್ತನೆಗೆ ಇದು ಅತ್ಯಂತ ಉಪಯುಕ್ತ.
- ❖ ಸಾಧ್ಯವಾದರೆ **"ವಾರಕ್ಕೊಮ್ಮೆಯಾದರೂ"** ಇಡೀ ವಾರದ ಕಲಿಕೆಯನ್ನು ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿ. ಇದರಿಂದ ನಿಮಗೆ ಗೊತ್ತಿರದ ಕೆಲವೊಂದು ವಿಷಯಗಳು ಅವರಿಗೆ, ಅವರಿಗೆ ಗೊತ್ತಿರದ ವಿಷಯಗಳು ನಿಮಗೆ ವಿನಿಮಯವಾಗಬಹುದು. ಇದರಿಂದ ಅಧ್ಯಯನ ಮೌಲ್ಯಯುತವಾಗುತ್ತದೆ.
- ❖ TET ಪರೀಕ್ಷೆಯಲ್ಲಿ ಹೇಗಾದರು ಮಾಡಿ ಅರ್ಹತೆ ಪಡೆಯಿರಿ.
- ❖ ಗೊತ್ತಿರಲಿ ಖಇಖ ಮುಗಿದ ತಕ್ಷಣವೇ 18000 ಶಿಕ್ಷಕರನ್ನು ಸರ್ಕಾರ ತುಂಬಿಕೊಳ್ಳಲಿದೆ. ಅದರಲ್ಲಿ ಒಂದು ಸೀಟು ನಿಮ್ಮದಾಗಲಿ.
- ❖ ನಿಮಗಾಗಿ ಒಂದು ಅಂದವಾದ ಸರ್ಕಾರಿ ಶಾಲೆ ಕಾಯುತ್ತಿದೆ ಹಾಗಾಗಿ TET ಪಾಸ್ ಆಗಿ.
- ❖ ನಿಮ್ಮನ್ನು ಪ್ರೀತಿಯಿಂದ ಶಾಲೆಗೆ ಬರಮಾಡಿಕೊಳ್ಳಲು HM ರವರು ಕಾಯುತ್ತಿದ್ದಾರೆ.
- ❖ DDPI ಸಾಹೇಬರಿಂದ ಆರ್ಡರ್ ಕಾಪಿ ಪಡೆಯುವ ಅವಿಸ್ಮರಣೀಯ ಕ್ಷಣ ಹತ್ತಿರ ಬರುತ್ತಿದೆ.
- ❖ ನಿಮ್ಮ ಹಾಗೂ ನಿಮ್ಮ ಕುಟುಂಬದ ಕನಸು ನನಸಾಗಿಸುವ ಕಾಲ ಬಂದಿದೆ ಪ್ರಯತ್ನಿಸಿರಿ.
- ❖ ಸರ್ಕಾರಿ ಶಾಲೆಯ ಶಿಕ್ಷಕ ಸಿಬ್ಬಂದಿಗಳ ಪಟ್ಟಿಗೆ ನಿಮ್ಮ ಹೆಸರು ಬರೆಯುವ ಕ್ಷಣಕ್ಕಾಗಿ TET ಓದಲೇಬೇಕು.
- ❖ ಮೊದಲ ಸಂಬಳ ಪಡೆಯುವ ಸೌಭಾಗ್ಯದ ಅದೃಷ್ಟತೆಗೆ TET ಬೇಕೇ ಬೇಕು
- ❖ ಅವಮಾನ ಅಪಮಾನ ಅನುಮಾನಗಳಿಗೆ ಪೂರ್ಣ ವಿರಾಮ ಹಾಕಿ ಸನ್ಮಾನದ ದಿನ ಹತ್ತಿರ ಬರುತ್ತಿದೆ.
- ❖ ಕುಟುಂಬದ ಆರ್ಥಿಕತೆ ಸಮಸ್ಯೆ ಪರಿಹರಿಸುವ ಕ್ಷಣ ಬಂದೊದಗಿದೆ.
- ❖ Good morning teacher, Good evening teacher, ಎಂದು ಹೇಳಲು ವಿದ್ಯಾರ್ಥಿಗಳು ನಿಮಗಾಗಿ ಕಾಯುತ್ತಿದ್ದಾರೆ.
- ❖ ಇಡೀ ಊರಿನ ಜನರಿಂದ ಸರ್ /ಟೀಚರ್ ಎಂಬ ಗೌರವ ಪಡೆಯುವುದಕ್ಕಾಗಿ TET ಓದಿರಿ.
- ❖ ನೆನಪಿಡಿ TET ಅಂದರೆ Talent eligible test.
- ❖ Target ಮಿಸ್ಸಾಗದಿರಲಿ, Energy ಪ್ರತಿಕ್ಷಣವಿರಲಿ, Tension ಬಿಟ್ಟುಬಿಡಿರಿ(TET)
- ❖ ಇವರ ಕೈಯಿಂದ ಏನು ಆಗಲ್ಲ ಅಂದವರೇ ಇವರು ನಮ್ಮವರು ಅನ್ನುವಂತಾಗಬೇಕು.
- ❖ ನೆನಪಿರಲಿ ಪರೀಕ್ಷೆಗೆ ಉಳಿದ ಸಮಯ Golden time ಅಲ್ಲ Diamond time.
- ❖ ಯುದ್ಧಕ್ಕೆ ಹೋಗದೆ ಸೋಲನ್ನು ಒಪ್ಪಿಕೊಳ್ಳದಿರಿ.
- ❖ ಈ ಜಗತ್ತಿನಲ್ಲಿ ಅತಿ ಬುದ್ಧಿವಂತ powerfull ವ್ಯಕ್ತಿ ಯಾರಾದರೂ ಇದ್ದರೆ ಅದು ನೀವು ಎಂಬ ಭಾವವಿರಲಿ.
- ❖ ಕೊನೆಗೆ ಎಲ್ಲಕ್ಕಿಂತ ಹೆಚ್ಚಾಗಿ **"ನಿಮ್ಮಲ್ಲಿ ಆತ್ಮವಿಶ್ವಾಸವಿರಲಿ, ಮನದಲ್ಲಿ ನಿಮ್ಮ ಬಗ್ಗೆ ನಂಬಿಕೆ ಇರಲಿ"**.
- ❖ ನಿಮ್ಮ ಅಧ್ಯಯನಕ್ಕೆ ಹಾಗೂ ನಿಮ್ಮ ಪರೀಕ್ಷೆಗೆ ಶುಭವಾಗಲಿ
- ❖ ನಿಮ್ಮ ಸಿದ್ಧತೆಯೇ ನಿಮಗೆ ಶ್ರೀ **ರಕ್ಷೆಯಾಗಲಿ.**

*** * * ಎಲ್ಲರಿಗೂ ಒಳ್ಳೆಯದಾಗಲಿ * * ***

Downloaded From: www.kpscvaani.com

# KAR-TET ಕರ್ನಾಟಕ ರಾಜ್ಯ ಶಿಕ್ಷಕರ ಅರ್ಹತಾ ಪರೀಕ್ಷೆ

## ಬಗ್ಗೆ ಸಮಗ್ರ ಮಾಹಿತಿ

ಶಿಕ್ಷಣ ಹಕ್ಕು ಕಾಯ್ದೆ (RTE) [ಸೆಕ್ಷನ್-23(1)] ಯಲ್ಲಿ ಶಿಕ್ಷಕರ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಅರ್ಹ ಶಿಕ್ಷಕರನ್ನು ಆಯ್ಕೆ ಮಾಡುವ ಉದ್ದೇಶದಿಂದ ಕೆಲವು ಅರ್ಹತೆಗಳನ್ನು ನಿಗದಿಪಡಿಸಲಾಗಿದೆ. (23–08–2010 ಮತ್ತು 29–07–2011 ಮತ್ತು 28–06–2018ರ ಅಧಿಸೂಚನೆಯಂತೆ)

ಶಿಕ್ಷಕರಿಗೆ ನಿಗದಿಪಡಿಸಿರುವ ಅಗತ್ಯ ಮಾನದಂಡ ಗಳಲ್ಲಿ **"ಶಿಕ್ಷಕರ ಅರ್ಹತಾ ಪರೀಕ್ಷೆ"** ( ಟಿಇಟಿ) ಕೂಡ ಒಂದಾಗಿದೆ. ಇಂತಹ ಟಿ.ಇ.ಟಿ.ಯನ್ನು ನಡೆಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಎನ್.ಸಿ.ಟಿ.ಇ (ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ತು) ನಿರ್ದೇಶಿಸಿತ್ತು.

ಕೇಂದ್ರ ಮಟ್ಟದಲ್ಲಿ ಸಿ.ಟಿ.ಇ.ಟಿ. (Central Teacher Eligibality Test) ಸಿಬಿಎಸ್‌ಸಿಯವರು ನಡೆಸುತ್ತಾ ಬಂದಿದ್ದಾರೆ. ಅದೇ ರೀತಿ ದೇಶದ ಅನೇಕ ರಾಜ್ಯಗಳು ಕೂಡ ಎನ್.ಸಿ.ಟಿ.ಇ ನಿರ್ದೇಶನದಂತೆ ಟಿ.ಇ.ಟಿ ಪರೀಕ್ಷೆ ನಡೆಸುತ್ತಾ ಬಂದಿವೆ. ಕರ್ನಾಟಕ ರಾಜ್ಯದಲ್ಲೂ ಕೂಡ ಕರ್ನಾಟಕ ಸರ್ಕಾರ ಶಿಕ್ಷಕರ ನೇಮಕಾತಿಗಾಗಿ **"ಶಿಕ್ಷಕರ ಅರ್ಹತಾ ಪರೀಕ್ಷೆ"** ನಡೆಸಲು ನಿರ್ಧರಿಸಿದೆ.

**ವಿಶೇಷ ಸೂಚನೆ:** ಅನುದಾನರಹಿತ, ಅನುದಾನಿತ, ಸರ್ಕಾರಿ ಶಾಲೆಗಳ ಶಿಕ್ಷಕರ ನೇಮಕಾತಿಯಾಗಲು ಕೂಡ ಟಿ.ಇ.ಟಿ ಕಡ್ಡಾಯವಾಗಿರುತ್ತದೆ. ಅನುದಾನರಹಿತ ಶಾಲೆಯಲ್ಲಿ ಶಿಕ್ಷಕರಿಗಾಗಿ ಕಾರ್ಯನಿರ್ವಹಿಸಲು ಕಡ್ಡಾಯ ವಾಗಿ ಟಿ.ಇ.ಟಿ ಪ್ರಮಾಣ ಪತ್ರ ಪಡೆದಿರಬೇಕು.

ಕರ್ನಾಟಕ ರಾಜ್ಯ ಶಾಲಾ ಶಿಕ್ಷಕರ ಅರ್ಹತಾ ಪರೀಕ್ಷೆ ( KARTET ) KAR - TET ಪರೀಕ್ಷೆಯು ಎರಡು ಪತ್ರಿಕೆಯನ್ನು ಒಳಗೊಂಡಿದ್ದು, ಪತ್ರಿಕೆ – 1 (1–5ನೇ ತರಗತಿ) & ಪತ್ರಿಕೆ – 2 (6–8ನೇ ತರಗತಿ)

| **ಮೊದಲ ಪತ್ರಿಕೆ** (Paper : 1) | **ಎರಡನೇ ಪತ್ರಿಕೆ** (Paper : 2) |
|---|---|
| ಪ್ರಾಥಮಿಕ ಶಾಲೆ ((1ರಿಂದ 5ನೇ ತರಗತಿ ಬೋಧಿಸುವ ಶಿಕ್ಷಕರಿಗಾಗಿ) **ಅಂಕಗಳು 150** | ಉನ್ನತ ಪ್ರಾಥಮಿಕ ಶಾಲೆ (6ರಿಂದ 8ನೇ ತರಗತಿ ಬೋಧಿಸುವ ಶಿಕ್ಷಕರಿಗಾಗಿ) **ಅಂಕಗಳು 150** |

**ಪತ್ರಿಕೆ –2: ಅಗತ್ಯವಿರುವ ಕನಿಷ್ಠ ವಿದ್ಯಾರ್ಹತೆ: (6 ರಿಂದ 8 ನೇ ತರಗತಿಗಳಿಗೆ)**

- ❖ ಪದವಿಯಲ್ಲಿ ಕನಿಷ್ಠ ಶೇ.50%ರಷ್ಟು ಅಂಕಗಳನ್ನು ಗಳಿಸಿರಬೇಕು ಹಾಗೂ ಎರಡು ವರ್ಷಗಳ D.EL.Ed ಕೋರ್ಸಿನ (ಯಾವ ಹೆಸರಿನಿಂದ ಕರೆಯುವರೋ ಆ ಹೆಸರಿನ) ದ್ವಿತೀಯ ವರ್ಷದಲ್ಲಿ ತೇರ್ಗಡೆ ಹೊಂದಿರುವವರು ಅಥವಾ ದ್ವಿತೀಯ ವರ್ಷದ ಅಂತಿಮ ಪರೀಕ್ಷೆಗೆ ಹಾಜರಾಗಿ ಫಲಿತಾಂಶದ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳು.
- ❖ ಅಥವಾ ಪದವಿಯಲ್ಲಿ ಕನಿಷ್ಟ ಶೇ.50%ರಷ್ಟು ಅಂಕಗಳನ್ನು ಗಳಿಸಿರಬೇಕು ಹಾಗೂ ಬಿ.ಇಡಿ ಪದವಿಯಲ್ಲಿ ತೇರ್ಗಡೆ ಹೊಂದಿರುವವರು ಅಥವಾ ಅಂತಿಮ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗಿ ಫಲಿತಾಂಶದ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳು.
- ❖ ಅಥವಾ ಪಿ.ಯು.ಸಿ / ಸೀನಿಯರ್ ಸೆಕೆಂಡರಿ (ತತ್ಸಮಾನ) ಪರೀಕ್ಷೆಯಲ್ಲಿ ಕನಿಷ್ಠ ಶೇ.50%ರಷ್ಟು ಅಂಕಗಳನ್ನು ಗಳಿಸಿರಬೇಕು ಹಾಗೂ ನಾಲ್ಕು ವರ್ಷಗಳ ಬ್ಯಾಚುಲರ್ ಇನ್ ಎಲಿಮೆಂಟರಿ ಎಜುಕೇಶನ್‌ನಲ್ಲಿ (B.El.Ed) ತೇರ್ಗಡೆ ಹೊಂದಿರುವವರು ಅಥವಾ ಅಂತಿಮ ವರ್ಷದ / ಸೆಮಿಸ್ಟರ್‌ನ ಪರೀಕ್ಷೆಗೆ ಹಾಜರಾಗಿ ಫಲಿತಾಂಶದ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳು.
- ❖ ಅಥವಾ ಪಿ.ಯು.ಸಿ / ಸೀನಿಯರ್ ಸೆಕೆಂಡರಿ (ತತ್ಸಮಾನ) ಪರೀಕ್ಷೆಯಲ್ಲಿ ಕನಿಷ್ಟ ಶೇ .50%ರಷ್ಟು ಅಂಕಗಳನ್ನು ಗಳಿಸಿರಬೇಕು ಹಾಗೂ ನಾಲ್ಕು ವರ್ಷಗಳ ಪದವಿಯಲ್ಲಿ ತೇರ್ಗಡೆ ಹೊಂದಿರು ವವರು ಅಥವಾ ಅಂತಿಮ ವರ್ಷದ ವಾರ್ಷಿಕ ಪರೀಕ್ಷೆ / ಅಂತಿಮ ಸೆಮಿಸ್ಟರ್‌ನ ಪರೀಕ್ಷೆಗೆ ಹಾಜರಾಗಿ ಫಲಿತಾಂಶದ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳು.
- ❖ ಅಥವಾ ಪದವಿಯಲ್ಲಿ ಕನಿಷ್ಟ ಶೇ.50%ರಷ್ಟು ಅಂಕಗಳನ್ನು ಗಳಿಸಿರಬೇಕು ಹಾಗೂ ಎರಡು ವರ್ಷದ ಬಿ.ಇಡಿ (ವಿಶೇಷ ಶಿಕ್ಷಣ) ಪದವಿಯಲ್ಲಿ

Downloaded From: www.kpscvaani.com

## ಪತ್ರಿಕೆ –1 (1 ರಿಂದ 5 ನೇ ತರಗತಿ ಬೋಧಿಸಲ್ಪಡುವ ಶಿಕ್ಷಕರಿಗಾಗಿ) :

**ಪರೀಕ್ಷಾ ಅವಧಿ : 2 ಗಂಟೆ 30 ನಿಮಿಷ**

| ವಿಭಾಗ | ವಿಷಯ | ಪ್ರಶ್ನೆಗಳ ಸಂಖ್ಯೆ | ಒಟ್ಟು ಅಂಕಗಳು |
|---|---|---|---|
| 1 | ಭಾಷೆ– 1 ( ಕಡ್ಡಾಯ ) | 30 ಬಹು ಆಯ್ಕೆ ಪ್ರಶ್ನೆ | 30 ಅಂಕಗಳು |
| 2 | ಭಾಷೆ –2 ( ಕಡ್ಡಾಯ ) | 30 ಬಹು ಆಯ್ಕೆ ಪ್ರಶ್ನೆ | 30 ಅಂಕಗಳು |
| 3 | ಶಿಶು ವಿಕಸನ ಹಾಗೂ ಬೋಧನಾ ಕ್ರಮ (ಕಡ್ಡಾಯ) | 30 ಬಹು ಆಯ್ಕೆ ಪ್ರಶ್ನೆ | 30 ಅಂಕಗಳು |
| 4 | ಗಣಿತ (ಗಣಿತ ಮತ್ತು ವಿಜ್ಞಾನ ಶಿಕ್ಷಕರಿಗಾಗಿ) | 30 ಬಹು ಆಯ್ಕೆ ಪ್ರಶ್ನೆ | 30 ಅಂಕಗಳು |
| 5 | ಪರಿಸರ ಅಧ್ಯಯನ | 30 ಬಹು ಆಯ್ಕೆ ಪ್ರಶ್ನೆ | 30 ಅಂಕಗಳು |
| 6 | ಸಮಾಜ ಅಧ್ಯಯನ (ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳ ಬದಲಾಗಿ ಅಂಧ ವಿದ್ಯಾರ್ಥಿಗಳಿಗೆ ಮಾತ್ರ | 60 ಬಹು ಆಯ್ಕೆ ಪ್ರಶ್ನೆ | 60 ಅಂಕಗಳು |
| | **ಒಟ್ಟು** | **150 ಬಹು ಆಯ್ಕೆ ಪ್ರಶ್ನೆಗಳು** | **150 ಅಂಕಗಳು** |

Downloaded From: www.kpscvaani.com

## ಪತ್ರಿಕೆ –2 (6 ರಿಂದ 8 ನೇ ತರಗತಿ ಬೋಧಿಸಲ್ಪಡುವ ಶಿಕ್ಷಕರಿಗಾಗಿ) :

**ಪರೀಕ್ಷಾ ಅವಧಿ : 2 ಗಂಟೆ 30 ನಿಮಿಷ**

| ವಿಭಾಗ | ವಿಷಯ | ಪ್ರಶ್ನೆಗಳ ಸಂಖ್ಯೆ | ಒಟ್ಟು ಅಂಕಗಳು |
|---|---|---|---|
| 1 | ಭಾಷೆ– 1 ( ಕಡ್ಡಾಯ ) | 30 ಬಹು ಆಯ್ಕೆ ಪ್ರಶ್ನೆ | 30 ಅಂಕಗಳು |
| 2 | ಭಾಷೆ –2 ( ಕಡ್ಡಾಯ ) | 30 ಬಹು ಆಯ್ಕೆ ಪ್ರಶ್ನೆ | 30 ಅಂಕಗಳು |
| 3 | ಶಿಶು ವಿಕಸನ ಹಾಗೂ ಬೋಧನಾ ಕ್ರಮ (ಕಡ್ಡಾಯ) | 30 ಬಹು ಆಯ್ಕೆ ಪ್ರಶ್ನೆ | 30 ಅಂಕಗಳು |
| 4 | ಗಣಿತ ಮತ್ತು ವಿಜ್ಞಾನ (ಗಣಿತ ಮತ್ತು ವಿಜ್ಞಾನ ಶಿಕ್ಷಕರಿಗಾಗಿ) | 60 ಬಹು ಆಯ್ಕೆ ಪ್ರಶ್ನೆ | 630 ಅಂಕಗಳು |
| 5 | ಸಮಾಜ ಪಾಠಗಳು / ಸಮಾಜ ವಿಜ್ಞಾನ (ಸಮಾಜ ವಿಜ್ಞಾನ ಶಿಕ್ಷರಿಗಾಗಿ) | 60 ಬಹು ಆಯ್ಕೆ ಪ್ರಶ್ನೆ | 60 ಅಂಕಗಳು |
| | **ಒಟ್ಟು** | **150 ಬಹು ಆಯ್ಕೆ ಪ್ರಶ್ನೆಗಳು** | **150 ಅಂಕಗಳು** |

# KAR-TET

ಪತ್ರಿಕೆ–II (6–8th)

ಕಲಾ ವಿಭಾಗ

2024

- Part I : ಭಾಷೆ–1 ಕನ್ನಡ
- Part II : ಭಾಷೆ–2 ಇಂಗ್ಲೀಷ್
- Part III : ಬಾಲವಿಕಾಸ & ಬೋಧನಾ ಶಾಸ್ತ್ರ
- Part IV : ಸಮಾಜ ವಿಜ್ಞಾನ

ಪರೀಕ್ಷೆ ನಡೆದ ದಿನಾಂಕ : 30–06–2024

## PART - II ಭಾಷೆ – I ಕನ್ನಡ

❖ **ಸೂಚನೆ : ಈ ಕೆಳಗಿನ ಗದ್ಯ ಭಾಗವನ್ನು ಓದಿ 1 ರಿಂದ 8 ಪ್ರಶ್ನೆಗಳಿಗೆ ಉತ್ತರಿಸಿ :**

ಈಗ ಅಮೇರಿಕಾದ ದಕ್ಷಿಣ ಕರೋಲಿನಾದಲ್ಲಿ ಮೇದರ ಬುಟ್ಟಿಗಳಿಗೆ ತುಂಬಾ ಬೇಡಿಕೆ. ಈ ಬುಟ್ಟಿಗಳನ್ನು ಹೆಣೆಯವವರೆಲ್ಲಾ ಅಮೇರಿಕನ್ ನೀಗ್ರೋ ಹೆಂಗಸರು. ಇವರು ಆಫ್ರಿಕಾದಿಂದ ಮುನ್ನೂರು ವರ್ಷಗಳ ಹಿಂದೆ ಗುಲಾಮರಾಗಿ ಸೆರೆ ಸಿಕ್ಕು ಇಲ್ಲಿಗೆ ಬಂದವರು. ಹದಿನೆಂಟನೇ ಶತಮಾನದಲ್ಲಿ ಕೆರೋಲಿನಾದ ತೋಟಗಾರರು ಇವರನ್ನು ಭತ್ತ ಬೆಳೆಯಲು ಕೊಂಡುತಂದರು. ಭತ್ತ ಬೆಳೆಲಯುತ್ತಿದ್ದಾಗ ಬೆಳಗಿನ ಹೊತ್ತು ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ಆಳುಗಳು ಸಂಜೆಯೆಲ್ಲಾ ಭತ್ತದ ಹುಲ್ಲು ಮತ್ತು ನದೀ ತೀರದಲ್ಲಿ ದೊರೆಯುವ ಜೊಂಡನ್ನು ಉಪಯೋಗಿಸಿಕೊಂಡು ತಮಗೆ ಅಗತ್ಯವಾದ ವಸ್ತುಗಳನ್ನು ಹೆಣೆಯುತ್ತಿದ್ದರು. ಇವರು ನಮ್ಮ ಮೇದರಂತೆ ಎಳೆಗಳನ್ನು ಒಂದರೊಳಗೊಂದರಂತೆ ಹೊಗಿಸಿ ಬುಟ್ಟಿ ಹೆಣೆಯುವುದಿಲ್ಲ. ಅದರ ಬದಲು ಬೆತ್ತದಂಥ ಕಿರುಬಿದಿರಿನಿಂದ ದಾರದ ಎಳೆಗಳನ್ನು ತಯಾರಿಸಿ ಒಂದೊಂದು ಸುತ್ತಿಗೂ ಕಟ್ಟಿ ಬಿಗಿಮಾಡುತ್ತಾ ಬುಟ್ಟಿ ರೂಪಿಸುತ್ತಾರೆ. ಆದರೆ ಇವರ ಭತ್ತದ ರಾಜ್ಯ ಬಹಳ ದಿನ ಉಳಿಯಲಿಲ್ಲ. ಅಮೇರಿಕಾದಲ್ಲಿ ಅಂತರ್ಯುದ್ಧ ಆರಂಭವಾಗಿ ಭತ್ತಕ್ಕೆ ಗಿರಾಕಿಗಳು ಕಡಿಮೆಯಾದರು. ಬ್ರೆಡ್ ಪ್ರಧಾನ ಆಹಾರವಾದ್ದರಿಂದ ಎಲ್ಲರೂ ಗೋಧಿಯನ್ನೇ ಅವಲಂಬಿಸಿದರು. ಅಂತರ್ಯುದ್ಧದ ನಂತರ ಮೂವತ್ತು ವರ್ಷಗಳ ತರುವಾಯ ಭಾರೀ ಬಿರುಗಾಳಿಯ ಅನಾಹುತದಲ್ಲಿ ಇವರ ಹಳ್ಳಿಗಳೂ ಭತ್ತದ ಗದ್ದೆಗಳೂ ನಾಶವಾದವು.

ಆದರೂ ಪರಂಪೆರಯಿಂದ ಬಂದಿದ್ದ ತಮ್ಮ ಬುಟ್ಟಿ ಹೆಣೆಗಾರಿಕೆಯನ್ನು ಆಫ್ರಿಕನ್ ಹೆಂಗಸರು ಕೈಬಿಡಲಿಲ್ಲ. ಇಪ್ಪತ್ತನೇ ಶತಮಾನದಲ್ಲಿ ಇವರ ಕಲಾತ್ಮಕ ಬುಟ್ಟಿಗಳಿಗೆ ಬೇಡಿಕೆ ಅಧಿಕವಾಯ್ತು. ಇವರೇ ಅಮೇರಿಕಾದ ಹೈವೇಗಳ ಪಕ್ಕ ಬಯಲು ಮಾರುಕಟ್ಟೆಗಳನ್ನು ರೂಪಿಸಿಕೊಂಡು ತಮ್ಮ ಕರಕುಶಲ ವಸ್ತುಗಳನ್ನು ಮಾರತೊಡಗಿದರು. ಇವರ ಬಯಲು ಮಾರುಕಟ್ಟೆಗಳು ನಮ್ಮ ಸಂತೆಗಳನ್ನು ಹೋಲುತ್ತವೆ. ಅಮೇರಿಕಾದ ಸೂಪರ್ ಮಾರ್ಕೆಟ್‌ಗಳಿಗಿಂತಲೂ ಜನಪ್ರಿಯವಾಗಿವೆ.

1. **ಅಮೇರಿಕಾದಲ್ಲಿ ಅಂತರ್ಯುದ್ಧ ಆರಂಭವಾಗಿ ಯಾವುದಕ್ಕೆ ಗಿರಾಕಿಗಳು ಕಡಿಮೆಯಾದರು ?**

(1) ಬ್ರೆಡ್ (2) ಗೋಧಿ

(3) ಭತ್ತ (4) ಜೊಂಡು

**ಉತ್ತರ : (3) ಭತ್ತ**

❖ ಅಮೇರಿಕಾದಲ್ಲಿ ಅಂತರ್ಯುದ್ಧ ಆರಂಭವಾಗಿ ಭತ್ತಕ್ಕೆ ಗಿರಾಕಿಗಳು ಕಡಿಮೆಯಾದರು.

2. **ಮೇದರ ಬುಟ್ಟಿಗಳಿಗೆ ಇಲ್ಲಿ ತುಂಬಾ ಬೇಡಿಕೆ**

(1) ಅಮೇರಿಕಾದ ಉತ್ತರ ಕೆರೋಲಿನಾ

(2) ಆಫ್ರಿಕಾದ ದಕ್ಷಿಣ ಕೆರೋಲಿನಾ

(3) ಅಮೇರಿಕಾದ ದಕ್ಷಿಣ ಕೆರೋಲಿನಾ

(4) ಆಫ್ರಿಕಾದ ಉತ್ತರ ಕೆರೋಲಿನಾ

**ಉತ್ತರ : (3) ಅಮೇರಿಕಾದ ದಕ್ಷಿಣ ಕೆರೋಲಿನಾ**

❖ ಮೇರಿಕಾದ ದಕ್ಷಿಣ ಕರೋಲಿನಾದಲ್ಲಿ ಮೇದರ ಬುಟ್ಟಿಗಳಿಗೆ ತುಂಬಾ ಬೇಡಿಕೆ.

3. **ಇವು ಅಮೇರಿಕಾದ ಸೂಪರ್ ಮಾರ್ಕೆಟ್‌ಗಳಿಗಿಂತಲೂ ಜನಪ್ರಿಯವಾಗಿವೆ.**

(1) ಬಯಲು ಮಾರುಕಟ್ಟೆಗಳು

(2) ಕರಕುಶಲ ವಸ್ತುಗಳು

(3) ಮೇದರ ಬುಟ್ಟಿಗಳು

(4) ಕಲಾತ್ಮಕ ಬುಟ್ಟಿಗಳು

**ಉತ್ತರ : (1) ಬಯಲು ಮಾರುಕಟ್ಟೆಗಳು**

Downloaded From: www.kpscvaani.com

**50. Identify the suitable voice of the given sentence.**
**Mona completed the sum.**

(1) The sum is completed by Mona.
(2) The sum is was completed by Mona.
(3) The sum can be completed by Mona.
(4) The sum was being completed by Mona.

**Ans : (2) The sum is was completed by Mona.**

❖ The sum was completed by Mona.
ಕೊಟ್ಟ ವಾಕ್ಯವು Active ಹಾಗೂ Passiveಗಳಿಗೆ ಸಂಬಂಧಿಸಿದ್ದಾಗಿದೆ. ಲೆಕ್ಕವನ್ನು ಪೂರ್ಣಗೊಳಿಸಿದಳು ಎಂಬುದು ಕೊಟ್ಟ ವಾಕ್ಯದ ಅರ್ಥ. ಇದೇ ವಾಕ್ಯವನ್ನು Passive Voice ಕರ್ಮಣಿ ವಾಕ್ಯವಾಗಿ ಬದಲಾಯಿಸಿದಾಗ "ಲೆಕ್ಕವು ಮೋನಾಳಿಂದ ಪೂರ್ಣಗೊಂಡಿತು" ಎಂದಾಗುತ್ತದೆ.

❖ Mona completed the sum (Active Voice)
The sum was completed by Mona (Passive Voice)

❖ ಕೊಟ್ಟ ವಾಕ್ಯವನ್ನು Active Voice ದಿಂದ Passive Voice ಗೇ ಬದಲಾಯಿಸಬೇಕಾದರೆ ಕೊಟ್ಟ ವಾಕ್ಯದ ಕರ್ತೃ (Subject) ಕರ್ಮಪದ (object)ಗಳಲ್ಲಿ ಸ್ಥಾನ ಪಲ್ಲಟನೆಯಾಗುತ್ತದೆ. ಅಲ್ಲದೇ ಕೊಟ್ಟ ವಾಕ್ಯವು ಯಾವ tense ನ ರೂಪದಲ್ಲಿದೆ ಎಂಬುದರ ಆಧಾರದ ಮೇಲಿಂದ ಹಲವು ಬದಲಾವನೆಗಳನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ಉತ್ತಮ ಗ್ರಾಮರ್ ಪುಸ್ತಕವನ್ನು ಅಭ್ಯಸಿಸುವುದು ಸೂಕ್ತ. ಆದ್ದರಿಂದ ಆಯ್ಕೆ (2) ಸರಿ ಉತ್ತರ.

**51. NCTE stands for**

(1) National Council for Teacher Education
(2) National Curriculum for Teacher Education
(3) National Committee for Teacher Education
(4) National Council for Technical Education

**Ans : (1) National Council for Teacher Education**

National Council for teacher Education
ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ ಅಥವಾ ರಾಷ್ಟ್ರೀಯ ಶಿಕ್ಷಕರ ಪರಿಷತ್ ಎಂದೂ ಇದನ್ನು ಕರೆಯಲಾಗುತ್ತದೆ. ಇದು ಶಿಕ್ಷಣಕ್ಕೆ ಸಂಬಂಧಿಸಿದಂತೆ ಶಿಕ್ಷಣದ ವ್ಯವಸ್ಥೆಯನ್ನು ಯೋಜಿಸುತ್ತ ಅಭಿವೃದ್ಧಿಪಡಿಸುವುದಾಗಿದೆ. ಅಲ್ಲದೇ ಶಿಕ್ಷಕರ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸುವುದರ ಮೂಲಕ ಮೇಲ್ವಿಚಾರಣೆಯನ್ನು ಮಾಡುವುದಾಗಿದೆ.

**52. The second tongue of all the teacher in general and right hand of a language teacher is**

(1) Chalk board (2) A piece of chalk
(3) Red pen (4) Time table

**Ans : (1) Chalk board**

❖ Another term for chalkboard is Blackboard. Blackboard is usually known as chalkboard.

❖ The main purpose of using this is to convey information. displaying the thoughts in order to sharing the knowledge to the students. Most of the times it is to write the main words. Content words to express the meanings. to draw the diagrams / pictures. without a chalkboard a teacher can't make teaching learning fruitful so it is known as a right hand of a language teacher Hence option (1) is correct.
ಚಾಕ್ ಬೋರ್ಡ್‌ನ್ನು ಸಾಮಾನ್ಯವಾಗಿ ಕಪ್ಪು ಹಲಗೆಯೆಂಬ ಪದದಿಂದಲೂ ಗುರ್ತಿಸಲಾಗುತ್ತದೆ. ಕಪ್ಪು ಹಲಗೆಯ ಬಳಕೆಯ ಮುಖ್ಯ ಉದ್ದೇಶವೇ ಬೋಧನಾ-ಕಲಿಕಾ ಪ್ರಕ್ರಿಯೆಯನ್ನು ರಸವತ್ತಾಗಿ ಮಾಡುವುದಾಗಿದೆ. ಕಪ್ಪು ಹಲಗೆಯನ್ನು ಶಿಕ್ಷಕರಾದವರು ಸಂವಹನ ಮಾಧ್ಯಮವಾಗಿ ಬಳಸಲಾಗುತ್ತದೆ. ಕಪ್ಪು ಹಲಗೆಯನ್ನು ಬಳಸುವುದರ ಮೂಲಕ ಘಟಕದ ಮುಖ್ಯಾಂಶಗಳ ಪಟ್ಟಿ ಮಾಡುವಿಕೆ, ಮುಖ್ಯ ಶಬ್ದಗಳ ಅರ್ಥ ವಿವರಿಸುವಿಕೆ, ವಿಜ್ಞಾನ / ಸಮಾಜ-ವಿಜ್ಞಾನ ವಿಷಯಗಳಲ್ಲಿ ಬರುವ ಚಿತ್ರಗಳ ಬಿಡಿಸುವಿಕೆ (ಉದಾ: ಜೀರ್ಣಾಂಗವ್ಯೂಹ, ಭೂಪಟ, ರಾಜ್ಯದ ನಕ್ಷೆ ಮುಂತಾದವು) ಗಳನ್ನು ರಚಿಸುವುದರಿಂದ ಮಕ್ಕಳ ಕಲಿಕೆಯನ್ನು ಆಸಕ್ತಿಕರವಾಗುವಂತೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ಹೇಳಬಹುದು. ಕಪ್ಪು ಹಲಗೆಯ ಬಳಕೆ ಇಲ್ಲದೇ, ಕಲಿಕಾ ಪ್ರಕ್ರಿಯೆ ಅತ್ಯಂತ ಫಲಪ್ರದವಾಗಲಾರದು. ಆದ ಕಾರಣ ಆಯ್ಕೆ (1) ಸರಿ ಉತ್ತರ.

**53. The approach which emphasizes the more use of target language and there is hardly scope to use mother tongue of the pupils as the structure of English language can be translated into mother tongue is known as**

Downloaded From: www.kpscvaani.com

**60. Assessment is made along with the teaching of lessons throughout the academic year, which includes oral tests and co-curricular activities is known as**

(1) Summative Assessment
(2) Formative Assessment
(3) Formal Assessment
(4) Diagnostic Assessment

**Ans : (2) Formative Assessment**

**Formative Assesment :**

❖ Formative assesment is basically a continous evalutation method used to know the strengths and weaknesses of the students is particular unit, or throughout a lesson to get a constant progress most of the time it providos both teacher and students to what has been tought and learnt and the area's to be improvement. ex: Unit test, sumarizing, MCQ, Little Quizes or answering in a word / sentences etc.

❖ ರೂಪಣಾತ್ಮಕ ಮೌಲ್ಯಮಾಪನವೆಂದೂ ಇದನ್ನು ಕರೆಯುತ್ತಾರೆ. ವರ್ಷದ ಕೊನೆಗೆ ಅಥವಾ ಸ್ತರಗಳ ನಡಸುವೆ ನಡೆಯುವ ಸಂಕಲನಾತ್ಮಕ ಪರೀಕ್ಷೆಯಲ್ಲಿ ಉತ್ತಮ ಪ್ರದರ್ಶನ ನೀಡುವಲ್ಲಿ ಇವು ಪ್ರಮುಖ ಪಾತ್ರವಹಿಸುತ್ತವೆ. ಏಕೆಂದರೆ ರೂಪಣಾತ್ಮಕ ಮೌಲ್ಯಮಾಪನವು ಮೂಲತಃವಾಗಿ ಒಂದು ನಿಗದಿಪಡಿಸಿದ ಘಟಕ ಅಥವಾ ನಿಗದಿಪಡಿಸಿದ ಪಾಠದ ಅಥವಾ ಪೂರ್ವ ನಿರೂಪಿತವಾದ ಗುರಿಗಳು ಮತ್ತು ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಅಥವಾ ಪ್ರಗತಿ ಸಾಧಿಸಲು ಮಾಡುವ ಕಲಿಕಾ ಅಭ್ಯಾಸಗಳು ಇವುಗಳಿಂದ ವಿದ್ಯಾರ್ಥಿಗಳು ನಿಗದಿಪಡಿಸಿದ ಯಾವ ಕ್ಷೇತ್ರದಲ್ಲಿ ಸಾಧಿಸಿದ್ದಾರೆ ಅಥವಾ ಅವರ ದೌರ್ಬಲ್ಯಗಳೇನು ? ಎಂದು ತಿಳಿಸಿಕೊಡುತ್ತದೆ. ಇದರಿಂದ ವಿದ್ಯಾರ್ಥಿಗಳು ತಮ್ಮ ಕಲಿಕಾ ಪ್ರಗತಿಯನ್ನು ಸಾಧಿಸಲು ಸಹಾಯವಾಗುತ್ತದೆ.

ಉದಾ:ಘಟಕ ಪರೀಕ್ಷೆಗಳು, ಸಾರಾಂಶ ಬರೆಯುವಿಕೆ / ಬಹು ಆಯ್ಕೆಯ ಪ್ರಶ್ನೆಗಳು, ಒಂದೇ ಪದ / ವಾಕ್ಯದಲ್ಲಿ ಉತ್ತರಿಸಬಹುದಾದ ಪ್ರಶ್ನೆಗಳು ಇತ್ಯಾದಿ.

## PART - III ಶಿಶು ವಿಕಸನ ಮತ್ತು ಬೋಧನಾಶಾಸ್ತ್ರ

**61. ಅನುವಂಶೀಯತೆಯ ಸಿದ್ಧಾಂತಕ್ಕೆ ಸಂಬಂಧಿಸಿದಂತೆ ಪ್ರಾಬಲ್ಯ ಮತ್ತು ಪ್ರತ್ಯೇಕೀಕರಣ ತತ್ವಗಳನ್ನು ನೀಡಿದವರು ಯಾರು ?**

(1) ಗ್ಯಾಲ್ಟನ್ (2) ಮೆಂಡಲ್
(3) ಡಾರ್ವಿನ್ (4) ಲಾಮಾರ್ಕ್

**ಉತ್ತರ : (2) ಮೆಂಡಲ್**

1. ಗೆಲ್ಟನ್ (Francis Galton)ಅವರು ಇಂಗ್ಲಿಷ್ ವಿಜ್ಞಾನಿ. ಚಾರ್ಲ್ಸ್ ಡಾರ್ವಿನ್ ಅವರ ಸಂಬಂಧಿ. ಗೆಲ್ಟನ್ ಅನುವಂಶಿಕತೆ ಮತ್ತು ಮಾನವ ಬುದ್ಧಿವಂತಿಕೆ ಕುರಿತಾಗಿ ಅಧ್ಯಯನ ನಡೆಸಿ "ಯೂಜೆನಿಕ್ಸ್" (Eugenics) ಎಂಬ ವಿಷಯದದಲ್ಲಿ ಪ್ರಸಿದ್ಧಿ ಪಡಿದಿದ್ದಾರೆ. ಆದರೆ ಅವರು ಪ್ರಾಬಲ್ಯ ಮತ್ತು ಪ್ರತ್ಯೇಕೀಕರಣ ತತ್ವಗಳನ್ನು ನೀಡಿಲ್ಲ.

**2. ಮೆಂಡಲ್ (Gregor Mendel)** ಗ್ರೆಗರ್ ಮೆಂಡಲ್ ಅವರನ್ನು "ತಳಿಶಾಸ್ತ್ರದ ಪಿತಾಮಹ" (Father of Genetics) ಎಂದು ಕರೆಯಲಾಗುತ್ತದೆ. ಅವರು ಬಟಾಣಿ ಸಸ್ಯಗಳ ಮೇಲಿನ ಪ್ರಯೋಗಗಳ ಮೂಲಕ ಮೂರು ಪ್ರಮುಖ ನಿಯಮಗಳನ್ನು ನೀಡಿದರು :

**ಪ್ರಾಬಲ್ಯ ನಿಯಮ (Law of Dominance)** ಒಂದು ಲಕ್ಷಣಕ್ಕೆ ಸಂಬಂಧಿಸಿದ ಪ್ರಬಲ ಗುಣಾಣುವು (gene) ಹಿಂಜರಿತ ಗುಣಾಣುನ್ನು ಮರೆಮಾಡುತ್ತದೆ.

**ಪ್ರತ್ಯೇಕೀಕರಣ ನಿಯಮ (Law of Segregation)** ಸಂತಾನೋತ್ಪತ್ತಿ ಸಮಯದಲ್ಲಿ ಗುಣಾಣುಗಳು ಸ್ವತಂತ್ರವಾಗಿ ಬೇರ್ಪಡುವ ಕ್ರಿಯೆ, ಗುಣಾಣುಗಳು ಬೇರೆ ಬೇರೆ ಲಕ್ಷಣಗಳಿಗೆ ಅನುಗುಣವಾಗಿ ಪ್ರತ್ಯೇಕವಾಗುವುದನ್ನು ಇದು ಸೂಚಿಸುತ್ತದೆ.

**ಸ್ವತಂತ್ರ ವಿಂಗಡಣೆ ನಿಯಮ (Law of Independent Assortment)** ಒಂದು ಗುಣಲಕ್ಷಣ ಅನುವಂಶತೆಯು ಇನ್ನೊಂದು ಅನುವಂಶತೆಯ ಮೇಲೆ ಪರಿಣಾಮ ಬೀರುವುದಿಲ್ಲ ಎಂಬುವುದನ್ನು ಇದು ಸೂಚಿಸುತ್ತದೆ.

ಉದಾ. ಒಂದೇ ತಾಯಿಯಿಂದ ಜನಿಸಿದ ಮಕ್ಕಳು ಬಣ್ಣ ಮತ್ತು ಆಕಾರ ಬೇರೆ ಬೇರೆ ಸೂಚಿಸುತ್ತದೆ.

**3. ಡಾರ್ವಿನ್ (Charles Darwin)** ಚಾರ್ಲ್ಸ್ ಡಾರ್ವಿನ್ 1859ರಲ್ಲಿ ಪ್ರಸ್ತಾಪಿಸಿದ "ವಿಕಾಸವಾದ" ಅಥವಾ "Evolution by Natural Selection" ಸಿದ್ಧಾಂತದವು ನೈಸರ್ಗಿಕ ಜೀವಿಗಳ ಹೇಗೆ ದೈಹಿಕತೆಯ ಲಕ್ಷಣಗಳಲ್ಲಿ ಬದಲಾಗುತ್ತಾರೆ ಎಂಬುವುದನ್ನು ನಿರೂಪಿಸಿದ್ದಾರೆ.

Downloaded From: www.kpscvaani.com

ಪುನರಾವರ್ತನೆಗೊಳಿಸಿದರೆ ಕಲಿತ ವಿಷಯವು ನೆನಪಿನಲ್ಲುಳಿಯುತ್ತದೆ ಎಂದು ಸೂಚಿಸುತ್ತದೆ.

**ಉದಾ :** ವಿದ್ಯಾರ್ಥಿಗಳಿಗೆ ಸಮಾನಾರ್ಥಕ ಶಬ್ದಗಳ ಪಟ್ಟಿಯನ್ನು ಬರೆಸಿದ ಕೆಲವು ದಿನಗಳ ನಂತರ ಪಾಠ ಬೋಧನೆಯಲ್ಲಿ ಈ ಮೊದಲೆ ಪಟ್ಟಿಯಲ್ಲಿ ನೀಡಿದ್ದ ಶಬ್ದ ಬಂದಾಗ ಮಕ್ಕಳು ಆ ಸಮಾನಾರ್ಥಕ ಶಬ್ದ / ಅದರ ಅರ್ಥವನ್ನು ಹೇಳುವರು

❖ **ಅನುಪಯೋಗ ನಿಯಮ :** ಈ ನಿಯಮದ ಪ್ರಕಾರ ಶಿಕ್ಷಕರು ವಿದ್ಯಾರ್ಥಿಗಳಿಗೆ ಕಲಿಸಿದ ವಿಷಯವನ್ನು ಬಹಳ ದಿನ/ಕಾಲದವರೆಗೆ ಪುನರಾವರ್ತನೆ ಮಾಡದಿದ್ದರೆ, ಕಲಿತ ವಿಷಯ ಮರೆತು ಹೋಗುತ್ತದೆ.

**67. ಕ್ರಮಾನುಗತ ಬೋಧನೆಯ ಇದರ ಕೊಡುಗೆಯಾಗಿದೆ**

(1) ಸಾಂಪ್ರದಾಯಿಕ ಅನುಬಂಧನ ಕಲಿಕೆ
(2) ಕ್ರಿಯಾಜನ್ಯ ಅನುಬಂಧನ ಕಲಿಕೆ
(3) ಒಳನೋಟ ಕಲಿಕೆ
(4) ಸಾಮಾಜಿಕ ಕಲಿಕೆ

**ಉತ್ತರ : (2) ಕ್ರಿಯಾಜನ್ಯ ಅನುಬಂಧನ ಕಲಿಕೆ**

❖ ಕ್ರಿಯಾಜನ್ಯ ಅನುಬಂಧನ ಕಲಿಕೆಯ ಒಂದು ಪ್ರಮುಖವಾದ ಪ್ರಕ್ರಿಯೆಯೇ **"ವರ್ತನೆ ರೂಪಿಸುವಿಕೆ"** ಇದು ಕವಿಯ ವರ್ತನೆಯಲ್ಲಿ ಅಪೇಕ್ಷಿತ ಬದಲಾವಣೆ ತರಲು ಬಳಸುವ ಪುಷ್ಠೀಕರಣ ವಿಧಾನವಾಗಿದೆ. ಇಲ್ಲಿ ಅಪೇಕ್ಷಿತ ವರ್ತನೆಯನ್ನು ಕ್ರಮೇಣವಾಗಿ ರೂಢಿಸುವಂತಹ **ಮೂಲ ಕ್ರಿಯೆಯೇ ರೂಪಿಸುವಿಕೆ** ಇಲ್ಲಿ ಪಾರಿವಾಳ ಸಂಪೂರ್ಣ ಬಿಲ್ಲೆಯನ್ನು ಕುಟುಕುವವರೆಗೆ ಕಾಯದೇ, ಮೊದಲು ಪಾರಿವಾಳ ಬಿಲ್ಲೆಯ ಕಡೆಗೆ ತಿರುಗಿದ ತಕ್ಷಣವೇ ಪುಷ್ಠೀಕರಣ ನೀಡಬೇಕು. ನಂತರ ಪಾರಿವಾಳ ಬಿಲ್ಲೆಯಕಡೆಗೆ ಒಂದೆರಡು ಹೆಜ್ಜೆ ಇಟ್ಟರೇ ಮತ್ತೇ ತಕ್ಷಣ ಪುಷ್ಠೀಕರಣ ನೀಡಲಾಗುತ್ತದೆ. ಈ ರೀತಿಯಾಗಿ ಸರಿಯಾದ ವರ್ತನೆಯನ್ನು ರೂಪಿಸುವಂತೆ ಮಾಡಲಾಗುತ್ತದೆ. ಈ ರೀತಿಯಾಗಿ ಪ್ರತಿ ಅಪೇಕ್ಷಿತ ವರ್ತನೆಗೂ ತತ್‌ಕ್ಷಣಾ ಪುಷ್ಠೀಕರಣ ನೀಡುವುದ ಕಲಿಕೆಯನ್ನು **ಸ್ಕಿನ್ನರ್**‌ರವರು ತಮ್ಮ **ಕ್ರಿಯಾಜನ್ಯ** ಕಲಿಕೆಯಲ್ಲಿ ನಿರೂಪಿಸಿದ್ದಾರೆ. ಆದ್ದರಿಂದ ಆಯ್ಕೆ (2) ಸರಿ ಉತ್ತರವಾಗಿದೆ.

**68. ಪಾವ್‌ಲೋವ್‌ರವರ ಸಾಂಪ್ರದಾಯಿಕ ಅನುಬಂಧನ ಕಲಿಕೆ ಸಿದ್ಧಾಂತದಲ್ಲಿ 'ಗಂಟೆಯ ಶಬ್ದವು'**

(1) ಸಹಜ ಉದ್ಧೀಪನ (2) ಅನುಬಂಧಿತ ಉದ್ಧೀಪನ
(3) ಸಹಜ ಅನುಕ್ರಿಯೆ (4) ಅನುಬಂಧಿತ ಅನುಕ್ರಿಯೆ

**ಉತ್ತರ : (2) ಅನುಬಂಧಿತ ಉದ್ಧೀಪನ**


❖ ಪಾವಲೋವ್ ತನ್ನ ಪ್ರಯೋಗದಲ್ಲಿ ಮೊದಲು ಕೇವಲ ಆಹಾರವನ್ನು ಮಾತ್ರ ನೀಡಿರು ತ್ತಾನೆ. ನಂತರ ಆಹಾರದ ಜೊತೆ-ಜೊತೆಗೆ ಗಂಟೆಯ ಶಬ್ದವನ್ನು ಕೂಡ ಸಹಚರ್ಯಗೊಳಿಸಿ ಅನುಬಂಧಿಸು ತ್ತಾನೆ. ನಂತರ ಕೇವಲ ಗಂಟೆಯನ್ನು ಮಾತ್ರ ಬಾರಿಸಲಾಗಿ ನಾಯಿ ಜೊಲ್ಲು ಸುರಿಸುತ್ತದೆ. ಆದ್ದರಿಂದ ನಾಯಿಯು ಗಂಟೆಯ ಶಬ್ದಕ್ಕೆ ಅನುಬಂಧಿ ಸಲ್ಪಡುತ್ತದೆ. ಆದ್ದರಿಂದ ಆಯ್ಕೆ (2) ಸರಿ ಉತ್ತರ.

**69. ಗಿಲ್‌ಫರ್ಡ್ ರವರ ಬುದ್ಧಿಶಕ್ತಿ ಮಾದರಿಯ ಮೂರು ಪ್ರಮುಖ ಆಯಾಮಗಳ ಸರಿಯಾದ ಕ್ರಮ**


(1) ವಿಷಯ ವಸ್ತುಗಳು, ಕ್ರಿಯೆಗಳು, ಉತ್ಪನ್ನಗಳು
(2) ಉತ್ಪನ್ನಗಳು, ಕ್ರಿಯೆಗಳು, ವಿಷಯ ವಸ್ತುಗಳು
(3) ಕ್ರಿಯೆಗಳು, ವಿಷಯ ವಸ್ತುಗಳು, ಉತ್ಪನ್ನಗಳು
(4) ಕ್ರಿಯೆಗಳು, ಉತ್ಪನ್ನಗಳು, ವಿಷಯ ವಸ್ತುಗಳು

**ಉತ್ತರ : (1) ವಿಷಯ ವಸ್ತುಗಳು, ಕ್ರಿಯೆಗಳು, ಉತ್ಪನ್ನಗಳು**

ಗಿಲ್‌ಫರ್ಡ್‌ರವರ ಈ ಸಿದ್ಧಾಂತವನ್ನು ಮೂರು ಆಯಾಮ ಅಥವಾ ರಚನಾತ್ಮಕ ಮಾದರಿ ಸಿದ್ಧಾಂತವೆಂದು ಕರೆಯುವರು. ಈ ಸಿದ್ಧಾಂಥದ ಪ್ರಕಾರ ಬುದ್ಧಿಶಕ್ತಿ 3 ಆಯಾಮಗಳ ವಿಶಿಷ್ಟ ಸಂಘಟನೆ ಅವುಗಳೇ ಕ್ರಿಯೆವಸ್ತು, ಉತ್ಪನ್ನಗಳಾಗಿವೆ. ಈ ಮೂರು ಆಯಾಮಗಳನ್ನೇ ಮುಂದೆ ವರ್ಗೀಕರಣ ಮಾಡಲಾಗಿದೆ. ಪ್ರತಿಯೊಂದು ಆಯಾಮ ದಲ್ಲೂ 6 ಉಪ ಆಯಾಮಗಳನ್ನು ಮಾಡಲಾಗಿದೆ.




ಯಾವುದೇ ಒಂದು ವಿಷಯವನ್ನು ಒಂದು ನಿರ್ದಿಷ್ಟ ವಸ್ತುವಿನೊಂದಿಗೆ ಅನ್ವಯಿಸಿದಾಗ ಆ ಕ್ರಿಯೆ ಯಾವುದಾದರೂ ರೂಪದಲ್ಲಿ ಆರು ರೀತಿಯ ಉತ್ಪನ್ನಗಳಾಗಿ ಮಾರ್ಪಾಡುತ್ತದೆ.




Downloaded From : www.kpscvaani.com

ಎರಡು ಭಾಗಗಳಾಗಿ ವಿಭಾಗಿಸಲಾಯಿತು: ಪಶ್ಚಿಮ ಬಂಗಾಳ ಮತ್ತು ಪೂರ್ವ ಬಂಗಾಳ

ಸಿ. **ಭಾರತ ಒಕ್ಕೂಟದೊಂದಿಗೆ ಜುನಾಗಢ ಸೇರ್ಪಡೆ** ಜುನಾಗಢದ ನವಾಬ್ 1947 ಆಗಸ್ಟ್ 15 ರಂದು ಪಾಕಿಸ್ತಾನ ಸೇರುವುದು ಎಂದು ಘೋಷಿಸಿದನು. ಆದರೆ ಅಲ್ಲಿಯ ಪ್ರಜೆಗಳು ಭಾರತಕ್ಕೆ ಸೇರಲು ಬಯಸಿದರು. 1948ರಲ್ಲಿ ಭಾರತವು ಜುನಾಗಢದ ಮೇಲೆ ನಿಯಂತ್ರಣ ಪಡೆದಿತು. ಜುನಾಗಢ ಭಾರತೀಯ ಒಕ್ಕೂಟದ ಭಾಗವಾಯಿತು.

ಡಿ. **ಸ್ವರಾಜ್ ಪಕ್ಷದ ಸ್ಥಾಪನೆ:** ಸ್ವರಾಜ್ ಪಕ್ಷವನ್ನು Congress-Khilafat Swaraj Party ಎಂದು ಕರೆಯಲಾಗಿದ್ದು, ಈ ಪಕ್ಷವನ್ನು 1 ಜನವರಿ 1923 ರಂದು ಚಿತ್ತರಂಜನ್ ದಾಸ್ ಮತ್ತು ಮೋತಿಲಾಲ್ ನೆಹರು ರಚಿಸಿದ್ದರು. ಈ ಪಕ್ಷವು ಬ್ರಿಟಿಷ್ ಸರ್ಕಾರದಿಂದ ಭಾರತೀಯರಿಗೆ ಹೆಚ್ಚು ರಾಜಕೀಯ ಮತ್ತು ಸ್ವ-ಸರ್ಕಾರದ ಹಕ್ಕು ಪಡೆಯುವ ಗುರಿಯನ್ನು ಹೊಂದಿತ್ತು. ಸ್ವರಾಜ್ ಪಕ್ಷವು ರಾಷ್ಟ್ರೀಯ ಕಾಂಗ್ರೆಸ್‌ನ 1922 ರ ಡಿಸೆಂಬರ್ ತಿಂಗಳಲ್ಲಿ ನಡೆದ ವಾರ್ಷಿಕ ಸಮ್ಮೇಳನದ ನಂತರ ಸ್ಥಾಪಿತವಾಯಿತು.

**94. ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ಅವುಗಳಿಗೆ ಸಂಬಂಧಿಸಿದ ಸರಿಯಾದ ಆಯ್ಕೆಯನ್ನು ಆರಿಸಿ.**

ಎ. ಭೂಕಂದಾಯ ವಸೂಲಿಯನ್ನು ನೋಡಿಕೊಳ್ಳಲು "ಕಡಿತವೆರ್ಗಡೆ" ಎಂಬ ಅಧಿಕಾರಿಯನ್ನು ನೇಮಿಸಿದ್ದರು.

ಬಿ. ಅವರು ಲಕ್ಕುಂಡಿ ಹಾಗೂ ಸೂಡಿಗಳಲ್ಲಿ ಟಂಕಸಾಲೆಗಳನ್ನು ಸ್ಥಾಪಿಸಿದ್ದರು.

**ಈ ಮೇಲಿನ ಹೇಳಿಕೆಗಳು ಸಂಬಂಧಿಸಿರುವುದು**

(1) ರಾಷ್ಟ್ರಕೂಟರು
(2) ಕಲ್ಯಾಣದ ಚಾಲುಕ್ಯರು
(3) ಹೊಯ್ಸಳರು
(4) ಗಂಗರು

**ಉತ್ತರ : (2) ಕಲ್ಯಾಣದ ಚಾಲುಕ್ಯರು**

- ❖ ಕಲ್ಯಾಣ ಚಾಲುಕ್ಯರು ಭಾರತದ ದಕ್ಷಿಣ ಭಾಗದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಸ್ಥಾಪನೆಯಾದ ಪ್ರಸಿದ್ಧ ರಾಜ ಮನೆತನವಾಗಿದೆ.
- ❖ ಇವರು ಭೂಕಂದಾಯ ವಸೂಲಿಯನ್ನು ನೋಡಿಕೊಳ್ಳಲು "ಕಡಿತವೆರ್ಗಡೆ" ಎಂಬ ಅಧಿಕಾರಿಯನ್ನು ನೇಮಿಸಿದ್ದರು.
- ❖ ಇವರು ಲಕ್ಕುಂಡಿ ಹಾಗೂ ಸೂಡಿಗಳಲ್ಲಿ ಟಂಕಸಾಲೆ (ಮುದ್ರಣಾಲಯಗಳು/ಮೈಂಟ್‌ಗಳು)ಗಳನ್ನು ಸ್ಥಾಪಿಸಿದ್ದರು.

**95. ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ಸರಿಯಾದ ಆಯ್ಕೆಯನ್ನು ಆರಿಸಿ.**

ಎ. ಗೌತಮ ಬುದ್ಧನ ಮೊಟ್ಟ ಮೊದಲ ಬೋಧನೆಯು 'ಧರ್ಮಚಕ್ರ ಪ್ರವರ್ತನ' ಎಂದು ಕರೆಯಲ್ಪಟ್ಟಿದೆ.

ಬಿ. ಗೌತಮ ಬುದ್ಧನ ಪಂಚ ಪ್ರತಿಜ್ಞೆಗಳನ್ನು ಬೋಧಿಸಿದನು.

ಸಿ. ವರ್ಧಮಾನ ಮಹಾವೀರನು ಅಷ್ಟಾಂಗಿಕ ಮಾರ್ಗವನ್ನು ಬೋಧಿಸಿದನು

ಡಿ. ವರ್ಧಮಾನ ಮಹಾವೀರನು ಗುಜರಾತಿನ ಪಾವಾಪುರಿ ಎಂಬಲ್ಲಿ ನಿರ್ವಾಣವನ್ನು ಹೊಂದಿದನು.

(1) ಎ ಮತ್ತು ಬಿ ಸರಿ
(2) ಎ ಸರಿ
(3) ಎ ಬಿ ಮತ್ತು ಸಿ ಸರಿ
(4) ಎ ಬಿ ಸಿ ಮತ್ತು ಡಿ ಸರಿ

**ಉತ್ತರ : (2) ಎ ಸರಿ**

- ❖ ಗೌತಮ ಬುದ್ಧನೆಂದೇ ಪ್ರಖ್ಯಾತನಾದ **ಸಿದ್ಧಾರ್ಥನು ಸಾ.ಶ.ಪೂ. 6ನೆಯ ಶತಮಾನದಲ್ಲಿ** ಜನಿಸಿದನು.
- ❖ ತಂದೆ ಶುದ್ಧೋದನನು ಶಾಕ್ಯ ಗಣ – ಸಂಘದ ರಾಜ.
- ❖ ಸಿದ್ಧಾರ್ಥನು ರಾಜರ ಭೋಗವನ್ನು ಹಾಗೂ ಸಂಸಾರದ ಸುಖವನ್ನು ತ್ಯಜಿಸಿ ಸನ್ಯಾಸಿಯಾದನು.
- ❖ ಪ್ರಚಲಿತ ಬದುಕಿನ ದಾರಿಗಳ ನಿರರ್ಥಕತೆಯನ್ನು ಕಂಡು ಸತ್ಯದ ಹುಡುಕಾಟದಲ್ಲಿ ನಿರತನಾಗಿ ಜ್ಞಾನೋದಯವನ್ನು ಪಡೆದು ಬುದ್ಧನಾದನು.
- ❖ ಜ್ಞಾನೋದಯದ ನಂತರ ಈತ ಮೊದಲಿಗೆ ತೆರಳಿದ್ದು **ಬನಾರಸ್ ಸಮೀಪದ ಸಾರನಾಥಕ್ಕೆ.** ಇಲ್ಲಿನ ಜಿಂಕೆವನದಲ್ಲಿ ಈತನು ಮೊಟ್ಟಮೊದಲ ಬೋಧನೆಯನ್ನು ಮಾಡಿದನು. ಇದು **"ಧರ್ಮ ಚಕ್ರ ಪ್ರವರ್ತನ"**ವೆಂದು ಕರೆಯಲ್ಪಟ್ಟಿದೆ.
- ❖ ಇಲ್ಲಿ ಬುದ್ಧನು **ಚತುರ್ ಆರ್ಯಸತ್ಯ ಹಾಗೂ ಅಷ್ಟಾಂಗಿಕ ಮಾರ್ಗವನ್ನು** ಬೋಧಿಸಿದನು.
- ❖ ಲೋಕವೆಲ್ಲ , ದುಃಖ ಹಾಗೂ ನೋವಿನಿಂದ ಆವರಿಸಿದೆ. ದುಃಖದ ಮೂಲವನ್ನು, ಅದರ ಚತುರ್‌ಆರ್ಯ ಸತ್ಯವು ವಿವರಿಸುತ್ತದೆ.
- ❖ **ಆಸೆಯೇ ದುಃಖಕ್ಕೆ ಮೂಲಕಾರಣ** ಎಂಬ ಸತ್ಯವನ್ನು ಬುದ್ಧನು ಕಂಡನು. ಅತಿಯಾದ ಆಸೆಯ ವಿಮುಕ್ತಿಯಿಂದ ಮಾತ್ರ ನೆಮ್ಮದಿಯ ಬದುಕು ಸಾಧ್ಯ.
- ❖ ಆಸೆಯ ವಿಮುಕ್ತಿಗಾಗಿ ಅಷ್ಟಾಂಗಿಕ ಮಾರ್ಗವನ್ನು ಬುದ್ಧನು ಬೋಧಿಸಿದನು. ಇದನ್ನು **"ಮಧ್ಯಮ ಪಥ"**ವೆಂದು ಕರೆಯುವರು,

Downloaded From: www.kpsvaani.com

❖ ಕಾಂಗ್ರೆಸ್ ಇಂದು ಭಾರತದಲ್ಲಿ ಪೂರ್ಣ ಪ್ರಜಾಪ್ರಭುತ್ವಕ್ಕಾಗಿ ನಿಂತಿದೆ ಹಾಗೂ ಪ್ರಜಾಪ್ರಭುತ್ವಕ್ಕಾಗಿಯೇ ಹೋರಾಡುತ್ತದೆಯೇ ಹೊರತು ಸಮಾಜವಾದಕ್ಕಲ್ಲ – **ಜವಾಹರಲಾಲ್ ನೆಹರೂ**

**99. 'ಸೋಷಿಯಲ್ ಕಾಂಟ್ರಾಕ್ಟ್' ಎಂಬ ಗ್ರಂಥವನ್ನು ರಚಿಸಿದವರು**

(1) ರೂಸೋ (2) ವಾಲ್ಟೈರ್

(3) ಮಾಂಟೆಸ್ಕ್ಯೂ (4) ಅರಿಸ್ಟಾಟಲ್

**ಉತ್ತರ : (1) ರೂಸೋ**

❖ "**ಸಾಮಾಜಿಕ ಒಪ್ಪಂದ**" **(Social Contract)** ಎಂಬ ಕೃತಿಯನ್ನು ಫ್ರೆಂಚ್ ತಾತ್ವಿಕರಾದ ಜಾನ್ ಜಾಕ್ ರೂಸೋ ಅವರು 1762ರಲ್ಲಿ ಬರೆದರು.

❖ **ಮೂಲ ಶೀರ್ಷಿಕೆ:** ಈ ಕೃತಿಯ ಮೂಲ ಫ್ರೆಂಚ್ ಶೀರ್ಷಿಕೆ "Du Contrat Social, ou Principes du Droit Politique."

❖ **ಮುಖ್ಯ ಪರಿಕಲ್ಪನೆ:** "ಸಮಾಜದಲ್ಲಿ ಜನರು ಪರಸ್ಪರ ಒಪ್ಪಂದ ಮಾಡಿಕೊಂಡು ರಾಜ್ಯವನ್ನು ರಚಿಸುತ್ತಾರೆ" ಎಂಬುದೇ **"ಸಾಮಾಜಿಕ ಒಪ್ಪಂದ"** ತತ್ತ್ವದ ಮೂಲ.

❖ "**ಸಾಮಾನ್ಯ ಇಚ್ಛಾಶಕ್ತಿ**" **(General Will):** ಜನರ ಒಟ್ಟಾರೆ ಹಿತಾಸಕ್ತಿ ಮತ್ತು ಸರ್ವಜನ ಹಿತವನ್ನು ಪ್ರತಿನಿಧಿಸುವ ಶಕ್ತಿಯೇ **"ಸಾಮಾನ್ಯ ಇಚ್ಛಾಶಕ್ತಿ"** ಎಂದು ರೂಸೋ ಹೇಳಿದ್ದಾರೆ.

❖ **ಸಾರ್ವಭೌಮತೆ:** ನಿಜವಾದ ಅಧಿಕಾರ ಜನರಲ್ಲೇ ಇದೆ; ರಾಜ ಅಥವಾ ಸರ್ಕಾರ ಜನರ ಪ್ರತಿನಿಧಿಯಷ್ಟೆ ಎಂದು ರೂಸೋ ವಾದಿಸುತ್ತಾರೆ.

❖ **ಸ್ವಾತಂತ್ರ್ಯ ಮತ್ತು ಸಮಾನತೆ:** ರೂಸೋ ಪ್ರಕಾರ ಪ್ರತಿಯೊಬ್ಬರೂ ಜನ್ಮತಃ ಸ್ವತಂತ್ರರು ಮತ್ತು ಸಮಾನರು. ರಾಜ್ಯವು ಈ ಸ್ವಾತಂತ್ರ್ಯವನ್ನು ಕಾಪಾಡಬೇಕಾಗಿದೆ.

❖ **ರಾಜ್ಯದ ಉದ್ದೇಶ:** ಜನರ ಹಿತಕ್ಕಾಗಿ, ಅವರ ಒಪ್ಪಂದದ ಆಧಾರದ ಮೇಲೆ ಕೆಲಸ ಮಾಡುವ ಸಂಸ್ಥೆಯೇ ರಾಜ್ಯ.

❖ **ರಾಜನ ವಿರೋಧ:** ರೂಸೋ ರಾಜತಂತ್ರ ಮತ್ತು ಸ್ವೈರಾಡಳಿತವನ್ನು ವಿರೋಧಿಸಿದರು; ಜನಪ್ರಭುತ್ವವನ್ನು ಪ್ರೋತ್ಸಾಹಿಸಿದರು.

❖ **ಕ್ರಾಂತಿಯ ಪ್ರೇರಣೆ:** ಈ ಕೃತಿ ಫ್ರೆಂಚ್ ಕ್ರಾಂತಿಯ (French Revolution) ಪ್ರಮುಖ ಬೌದ್ಧಿಕ ಪ್ರೇರಣೆಯಾಗಿ ಕೆಲಸ ಮಾಡಿತು.

❖ **ತತ್ತ್ವದ ಸಾರ:** **"ಮಾನವನು ಸ್ವತಂತ್ರನಾಗಿ ಹುಟ್ಟಿದ್ದಾನೆ, ಆದರೆ ಎಲ್ಲೆಡೆ ಸರಪಳಿಗಳಲ್ಲಿ ಬಂಧಿತನಾಗಿದ್ದಾನೆ"** ಎಂಬ ರೂಸೋ ಅವರ ಪ್ರಸಿದ್ಧ ವಾಕ್ಯ ಈ ಕೃತಿಯ ಆತ್ಮವನ್ನು ವ್ಯಕ್ತಪಡಿಸುತ್ತದೆ.

**100. ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ತಪ್ಪಾಗಿರುವ ಹೇಳಿಕೆಯನ್ನು ಆರಿಸಿ.**

(1) 1617 ರಲ್ಲಿ ಸರ್ ಥಾಮಸ್ ರೋ ಜಹಾಂಗೀರನ ಆಸ್ಥಾನಕ್ಕೆ ಭೇಟಿ ನೀಡಿದನು.

(2) ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ತನ್ನ ಪ್ರಪ್ರಥಮ ಫ್ಯಾಕ್ಟರಿಯನ್ನು 1668 ರಲ್ಲಿ ಮಚಲಿಪಟ್ಟಣದಲ್ಲಿ ಆರಂಭಿಸಿತು.

(3) ಮೊದಲ ಕಾರ್ನಾಟಿಕ್ ಯುದ್ಧವನ್ನು ಅಂತ್ಯಗೊಳಿಸಿದ 'ಎಕ್ಸ್-ಲಾ-ಚಾಪೆಲ್' ಒಪ್ಪಂದವು ಫ್ರಾನ್ಸ್ ಮತ್ತು ಇಂಗ್ಲೆಂಡಿನ ನಡುವೆ ನಡೆಯಿತು.

(4) ಎರಡನೇ ಷಾ ಅಲಂ ಬಂಗಾಳದ ಮೇಲಿನ 'ದಿವಾನಿ ಹಕ್ಕನ್ನು' ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೆ ನೀಡಿದನು.

**ಉತ್ತರ : (2) ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ತನ್ನ ಪ್ರಪ್ರಥಮ ಫ್ಯಾಕ್ಟರಿಯನ್ನು 1668 ರಲ್ಲಿ ಮಚಲಿಪಟ್ಟಣದಲ್ಲಿ ಆರಂಭಿಸಿತು.**

❖ 1617 ರಲ್ಲಿ ಸರ್ ಥಾಮಸ್ ರೋ ಜಹಾಂಗೀರನ ಆಸ್ಥಾನಕ್ಕೆ ಭೇಟಿ ನೀಡಿದನು.

❖ ಮೊದಲ ಕಾರ್ನಾಟಿಕ್ ಯುದ್ಧವನ್ನು ಅಂತ್ಯಗೊಳಿಸಿದ 'ಎಕ್ಸ್-ಲಾ-ಚಾಪೆಲ್' ಒಪ್ಪಂದವು ಫ್ರಾನ್ಸ್ ಮತ್ತು ಇಂಗ್ಲೆಂಡಿನ ನಡುವೆ ನಡೆಯಿತು.

❖ ಎರಡನೇ ಷಾ ಅಲಂ ಬಂಗಾಳದ ಮೇಲಿನ 'ದಿವಾನಿ ಹಕ್ಕನ್ನು' ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೆ ನೀಡಿದನು.

❖ ಆಯ್ಕೆ(2) ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ತನ್ನ ಪ್ರಪ್ರಥಮ ಫ್ಯಾಕ್ಟರಿಯನ್ನು 1668 ರಲ್ಲಿ ಮಚಲಿಪಟ್ಟಣದಲ್ಲಿ ಆರಂಭಿಸಿತು. ಎಂಬುವುದು ತಪ್ಪಾಗಿದೆ. ವಾಸ್ತವವಾಗಿ, ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು 1668 ರಲ್ಲಿ ತನ್ನ ಮೊದಲ ಫ್ಯಾಕ್ಟರಿಯನ್ನು ಸೂರತ್ ನಗರದಲ್ಲಿಯೇ ಸ್ಥಾಪಿಸಿತು. ಮಚಲಿ ಪಟ್ಟಣದಲ್ಲಿ (Masulipatnam) ಫ್ಯಾಕ್ಟರಿ ಅದರ ನಂತರ 1669 ರಲ್ಲಿ ಸ್ಥಾಪಿಸಲಾಯಿತು. ಕಂಪನಿಯನ್ನು 1664 ರಲ್ಲಿ Jean-Baptiste Colbert ಆಧಾರದ ಮೇಲೆ ಸ್ಥಾಪಿಸಲಾಗಿತ್ತು ಮತ್ತು Francois Caron ನೇತೃತ್ವದ'expedition 1667 ರಲ್ಲಿ ಬರುವ ಮೂಲಕ, 1668 ರಲ್ಲಿ ಸೂರತಿನಲ್ಲಿ ಮೊದಲ ಫ್ಯಾಕ್ಟರಿಯನ್ನು ಸ್ಥಾಪಿಸಿದರು. ನಂತರ 1669 ರಲ್ಲಿ ಮಚಲಿ ಪಟ್ಟಣದಲ್ಲಿ ಎರಡನೇ ಫ್ಯಾಕ್ಟರಿ ಸ್ಥಾಪಿಸಲಾಯಿತು.

❖ ಆದ್ದರಿಂದ ಆಯ್ಕೆ 1,3,4 ಸರಿಯಾಗಿದ್ದು, ಆಯ್ಕೆ 2 ಮಾತ್ರ ತಪ್ಪಾಗಿದೆ.

Downloaded From: www.nppsc4all.com

(2) ಎರಡು ಹೇಳಿಕೆಗಳು ಮಾತ್ರ ಸರಿಯಾಗಿದೆ
(3) ಮೂರು ಹೇಳಿಕೆಗಳು ಮಾತ್ರ ಸರಿಯಾಗಿದೆ
(4) ಎಲ್ಲಾ ನಾಲ್ಕು ಹೇಳಿಕೆಗಳು ಸರಿಯಾಗಿವೆ

**ಉತ್ತರ : (2) ಎರಡು ಹೇಳಿಕೆಗಳು ಮಾತ್ರ ಸರಿಯಾಗಿದೆ**

❖ ಕನಿಷ್ಠ ಕೂಲಿ ಕಾಯ್ದೆಯು 1948ರಲ್ಲಿ ಜಾರಿಗೆ ಬಂದಿತು: ಈ ಹೇಳಿಕೆ ಸರಿಯಾಗಿದ್ದು, ಕನಿಷ್ಠ ಕೂಲಿ ಕಾಯ್ದೆ (Minimum Wages Act) ಮಾರ್ಚ್ 15, 1948 ರಂದು ಜಾರಿಗೆ ಬಂದಿತು. ಈ ಕಾಯ್ದೆಯು ಕಾರ್ಮಿಕರಿಗೆ ನಿರ್ದಿಷ್ಟ ಉದ್ಯೋಗಗಳಲ್ಲಿ, ಕನಿಷ್ಠ ಕಾನೂನಾದಿ ವೇತನವನ್ನು ನಿಗದಿಪಡಿಸುವ ಮೂಲಕ ಅವರ ಶೋಷಣೆಯನ್ನು ತಡೆಯಲು ಉದ್ದೇಶಿಸಲಾಗಿದೆ.

❖ 86ನೇ ತಿದ್ದುಪಡಿ ಕಾಯ್ದೆ 2002 – **ಈ ತಿದ್ದುಪಡಿಯ ಮೂಲಕ,**

1) 21ಎ ವಿಧಿಯನ್ನು ಅಳವಡಿಸಿ **6 ವರ್ಷದಿಂದ 14 ವರ್ಷಗಳವರೆಗಿನ ಮಕ್ಕಳಿಗೆ ಶಿಕ್ಷಣವನ್ನು** ಮೂಲಭೂತ ಹಕ್ಕನ್ನಾಗಿ ಮಾಡಲಾಯಿತು.
2) ರಾಜ್ಯ ನಿರ್ದೇಶಕ ತತ್ವಗಳಿಗೆ ಸಂಬಂಧಿಸಿದ 45ನೇ ವಿಧಿಯಡಿಯಲ್ಲಿನ ವಿಷಯವನ್ನು ಈ ರೀತಿ ಬದಲಾಯಿಸಲಾಯಿತು 'ಆರು ವರ್ಷದ ವರೆಗಿನ ಎಲ್ಲ ಮಕ್ಕಳಿಗೆ ಬಾಲ್ಯ, ಪೋಷಣೆ ಮತ್ತು ಶಿಕ್ಷಣವನ್ನು ನೀಡಲು ರಾಜ್ಯವು ಪ್ರಯತ್ನಿಸಬೇಕು' ಈ ತಿದ್ದುಪಡಿಗಿಂತ ಮುಂಚಿತವಾಗಿ **45ನೇ ವಿಧಿಯು 14 ವರ್ಷ** ವಯಸ್ಸಿನವರೆಗಿನ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಲು ರಾಜ್ಯವು ಪ್ರಯತ್ನಿಸಬೇಕು' ಎಂದು ಸ್ಪಷ್ಟಪಡಿಸಿತ್ತು.
3) **51ಎ ವಿಧಿಗೆ** ಇನ್ನೊಂದು (ಹನ್ನೊಂದನೆಯ) ಮೂಲಭೂತ ಕರ್ತವ್ಯವನ್ನು ಸೇರಿಸಲಾಯಿತು. ಆ ಪ್ರಕಾರ '6 ರಿಂದ 14 ವರ್ಷಗಳವರೆಗಿನ ಮಕ್ಕಳಿಗೆ ಶಿಕ್ಷಣ ಪಡೆಯುವ ಅವಕಾಶ ಕಲ್ಪಿಸುವುದು ತಂದೆ, ತಾಯಿ ಅಥವಾ ಪೋಷಕರ ಮೂಲಭೂತ ಕರ್ತವ್ಯ. ಈ ಹೇಳಿಕೆಯೂ ಸರಿಯಾಗಿದೆ.

❖ ಭಾರತ ಸಂವಿಧಾನದ 352 ನೇ ವಿಧಿಯು **ರಾಜ್ಯ** ತುರ್ತುಪರಿಸ್ಥಿಗೆ ಸಂಬಂಧಿಸಿದೆ. ಎಂಬ ಹೇಳಿಕೆ ತಪ್ಪಾಗಿದೆ.

❖ **352. ರಾಷ್ಟ್ರೀಯ** ತುರ್ತು ಪರಿಸ್ಥಿತಿ ಘೋಷಣೆ 356. ರಾಜ್ಯದಲ್ಲಿ ಸಂವಿಧಾನಾತ್ಮಕ ಯಂತ್ರ, ಕುಸಿದು ಬಿದ್ದಾಗ ರಾಷ್ಟ್ರಾಧ್ಯಕ್ಷರ ಆಡಳಿತವನ್ನು ಘೋಷಿಸುವುದಕ್ಕೆ ಸಂಬಂಧಿಸಿದ ಉಪಬಂಧಗಳು

❖ 1947 ರ ಡಿಸೆಂಬರ್ 13 ರಂದು 'ಧ್ಯೇಯಗಳ ನಿರ್ಣಯ' ವನ್ನು ಮಂಡಿಸಲಾಯಿತು. ಎಂಬ ಹೇಳಿಕೆ ತಪ್ಪಾಗಿದೆ.

❖ ಪಂಡಿತ್ ಜವಹರಲಾಲ್ ನೆಹರುರವರು 13–12–1946 ರಂದು ಸಂವಿಧಾನ ರಚನಾ ಸಭೆಯಲ್ಲಿ ಧ್ಯೇಯಗಳ ನಿರ್ಣಯವನ್ನು ಮಂಡಿಸಿದರು. ಈ ನಿರ್ಣಯುವನ್ನು 22–01–1947ರಂದು ಅಳವಡಿಸಿಕೊಳ್ಳಲಾಯಿತು. ಧ್ಯೆಯಗಳ ನಿರ್ಣಯವು ಸಂವಿಧಾನಿಕ ಸಂರಚನೆಯ ತತ್ವವನ್ನು ಸಾರುತ್ತದೆ. ಧ್ಯೆಯಗಳ ನಿರ್ಣಯವು ಭಾರತ ಸಂವಿಧಾನದ ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ. ಇದು ಭಾರತವನ್ನು ಒಂದು ಸಾರ್ವಭೌಮ, ಪ್ರಜಾಸತ್ತಾತ್ಮಕ ಗಣರಾಜ್ಯ ಎಂದು ಘೋಷಿಸುತ್ತದೆ.

**106. ಕೆಳಗಿನವುಗಳಲ್ಲಿ ತಪ್ಪಾಗಿರುವ ಜೋಡಿಯನ್ನು ಗುರುತಿಸಿ.**
(1) ಸಮಾನತೆಯ ಹಕ್ಕು – 14 ರಿಂದ 18 ನೆ ವಿಧಿ
(2) ಧಾರ್ಮಿಕ ಸ್ವಾತಂತ್ರ್ಯದ ಹಕ್ಕು – 25 ರಿಂದ 28 ನೇ ವಿಧಿ
(3) ಸ್ವಾತಂತ್ರ್ಯದ ಹಕ್ಕು – 19 ರಿಂದ 21 ನೇ ವಿಧಿ
(4) ಶೋಷಣೆಯ ವಿರುದ್ಧದ ಹಕ್ಕು – 23 ಮತ್ತು 24 ನೇ ವಿಧಿ

**ಉತ್ತರ : (3) ಸ್ವಾತಂತ್ರ್ಯದ ಹಕ್ಕು – 19 ರಿಂದ 21 ನೇ ವಿದಿ**

❖ ವ್ಯಕ್ತಿಯ ವ್ಯಕ್ತಿತ್ವದ ವಿಕಸನಕ್ಕೆ ಅಗತ್ಯವಾದ ಸಾಮಾಜಿಕ ಮತ್ತು ರಾಜಕೀಯ ವಾತಾವರಣವನ್ನೇ ಮೂಲಭೂತ ಹಕ್ಕುಗಳು ಎಂದು ಕರೆಯುತ್ತಾರೆ. ಸಮಾಜದಲ್ಲಿ ಮನುಷ್ಯನು ನಾಗರೀಕ ಜೀವನ ನಡೆಸಲು ಮೂಲಭೂತ ಹಕ್ಕುಗಳು ಅತ್ಯವಶ್ಯಕ. ಈ ಹಕ್ಕುಗಳು ಪ್ರಜಾಪ್ರಭುತ್ವದ ಯಶಸ್ಸಿಗೆ ಅಗತ್ಯವಾದವುಗಳು. ನಮ್ಮ ಸಂವಿಧಾನದ 3ನೇ ಭಾಗದಲ್ಲಿ 7 ಮೂಲಭೂತ ಹಕ್ಕುಗಳನ್ನು ಅಳವಡಿಸಲಾಗಿತ್ತು. ಆದರೆ ಸಂವಿಧಾನದ 44ನೇ ತಿದ್ದುಪಡಿಯಿಂದಾಗಿ ಆಸ್ತಿ ಹಕ್ಕನ್ನು ರದ್ದು ಪಡಿಸಲಾಗಿದೆ. ಪ್ರಸ್ತುತ 6 ಮೂಲಭೂತ ಹಕ್ಕುಗಳಿವೆ.

**14:–** ಕಾನೂನಿನ ಮುಂದೆ ಎಲ್ಲರೂ ಸಮಾನರು
**15:–** ಧರ್ಮ, ಜನಾಂಗ, ಜಾತಿ, ಲಿಂಗ ಅಥವಾ ಜನ್ಮಸ್ಥಳ ಇವುಗಳ ಆಧಾರದ ಮೇಲೆ ತಾರತಮ್ಯ ನಿರ್ಬಂಧ
**16:–** ಸಾರ್ವಜನಿಕ ನೇಮಕಾತಿ ವಿಷಯದಲ್ಲಿ ಸಮಾನ ಅವಕಾಶ
**17:–** ಅಸ್ಪೃಶ್ಯತಾ ನಿವಾರಣೆ

Downloaded From: www.kpscvaani.com

**128. KPTCL ನ ವಿಸ್ತೃತ ರೂಪ**

1) ಕರ್ನಾಟಕ ಪವರ್ ಟ್ರಾನ್ಸ್‌ಮಿಷನ್ ಕಾರ್ಪೊರೇಷನ್ ಲಿಮಿಟೆಡ್
2) ಕರ್ನಾಟಕ ಪವರ್ ಟ್ರಾನ್ಸ್‌ಪೋರ್ಟೇಷನ್ ಕಾರ್ಪೊರೇಷನ್ ಲಿಮಿಟೆಡ್
3) ಕರ್ನಾಟಕ ಪವರ್ ಟ್ರಾನ್ಸ್‌ಮಿಷನ್ ಕಂಪನಿ ಲಿಮಿಟೆಡ್
4) ಕರ್ನಾಟಕ ಪವರ್ ಟ್ರಾನ್ಸ್‌ಪೋರ್ಟೇಷನ್ ಕಂಪನಿ ಲಿಮಿಟೆಡ್

**ಉತ್ತರ : 1) ಕರ್ನಾಟಕ ಪವರ್ ಟ್ರಾನ್ಸ್‌ಮಿಷನ್ ಕಾರ್ಪೊರೇಷನ್ ಲಿಮಿಟೆಡ್**

- ❖ KPTCL: Karnataka Power Transmission Corporation Limited)
- ❖ ಕರ್ನಾಟಕ ಪವರ್ ಟ್ರಾನ್ಸ್‌ಮಿಷನ್ ಕಾರ್ಪೊರೇಷನ್ ಲಿಮಿಟೆಡ್ – ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು 01–08–1999 ರಲ್ಲಿ ಸ್ಥಾಪಿಸಲ್ಪಟ್ಟಿದೆ
- ❖ **ಪ್ರಧಾನ ಕಚೇರಿ:** ಬೆಂಗಳೂರು
- ❖ **ಅಧ್ಯಕ್ಷರು:** ಮುಖ್ಯಮಂತ್ರಿಗಳಾಗಿರುತ್ತಾರೆ.
- ❖ ಅಂಗಸಂಸ್ಥೆಗಳು:

1. MESC  2.BESC
3. HESC  4. KESC(GESC)
5. CESC

ಆದ್ದರಿಂದ ಆಯ್ಕೆ (2) ಸರಿಯಾದ ಉತ್ತರವಾಗಿದೆ.

**129. ಕೆಳಗಿನವುಗಳಲ್ಲಿ ತಪ್ಪಾದ ಜೋಡಿಯನ್ನು ಆಯ್ಕೆ ಮಾಡಿ**

(1) 1ನೇ ಪಂಚವಾರ್ಷಿಕ ಯೋಜನೆ – 1951–56
(2) 5ನೇ ಪಂಚವಾರ್ಷಿಕ ಯೋಜನೆ – 1974–79
(3) 6ನೇ ಪಂಚವಾರ್ಷಿಕ ಯೋಜನೆ – 1980–85
(4) 12ನೇ ಪಂಚವಾರ್ಷಿಕ ಯೋಜನೆ–2012–17

**ಉತ್ತರ :(2)5ನೇ ಪಂಚವಾರ್ಷಿಕ ಯೋಜನೆ– 1974–79**

- ❖ ದೇಶದ ಆರ್ಥಿಕ ಚಟುವಟಿಕೆಗಳನ್ನು ಸಂಬಂಧವಾಗಿ ಯೋಜಿಸಿ ತನ್ಮೂಲಕ ಉತ್ಪಾದನೆಯನ್ನು ಹೆಚ್ಚಿಸಿ ಜನರ ಜೀವನ ಮಟ್ಟ ಹೆಚ್ಚಿಸುವುದೇ ಯೋಜನೆಯಾಗಿದೆ.
- ❖ ಒಟ್ಟು ಇಲ್ಲಿಯವರೆಗೆ ಹನ್ನೆರಡು ಪಂಚವಾರ್ಷಿಕ ಯೋಜನೆಗಳಾಗಿವೆ.

1. 1ನೇ ಪಂಚವಾರ್ಷಿಕ ಯೋಜನೆ 1951 – 1956
2. 2ನೇ ಪಂಚವಾರ್ಷಿಕ ಯೋಜನೆ 1956 – 1961
3. 3ನೇ ಪಂಚವಾರ್ಷಿಕ ಯೋಜನೆ 1961 – 1966
4. 4ನೇ ಪಂಚವಾರ್ಷಿಕ ಯೋಜನೆ 1969 – 1974
5. 5ನೇ ಪಂಚವಾರ್ಷಿಕ ಯೋಜನೆ 1974 – 1978
6. 6ನೇ ಪಂಚವಾರ್ಷಿಕ ಯೋಜನೆ 1980 – 1985
7. 7ನೇ ಪಂಚವಾರ್ಷಿಕ ಯೋಜನೆ 1985 – 1990
8. 8ನೇ ಪಂಚವಾರ್ಷಿಕ ಯೋಜನೆ 1992 – 1997
9. 9ನೇ ಪಂಚವಾರ್ಷಿಕ ಯೋಜನೆ 1997 – 2002
10. 10ನೇ ಪಂಚವಾರ್ಷಿಕ ಯೋಜನೆ 2002 – 2007
11. 11ನೇ ಪಂಚವಾರ್ಷಿಕ ಯೋಜನೆ 2007 – 2012
12. 12ನೇ ಪಂಚವಾರ್ಷಿಕ ಯೋಜನೆ 2012 – 2017

- ❖ 2014ರಿಂದ ನೀತಿ ಆಯೋಗ ಜಾರಿಗೆ ಬಂದಿತು.
- ❖ ಪಂಚವಾರ್ಷಿಕ ಯೋಜನೆ 12ನೇಯದು ಕೊನೆಯಾಯಿತು.

**130. ಪಟ್ಟಿ–1 ನ್ನು ಪಟ್ಟಿ–2 ರೊಂದಿಗೆ ಹೊಂದಿಸಿ ಮತ್ತು ಸರಿಯಾದ ಉತ್ತರವನ್ನು ಆರಿಸಿ.**

| ಪಟ್ಟಿ–1 | ಪಟ್ಟಿ–2 |
|---|---|
| **A.** ನೀಲಿ ಕ್ರಾಂತಿ | **i.** ಎಣ್ಣೆ ಬೀಜಗಳ ಉತ್ಪಾದನೆ |
| **B.** ಹಳದಿ ಕ್ರಾಂತಿ | **ii.** ಮೊಟ್ಟೆಗಳ ಉತ್ಪಾದನೆ |
| **C.** ಬೆಳ್ಳಿ ಕ್ರಾಂತಿ | **iii.** ಮೀನುಗಳ ಉತ್ಪಾದನೆ |
| **D.** ಬಿಳಿ ಕ್ರಾಂತಿ | **iv.** ಬಾಸ್ಮತಿ ಅಕ್ಕಿಯ ಉತ್ಪಾದನೆ |
| | **v.** ಹಾಲಿನ ಉತ್ಪಾದನೆ |

| | (A) | (B) | (C) | (D) |
|---|---|---|---|---|
| 1) | iii | ii | v | iv |
| 2) | ii | iv | ii | i |
| 3) | iii | iv | iii | v |
| 4) | iii | ii | iii | i |

**ಉತ್ತರ : 4) iii ii iii i**

- ❖ ಕಾಮನ ಬಿಲ್ಲು ಕ್ರಾಂತಿಯು ಹಲವು ಕ್ರಾಂತಿಗಳನ್ನು ಒಳಗೊಂಡಿದೆ.

**1. ಹಸಿರು ಕ್ರಾಂತಿ – ಆಹಾರ ಧಾನ್ಯಗಳ ಉತ್ಪಾದನೆ**
**2. ನೀಲಿ ಕ್ರಾಂತಿ– ಮೀನುಗಳ ಉತ್ಪಾದನೆ**
**3. ಹಳದಿ ಕ್ರಾಂತಿ – ಎಣ್ಣೆ ಬೀಜಗಳ ಉತ್ಪಾದನೆ**
**4. ಬಿಳಿ ಕ್ರಾಂತಿ – ಹಾಲು ಉತ್ಪಾದನೆ**
**5. ಬೆಳ್ಳಿ ಕ್ರಾಂತಿ – ಮೊಟ್ಟೆಗಳ ಉತ್ಪಾದನೆ**
**6. ಬಂಗಾರ ಕ್ರಾಂತಿ– ಹಣ್ಣು / ಹೂಗಳ ಉತ್ಪಾದನೆ**
**7. ಕೆಂಪು ಕ್ರಾಂತಿ – ಮಾಂಸದ ಉತ್ಪಾದನ**

ಆದ್ದರಿಂದ ಆಯ್ಕೆ (4) ಸರಿಯಾದ ಉತ್ತರವಾಗಿದೆ.

**131. ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ತಪ್ಪಾಗಿರುವ ಹೇಳಿಕೆಯನ್ನು ಆರಿಸಿ.**

(1) ಭಾರತದಲ್ಲಿ ಹಣಕಾಸು ವರ್ಷವು ಆ ವರ್ಷದ ಏಪ್ರಿಲ್ 1 ರಂದು ಪ್ರಾರಂಭವಾಗಿ, ಅದರ ಮುಂದಿನ ವರ್ಷದ ಮಾರ್ಚ್ 31 ರಂದು ಮುಕ್ತಾಯವಾಗುತ್ತದೆ.
(2) ಭಾರತೀಯ ರೈಲ್ವೆ ಗಳಿಸುವ ನಿವ್ವಳ ಲಾಭವು ಕೇಂದ್ರ ಸರ್ಕಾರದ ತೆರಿಗೆಯೇತರ ಆದಾಯವಾಗಿದೆ
(3) ನಾಗರಿಕ ಆಡಳಿತ ವೆಚ್ಚ, ರಕ್ಷಣಾ ವೆಚ್ಚ, ಬಡ್ಡಿ ಪಾವತಿ ಇವುಗಳು ಯೋಜನಾ ವೆಚ್ಚದ ಭಾಗವಾಗಿವೆ
(4) ವೈಯಕ್ತಿಕ ಆದಾಯ ತೆರಿಗೆಯು ಪ್ರತ್ಯಕ್ಷ ತೆರಿಗೆಯಾಗದಿ

Downloaded From: www.kpscvaani.com

# KAR-TET

**ಪತ್ರಿಕೆ–II (6–8th)**

**2014**

# ಕಲಾ ವಿಭಾಗ

- Part I : ಭಾಷೆ–1 ಕನ್ನಡ
- Part II : ಭಾಷೆ–2 ಇಂಗ್ಲೀಷ್
- Part III : ಬಾಲವಿಕಾಸ & ಬೋಧನಾ ಶಾಸ್ತ್ರ
- Part IV : ಸಮಾಜ ವಿಜ್ಞಾನ

**ಪರೀಕ್ಷೆ ನಡೆದ ದಿನಾಂಕ : 22–06–2014**

## Part I: ಭಾಷೆ 1 – ಕನ್ನಡ

**ಸೂಚನೆ : ಈ ಕೆಳಗಿನ ಗದ್ಯಭಾಗವನ್ನು ಓದಿ 1 ಬಂದ 8 ಪ್ರಶ್ನೆಗಳಿಗೆ ಉತ್ತರಿಸಿರಿ :**

ನೀವು ಜನಪ್ರಿಯರಾಗಬೇಕೆಂದಿರುವಿರಾ? ದಾರಿ ಕಾಣದಾಗಿದೆಯೆ? ಉಪಾಯ ಇಲ್ಲಿದೆ : ಜನರ ವೈಶಿಷ್ಟ್ಯ ಸಾಮರ್ಥ್ಯ ದಕ್ಷತೆಗಳನ್ನು ಗಮನಿಸಿ, ಗುರುತಿಸಿ, ಹೃತ್ಪೂರ್ವಕವಾಗಿ ಆನಂದಿಸಬಲ್ಲಿರಾ? ಅವರನ್ನು ಪ್ರೋತ್ಸಾಹಿಸಬಲ್ಲಿರಾ? ತಾಳ್ಮೆಯಿಂದ ಅವರ ಹಿತ ಚಿಂತನೆ ಮಾಡಬಲ್ಲಿರಾ? ಅವರಿಗಾಗಿ ದೇವರಲ್ಲಿ ಪ್ರಾರ್ಥಿಸಬಲ್ಲಿರಾ? ಎಂದರೆ ನಿಃಸ್ವಾರ್ಥ ಪ್ರೀತಿಯನ್ನು ನೀಡಬಲ್ಲಿರಾ? ಹೌದು ಎಂದಾದಲ್ಲಿ ನೀವು ಜನರಿಂದ ಅಪಾರ ಪ್ರೀತಿಯನ್ನು ಗಳಿಸಬಲ್ಲಿರಿ.

ನೀವು ಸುಲಭವಾಗಿ ಒಳ್ಳೆಯ ಚಿಂತನಶೀಲ ವ್ಯಕ್ತಿಗಳೂ, ಸಂಶೋದಕರೂ ಆಗಬೇಕೆಂದಿರಾ? ನೀವು ಆರಿಸಿಕೊಂಡ ಅಧ್ಯಯನ ವಿಷಯವನ್ನು ಮನಸಾರೆ ಪ್ರೀತಿಸಿರಿ. ಆಗ ಎಂಥೆಂಥ ಅದ್ಭುತ ಯೋಚನೆಗಳು ಓಡೋಡಿ ಬರುತ್ತವೆಂದು ನೋಡಿ.

ನೀವು ಆರೋಗ್ಯವಣತರೂ, ಬಲಶಾಲಿಗಳು ಆಗಬೇಕೆಂದಿರು ವಿರಾ? ಶುಭೇಚ್ಛೆ ಹಾಗೂ ಪ್ರೀತಿಯ ತರಂಗಗಳನ್ನು ನಿಮ್ಮ ಸುತ್ತಮುತ್ತಲಿನ ಜನ ಮಾತ್ರವಲ್ಲ. ಪಶುಪಕ್ಷಿ, ಕ್ರಿಮಿ–ಕೀಟ, ತರುವೃಕ್ಷ, ಫಲ, ಪುಷ್ಪಗಳೆಡೆಗೆ, ಎಂದರೆ ನಿಸರ್ಗದೆಡೆ ಹರಿಸಿ. ಆಗ ಇದರ ಪರಿಣಾಮ ನಿಮ್ಮ ಅಂತರ್ಮನಸ್ಸಿನ ಮೇಲಾಗಿ ರಕ್ತದ ಕಣಗಳ ಮೇಲೂ ಸತ್ಪರಿಣಾಮ ಉಂಟಾಗುವುದು!

ದ್ವೇಷವನ್ನು ಬೆಳೆಸಿ, ಬಿತ್ತಿರಿಸಿದಿರಾದರೆ ಶರೀರ ಹಾಗೂ ಮನಸ್ಸು ವಿಷಯುಕ್ತವಾಗುತ್ತವೆ. ಹೌದು, ಪ್ರೀತಿ ಮಾತ್ರ ಅತ್ಯಂತ ಹಿತಕರ ಹಾಗೂ ಆರೋಗ್ಯವರ್ಧಕ ರಾಸಾಯನಿಕ ಪರಿಣಾಮಗಳನ್ನು ರಕ್ತದಲ್ಲಿ ಉಂಟು ಮಾಡುತ್ತದೆ. ಅಂದ ಮೇಲೆ ನೀವು ಅನುಸರಿಸಬೇಕಾದ ಆದರ್ಶ ಪಥ ಯಾವುದೆಂದು ಬೇರೆ ಹೇಳಬೇಕೇ?

**1. "ಜನರಿಂದ ಅಪಾರವಾದ ಪ್ರೀತಿಯನ್ನು ಗಳಿಸಿ, ಜನಪ್ರಿಯರಾಗಲು ಮಾಡಬೇಕಾದ ಪ್ರಮುಖ ಕಾರ್ಯ".**

(1) ಜನರನ್ನು ಹೃತ್ಪೂರ್ವಕವಾಗಿ ಅಭಿನಂದಿಸುವುದು

(2) ಜನರ ಹಿತಚಿಂತನೆಯನ್ನು ಮಾಡುವುದು

(3) ಜನರ ಅಭ್ಯುದಯಕ್ಕಾಗಿ ದೇವರನ್ನು ಪ್ರಾರ್ಥಿಸುವುದು

(4) ಜನರಿಗೆ ನಿಃಸ್ವಾರ್ಥ ಪ್ರೀತಿಯನ್ನು ನೀಡುವುದು

**ಉತ್ತರ: (4) ಜನರಿಗೆ ನಿಃಸ್ವಾರ್ಥ ಪ್ರೀತಿಯನ್ನು ನೀಡುವುದು**

- ❖ ಜನರಿಂದ ಅಪಾರವಾದ ಪ್ರೀತಿಯನ್ನು ಗಳಿಸಿ ಜನಪ್ರಿಯರಾಗಲು ಮಾಡಬೇಕಾದ ಪ್ರಮುಖ ಕಾರ್ಯವೆಂದರೆ, ಜನರಿಗೆ ನಿಃಸ್ವಾರ್ಥ ಪ್ರೀತಿಯನ್ನು ನೀಡುವುದಾಗಿದೆ.
- ❖ ಈ ಮೇಲಿನ ಆಯ್ಕೆಗಳನ್ನು ಗಮನಿಸಿದಾಗ ಎಲ್ಲವೂ ಸರಿ ಅನಿಸುತ್ತವೆ. ಆದರೆ, ಆಯ್ಕೆ (4) ಈ ಮೂರು ಆಯ್ಕೆಗಳ ಒಟ್ಟು ಸಾರಾಂಶ ಎನ್ನುವಂತೆ ಇದೆ.
- ❖ ಜನರನ್ನು ಹೃತ್ಪೂರ್ವಕವಾಗಿ ಅಭಿನಂದಿಸುವುದು, ಜನರ ಹಿತಚಿಂತನೆಯನ್ನು ಮಾಡುವುದು, ಜನರ ಅಭ್ಯುದಯಕ್ಕಾಗಿ ದೇವರನ್ನು ಪ್ರಾರ್ಥಿಸುವುದು, ಇವುಗಳೆಲ್ಲ ಜನರಿಗೆ ಯಾವುದೇ ತರಹದ ಕಲ್ಮಶವಿಲ್ಲದ ನಿಃಸ್ವಾರ್ಥ ಪ್ರೀತಿಯನ್ನು ನೀಡುವುದರಿಂದ ಸಾಧ್ಯವಾಗಿದೆ. ಆದ್ದರಿಂದ ಆಯ್ಕೆ (4) ಸರಿಯಾದ ಉತ್ತರವಾಗಿದೆ.

**2. ಒಬ್ಬ ಸಂಶೋಧಕನಾಗಬೇಕೆಂಬ ವ್ಯಕ್ತಿಗೆ ಅದ್ಭುತವಾದ ಯೋಚನೆಗಳು ಅವಶ್ಯಕ ಇಂತಹ ಯೋಚನೆಗಳೊಂದಿಗೆ ಆತನು ಉತ್ತಮ ಸಂಶೋಧಕನಾಗಲು ಮೊದಲು ಹೀಗೆ ಮಾಡಬೇಕು.**

(1) ಅಧ್ಯಯನದ ವಿಷಯುವನ್ನು ಬಲವಾಗಿ ಇಷ್ಟಪಡಬೇಕು.

(2) ಅದ್ಭುತವಾದ ಯೋಚನೆಗಳನ್ನು ಮನಸಾರೆ ಪ್ರೀತಿಸಬೇಕು.

Downloaded From: www.kpscvaani.com

**ಕಾಳಸರ್ಪಗಳಂತೆ**

❖ ಮನಮೋಹಕ ಮತ್ತು ಅದ್ಭುತವಾದ ಸಾಗರದ ಅಲೆಗಳು ಕಲ್ಪನೆಯಲ್ಲಿ ಹೆಡೆಯಲ್ಲಿ **ಪುಷ್ಪರಾಗವನ್ನು** ಹೊಂದಿರುವ **ಕಾಳಸರ್ಪ**ಗಳಂತೆ ಕಂಡುಬಂದಿದೆ.

**14. 'ಕಿನ್ನರ ಕಿಂಪುರುಷರ ನೌಕೆಗಳಂತೆ ತೇಲುತಿಹುದು ಬುರುಗಿನ ಬೆಳ್ಳಿ ಶರದಿಯ ಮೇಲೆ'** ಎಂಬ **ಹೋಲಿಕೆಯಲ್ಲಿ ಉಪಮೇಯ ಉಪಮಾನಗಳು ಅನುಕ್ರಮವಾಗಿ ಇಂತಿವೆ**

(1) ಕಿನ್ನರ ಕಿಂಪುರುಷರ ನೌಕೆಗಳು, ಶರಧಿಯ ಮೇಲೆ ತೇಲುತ್ತಿರುವ ನೌಕೆ

(2) ಶರಧಿಯ ಮೇಲೆ ತೇಲುತ್ತಿರುವ ನೌಕೆ, ಕಿನ್ನರ ಕಿಂಪುರುಷರ ರಥಗಳು

(3) ಶರಧಿಯ ಮೇಲೆ ತೇಲುತ್ತಿರುವ ಬುರುಗಿನ ಬೆಳ್ಳಿ, ಕಿನ್ನರ ಕಿಂಪುರುಷರ ನೌಕೆಗಳು

(4) ಕಿನ್ನರ ಕಿಂಪುರುಷರ ನೌಕೆಗಳು, ಶರಧಿಯ ಮೇಲೆ ತೇಲುತ್ತಿರುವ ಬುರುಗಿನ ಬೆಳ್ಳಿ

**ಉತ್ತರ: (3) ಶರಧಿಯ ಮೇಲೆ ತೇಲುತ್ತಿರುವ ಬುರುಗಿನ ಬೆಳ್ಳಿ ಕಿನ್ನರ ಕಿಂಪುರುಷರ ನೌಕೆಗಳು**

❖ **ಉಪಮಾನ:** ನಾವು ಯಾವುದಕ್ಕೆ ಹೋಲಿಸು ತ್ತೇವೆಯೋ ಆ ವಸ್ತು ಉಪಮಾನ ಅಥವಾ ಜಗತ್ಪ್ರಸಿದ್ಧವಾದ ಶ್ರೇಷ್ಠವಾದ ವಸ್ತು ಉಪಮಾನ.

❖ ಈ ಮೇಲಿನ ಉದಾಹರಣೆಗಳಲ್ಲಿ **'ಕಿನ್ನರ ಕಿಂಪುರುಷ ನೌಕೆಗಳು'** (ನೌಕೆಗಳಂತೆ) ಪ್ರಸಿದ್ಧವಾದ ವಸ್ತುವಾಗಿವೆ. (ಯಾವಾಗಲೂ ಈ ಪದದ ಅಂತ್ಯದಲ್ಲಿ ಅಂತೆ, ವೋಲ್, ಅಂದದಿ ಮುಂತಾದ ಪ್ರತ್ಯಯ ಹೊಂದಿರು ತ್ತದೆ) ಇದಕ್ಕೆ ಉಪಮಾನ ಎನ್ನುವರು.

❖ **ಉಪಮೇಯ:** ಯಾವುದು **ತನ್ನನ್ನು ಹೋಲಿಸಿ ಕೊಳ್ಳುತ್ತದೆಯೋ** ಆ ವಸ್ತುವೇ ಉಪಮೇಯ ಅಥವಾ **ಹೋಲಿಸಲ್ಪಡುವ ವಸ್ತುವೇ** ಉಪಮೇಯ.

❖ ಈ ಮೇಲಿನ ಉದಾಹರಣೆಯಲ್ಲಿ **ಶರಧಿಯ ಮೇಲೆ ತೇಲುತ್ತಿರುವ ಬುರುಗಿನ ಬೆಳ್ಳಿ.**

❖ ಒಟ್ಟಿನಲ್ಲಿ ಸಮುದ್ರದ ಮೇಲೆ ಕಿನ್ನರ ಕಿಂಪುರುಷರ ನೌಕೆಗಳು (ನೌಕೆಗಳಂತೆ) ತೇಲುತ್ತಿರುವಂತೆ ಶರಧಿ (ಸಮುದ್ರ) ಮೇಲೆ ಬುರುಗಿನ ಬೆಳ್ಳಿ ತೇಲುತ್ತಿದೆ ಎಂದರ್ಥ.

**15. 'ಅರಬ್ಬಿಯ ಮುನ್ನೀರಿಗೆ ಕರಿನೀಲಿ ಬಣ್ಣವುಂಟು ಮುಂದೆ ಬಂದಿಹುದು ಕೆಂಪುಸಮುದ್ರವೊಂದು', ಇಲ್ಲಿಯ ಪದ್ಯದ ಸಾಲುಗಳಲ್ಲಿ ಅಡಿಗೆರೆ ಎಳೆದಿರುವ ಪದಗಳು ಅನುಕ್ರಮವಾಗಿ ಈ ಸಮಾಸಕ್ಕೆ ಸೇರಿವೆ**

(1) ಕರ್ಮಧಾರೆಯ ಮತ್ತು ಕರ್ಮಧಾರೆಯ

(2) ದ್ವಂದ್ವ ಮತ್ತು ತತ್ಪುರುಷ

(3) ತತ್ಪುರಷ ಮತ್ತು ತತ್ಪುರಷ

(4) ಬಹುವ್ರೀಹಿ ಮತ್ತು ಕರ್ಮಧಾರೆಯ

**ಉತ್ತರ: (1) ಕರ್ಮಧಾರೆಯ ಮತ್ತು ಕರ್ಮಧಾರೆಯ**

**ಕರ್ಮಧಾರೆಯ ಸಮಾಸ**

ವಿಶೇಷಣ (ಬಣ್ಣಿಸುವುದು) ವಿಶೇಷ್ಯ (ಬಣ್ಣಿಸಿ ಕೊಳ್ಳುವುದು) ಉಪಮಾನ (ಹೋಲಿಸುವುದು), ಉಪಮೇಯ (ಹೋಲಿಸಿಕೊಳ್ಳುವುದು)ಗಳು ಸೇರಿ ಆಗುವ ಮತ್ತು ಪೂರ್ವ ಪದದಲ್ಲಿ ಸಂಭಾವನೆ, ಅವಧಾರಣೆ ತೋರುವ ಸಮಾಸಗಳು ನಾಮದೊಂದಿಗೆ ಸೇರಿ ಉತ್ತರ ಪದದ ಅರ್ಥ ಪ್ರಧಾನವಾಗಿರುವಂತಹ ಸಮಾಸವನ್ನು ಕರ್ಮಧಾರೆಯ ಸಮಾಸ ಎನ್ನುವರು.

**ಇದರಲ್ಲಿ 7 ನಿಯಮಗಳು (ಪ್ರಕಾರಗಳು)**

**(1) ವಿಶೇಷಣ ಪೂರ್ವ ಕರ್ಮಧಾರೆಯ ಸಮಾಸ:–**

ವಿಶೇಷಣವು (ಬಣ್ಣಿಸುವುದು) ಪೂರ್ವಪದದಲ್ಲಿದ್ದು, ಉತ್ತರ ಪದದಲ್ಲಿಯ ವಿಶೇಷ್ಯದೊಡನೆ (ಬಣ್ಣಿಸಿಕೊಳ್ಳುವುದು) ಕೂಡಿ ಆಗುವ ಸಮಾಸವು ವಿಶೇಷಣ ಪೂರ್ವಪದ ಕರ್ಮಧಾರೆಯ ಸಮಾಸವೆನಿಸುವುದು. ಇದರಲ್ಲಿ ಉತ್ತರ ಪದದ ಅರ್ಥವು ಪ್ರಧಾನವಾಗಿರುತ್ತದೆ. ಮತ್ತು ವಿಶೇಷಣದ ಮುಂದೆ ಸಾಮಾನ್ಯವಾಗಿ **'ಆದ', 'ಆದಂಥ'** ಎಂಬ ಶಬ್ದಗಳು ವಿಗ್ರಹ ವಾಕ್ಯದಲ್ಲಿ ಪ್ರಯೋಗವಾಗುವವು. ಆದರೆ ಇವು ಸಮಸ್ತ ಪದವಾಗುವಾಗ ಲೋಪವಾಗುವವು.

**ಉದಾ:**

(ಅ) ಹಿರಿದು + ಜೇನು

(ಆ) ದಿವ್ಯ + ಪ್ರಕಾರ

ಹಿರಿದು ಆದ + ಜೇನು = ಹೆಜ್ಜೇನು

ದಿವ್ಯವಾದ + ಪ್ರಕಾಶ = ದಿವ್ಯಪ್ರಕಾಶ

**ಉದಾ: (ಅ)** ಇಲ್ಲಿ **ವಿಶೇಷಣ – ಹಿರಿದಾದ** ಇದು ಪೂರ್ವ ಪದದಲ್ಲಿದೆ;

**ವಿಶೇಷಣವು** – ಜೇನು. ಇದು ಉತ್ತರ ಪದದಲ್ಲಿದ್ದು ಅರ್ಥ ಪ್ರಧಾನವಾಗಿದೆ.

**ಉದಾ: (ಆ)** ಇಲ್ಲಿಯೂ ದಿವ್ಯವಾದ ವಿಶೇಷಣ ಪದ ಅದು ಪೂರ್ವಪದದಲ್ಲಿದೆ. ಪ್ರಕಾಶ – ವಿಶೇಷ್ಯಪದ ಇದು

Downloaded From: www.pscvaani.com

ಉತ್ತರ ಪದದಲ್ಲಿದೆ. ಇದರ ಅರ್ಥವೇ ಪ್ರಧಾನವಾಗಿದೆ. ಅಂದರೆ ಪ್ರಕಾರ ಇದೆ ಹೇಗಿದೆ ಎಂದಾಗ ದಿವ್ಯವಾಗಿದೆ ಎಂದರ್ಥ.

**ಗಮನಿಸಿ:** ಇಲ್ಲಿ ಆದ, ಆದಂಥ, ಎಂಬ ಪದ ಸೇರಿಸಿ ಹೇಳುವುದು ರೂಢಿ; ಸ್ಪಷ್ಟ ತಿಳಿವಳಿಕೆಗೋಸ್ಕರ ಅಷ್ಟೇ. ಅಲ್ಲದೇ 'ಆದ', 'ಆದಂಥ' ಎಂಬವು ಸಮಾಸದಲ್ಲಿ ಸೇರಬೇಕಾದ ಪದಗಳಲ್ಲ. ಮುಂದೆ ಸಮಾಸವಾಗುವಾಗ ಲೋಪವಾಗುತ್ತವೆ.

**ಉದಾ:**

ಹಳೆಯದು + ಕನ್ನಡ = ಹಳೆಗನ್ನಡ
ಪೀತವಾದ + ಅಂಬರ = ಪೀತಾಂಬರ
ಹೊಸದು + ಕನ್ನಡ = ಹೊಸಗನ್ನಡ
ನೀಲವಾದ + ಉತ್ಪಲ + ನೀಲೋತ್ಪಲ
ಇನಿದು + ಸರ = ಇಂಚರ
ಶ್ವೇತವಾದ + ವಸ್ತ್ರ = ಶ್ವೇತವಸ್ತ್ರ
ಮೆಲ್ಲಿತು + ಮಾತು = ಮೇಲ್ವಾತು
ಶ್ವೇತವಾದ + ಅಂಬರ = ಶ್ವೇತಾಂಬರ
ಇನಿದಾದ + ಮಾವು = ಇಮ್ಮಾವು
ಬೃಹತ್ತಾದ + ವೃಕ್ಷ = ಬೃಹದ್ವೃಕ್ಷ
ಹಿರಿದಾದ + ಮರ = ಹೆಮ್ಮರ
ನೀಲವಾದ + ಶರಧಿ = ನೀಲಶರಧಿ
ಹಿರಿದಾದ + ಬಾಗಿಲು = ಹೆಬ್ಬಾಗಿಲು
ನೀಲವಾದ + ಸಮುದ್ರ = ನೀಲಸಮುದ್ರ
ಚಿಕ್ಕವಳಾದ + ಹುಡುಗಿ = ಚಿಕ್ಕಹುಡುಗಿ
ಶ್ವೇತವಾದ + ವರ್ಣ = ಶ್ವೇತವರ್ಣ
ಚಿಕ್ಕದಾದ + ಮಗು = ಚಿಕ್ಕಮಗು
ಮತ್ತವಾದ + ವಾರಣ = ಮತ್ತವಾರಣ (ಮದ್ದಾನೆ)
ಹಳೆಯದಾದ + ಬಟ್ಟೆ = ಹಳೆಬಟ್ಟೆ
ಪೀತವಾದ + ವಸ್ತ್ರ = ಪೀತವಸ್ತ್ರ
ಬಿಳಿದಾದ + ಕೊಡೆ = ಬಿಳ್ಗೊಡೆ
ನಿಡಿದಾದ + ಉಸಿರು = ನಿಟ್ಟುಸಿರು
ನಿಡಿದಾದ + ಇರುಳು = ನಿಟ್ಟಿರುಳು

**16. 'ಭಾಷಾ ಕಲಿಕೆಯ ಅನುಕ್ರಮಣಿಕೆ ತತ್ವದನ್ವಯ ಸರಿಯಾದ ಕಲಿಕೆಯ ರೀತಿ ಹೀಗಿರುತ್ತದೆ'**

(1) ಬಿಡಿ ಪದಗಳು ಮೊದಲು ನಂತರ ಪೂರ್ಣ ವಾಕ್ಯಗಳ ಕಲಿಕೆ
(2) ಮಾತುಗಾರಿಕೆಯ ಕೌಶಲ್ಯದ ನಂತರ ಓದುವ ಕೌಶಲ್ಯದ ಕಲಿಕೆ
(3) ಮೌನ ಓದಿನ ನಂತರ ಬಾಯ್ದೆರೆ ವಾಚನದ ಕಲಿಕೆ
(4) ಸರಳದಿಂದ ಸಂಯುಕ್ತ ಅಪರಿಚಿತದಿಂದ ಪರಿಚಿತ ಪದಗಳ ಕಲಿಕೆ

**ಉತ್ತರ: (2) ಮಾತುಗಾರಿಕೆಯ ಕೌಶಲ್ಯದ ನಂತರ ಓದುವ ಕೌಶಲದ ಕಲಿಕೆ**

❖ ಭಾಷಾಕಲಿಕೆಯ ಅನುಕ್ರಮಣಿಕೆ ತತ್ವದನ್ವಯ ಮಾತುಗಾರಿಕೆಯ ಕೌಶಲ್ಯದ ನಂತರ ಓದುವ ಕೌಶಲ್ಯದ ಕಲಿಕೆ ಆಗಿದೆ.

**ಮಾತುಗಾರಿಕೆ:**

❖ ಮನಸ್ಸಿನ ಭಾವನೆ, ಆಲೋಚನೆ ಮತ್ತು ಅಭಿಪ್ರಾಯಗಳನ್ನು ಅರ್ಥಪೂರ್ಣವಾಗಿ ಸುಸಂಬದ್ಧವಾಗಿ ಶಾಬ್ದಿಕವಾಗಿ ಪ್ರಕಟಪಡಿಸುವುದೇ ಮಾತು, ಆಲಿಸುವುದನ್ನು ಕಲಿಯುತ್ತಾ ಕಲಿಯುತ್ತಾ ಮಕ್ಕಳು ಬೇರೆಯವರ ಮಾತುಗಳನ್ನು ಅನುಕರಣೆ ಮಾಡುತ್ತಾ ಮಾತು ಕಲಿಯುತ್ತಾರೆ.
❖ ಅಭಿವ್ಯಕ್ತಿ ಸಾಧನವಾಗಿರುವ ಮಾತು ಒಂದು ಮಾನಸಿಕ ಕ್ರಿಯೆ. ಸರಳವಾಗಿ, ನೇರವಾಗಿ, ನಿರರ್ಗಳವಾಗಿ ಅರ್ಥ ಬದ್ಧವಾಗಿ ಮತ್ತು ಭಾವಪೂರ್ಣವಾಗಿ ಮಾತನಾಡು ವುದು ಒಂದು ಕಲೆ ಹಾಗೂ ಸಾಮರ್ಥ್ಯ.
❖ ಮಾತುಗಾರಿಕೆಯಲ್ಲಿ ಉತ್ತಮ ಸಾಮರ್ಥ್ಯಗಳಿಸ ಬೇಕಾದರೆ ಮಾತಿನ ಕ್ರಿಯೆಯಲ್ಲಿ ಕಾರ್ಯಶೀಲವಾಗುವ ಹಲವು ಹತ್ತು ಕೌಶಲಗಳಲ್ಲಿ ಸಾಮರ್ಥ್ಯಗಳಿಸಬೇಕು.

**ಓದುಗಾರಿಕೆ:**

❖ ಓದುವುದು ಒಂದು ಮಾನಸಿಕ ಮತ್ತು ಶಾಬ್ದಿಕ ಕ್ರಿಯೆ, ಮಾತುಗಾರಿಕೆಯ ನಂತರ ಕಲಿಯಲ್ಪಡುವ ಓದುಗಾರಿಕೆಯು ಭಾಷೆಯ ಒಂದು ಅತಿ ಮುಖ್ಯ ಕೌಶಲ:
❖ ಓದುವುದು ಮಾತನಾಡುವುದಕ್ಕಿಂತ ಕಷ್ಟ ಹಾಗೂ ಹೆಚ್ಚು ನಿಯಮಬದ್ಧ, ಓದು ಕಲಿಯುವ ಮುನ್ನ ಉತ್ತಮ ಮಾತುಗಾರಿಕೆಯನ್ನು ಕಲಿತಿರಬೇಕು. ಏಕೆಂದರೆ ಮಾತಿನ ಕೌಶಲಗಳು ಓದುವ ಕ್ರಿಯೆಯನ್ನು ಪುಷ್ಟಿಗೊಳಿಸುತ್ತವೆ.
❖ ಮುದ್ರಿತ ವಿಷಯವನ್ನು ಅರ್ಥಬದ್ಧವಾಗಿ , ಶಾಬ್ದಿಕವಾಗಿ ಅಭಿವ್ಯಕ್ತಿಸುವ ಕ್ರಿಯೆಗೆ ಓದು

Downloaded From: www.kpscvaani.com

- ❖ ವಿಷಯಗಳನ್ನು ಸಾರಸಂಗ್ರಹಿಸಿ, ಸಾಮಾನ್ಯೀಕರಿಸಿ ಮಾತನಾ ಡುವುದು.
- ❖ ವಿಷಯಗಳನ್ನು ವಿಸ್ತರಿಸಿ ಮಾತನಾಡುವುದು.
- ❖ ಉಪನ್ಯಾಸ ಮತ್ತು ಭಾಷಣ ಮಾಡುವ ಸಾಮರ್ಥ್ಯ
- ❖ ಮಾತನಾಡುವವರ ಶಿಷ್ಟಾಚಾರವನ್ನು ಪಾಲಿಸುವುದು, ಇತ್ಯಾದಿ.

**20. 'ಕ್ರಿಯಾತ್ಮಕ ವ್ಯಾಕರಣ ಬೋಧನೆಯ ಮುಖ್ಯ ಲಕ್ಷಣ ಇದಾಗಿದೆ':**

(1) ಭಾಷೆಗಿಂತ ಮೊದಲು ವ್ಯಾಕರಣದ ಕಲಿಕೆ

(2) ಪ್ರತ್ಯೇಕವಾಗಿ ಶಾಸ್ತ್ರೀಯ ರೀತಿಯ ಕಲಿಕೆ

(3) ಭಾಷೆಯ ಜೊತೆಯಲ್ಲಿಯೇ ಪ್ರಯೋಗದ ಮೂಲಕ ವ್ಯಾಕರಣ ಕಲಿಕೆ

(4) ವ್ಯಾಕರಣ ಸೂತ್ರಗಳ ಅನ್ವಯದಿಂದ ಭಾಷೆಯ ಕಲಿಕೆ

**ಉತ್ತರ: (3) ಭಾಷೆಯ ಜೊತೆಯಲ್ಲಿಯೇ ಪ್ರಯೋಗದ ಮೂಲಕ ವ್ಯಾಕರಣ ಕಲಿಕೆ**

**ಪ್ರಾಯೋಗಿಕ ವ್ಯಾಕರಣ / ಕ್ರಿಯಾತ್ಮಕ ವ್ಯಾಕರಣ (Functional Grammar)**

- ❖ ವ್ಯಾಕರಣಾಂಶಗಳನ್ನು ಪ್ರತ್ಯೇಕವಾಗಿ, ಬಿಡಿ ಪದ್ಧತಿಯಿಂದ ಬೋಧಿಸದೆ ಭಾಷೆಯ ಪ್ರಯೋಗದ ಸಂದರ್ಭಗಳಲ್ಲಿ ಪರಿಚಯಿಸುವುದೇ ಪ್ರಾಯೋಗಿಕ / ಕ್ರಿಯಾತ್ಮಕ ವ್ಯಾಕರಣ ಭಾಷೆಯ ರಚನೆ ಮತ್ತು ಪ್ರಯೋಗದಲ್ಲಿ ವ್ಯಾಕರಣಾಂಶಗಳು ಅಂತರ್ಗತಗೊಂಡಿರುವುದರಿಂದ ಇವುಗಳನ್ನು ಭಾಷೆಯ ರಚನೆ ಮತ್ತು ಪ್ರಯೋಗದ ಮೂಲಕ ಬೋಧಿಸುವುದು ಸೂಕ್ತ. ವ್ಯಾಕರಣದ ನಿಯಮಗಳನ್ನು ಕಟ್ಟುನಿಟ್ಟಾದ ಕ್ರಮದಲ್ಲಿ ಪ್ರತ್ಯೇಕವಾಗಿ ಕಲಿಸುವುದು ಅವೈಜ್ಞಾನಿಕ.
- ❖ ಭಾಷೆಯ ರಚನೆ ಮತ್ತು ಪ್ರಯೋಗ ಕೌಶಲಗಳಲ್ಲಿ ಸಾಮರ್ಥ್ಯ ಬೆಳೆಸುವ ಸಲುವಾಗಿ ವ್ಯಾಕರಣವನ್ನು ಬೋಧಿಸಬೇಕು. ಸುಸಂಬದ್ಧ ಮಾತು, ಓದು ಮತ್ತು ಬರಹದ ಸಂದರ್ಭಗಳಲ್ಲಿ ವ್ಯಾಕರಣಾಂಶಗಳನ್ನು ಪರಿಚಯಿಸಬೇಕು.
- ❖ ಉಪಾಧ್ಯಾಯರು ಬೋಧನಾ ಸಂದರ್ಭದಲ್ಲಿ ಮಾತು, ವಿವರಣೆ, ಓದು, ಬರಹ ಸಂದರ್ಭಗಳಲ್ಲಿ ಪರಿಚಯಿಸ ಬಹುದಾದ ವ್ಯಾಕರಣಾಂಶಗಳನ್ನು ಮೊದಲೆ ಯೋಜಿಸಿ ಕೊಳ್ಳಬೇಕು.
- ❖ ಭಾಷಾಕಲಿಕೆ ಹಾಗೂ ಪ್ರಯೋಗದ ಸಂದರ್ಭಗಳಲ್ಲಿ ವ್ಯಾಕರಣಾಂಶಗಳನ್ನು ಪರಿಚಯಿಸುವುದರಿಂದ ಮಕ್ಕಳಿಗೆ ವ್ಯಾಕರಣವು ಕಷ್ಟವೆನಿಸುವುದಿಲ್ಲ.
- ❖ ಭಾಷೆಯ ಜೊತೆಯಲ್ಲಿ ವ್ಯಾಕರಣಾಂಶಗಳನ್ನು ಚಟುವಟಿಕೆಗಳ ರೀತಿ ಕಲಿಯುತ್ತಾರೆ. ತಮ್ಮ ಮಾತು, ವಿವರಣೆ, ಓದು ಮತ್ತು ಬರಹ ಸಂದರ್ಭಗಳಲ್ಲಿ ವ್ಯಾಕರಣಾಂಶಗಳನ್ನು ಅನ್ವಯಿಸುವ ಮೂಲಕ ಆತ್ಮ ವಿಶ್ವಾಸದಿಂದ ಕಲಿಯುತ್ತಾರೆ. ವ್ಯಾಕರಣಾಂಶಗಳ ಕಲಿಕೆಯು ಹೊರೆ ಎನಿಸುವುದಿಲ್ಲ.
- ❖ ಇಲ್ಲಿ ಭಾಷೆಯರಚನೆ, ಪ್ರಯೋಗದಲ್ಲಿ ವ್ಯಾಕರಣ ನಿಯಮಗಳನ್ನು ಅನ್ವಯಿಸುತ್ತಾರೆ.
- ❖ ಭಾಷಾ ತರಗತಿಗಳಲ್ಲಿ ಹಾಗೂ ಭಾಷಾ ಪಠ್ಯ ಪುಸ್ತಕಗಳನ್ನು ಉಪಯೋಗಿಸುವ ಸಂದರ್ಭಗಳಲ್ಲಿ ಅಗತ್ಯವೆನಿಸುವ ವ್ಯಾಕರಣಾಂಶಗಳನ್ನು ಪರಿಚಯಿಸ ಬಹುದು.
- ❖ ಪಠ್ಯದಲ್ಲಿನ ಪದಗಳು, ವಾಕ್ಯಗಳು, ನುಡಿಗಟ್ಟುಗಳು, ವಾಕ್ಯವೃಂದಗಳು, ಪದ್ಯದ ಸಾಲುಗಳನ್ನು ಪರಿಚಯಿಸುವಾಗ ಅವುಗಳ ರಚನೆಯ ಕ್ರಮ ಹಾಗೂ ಅರ್ಥವನ್ನು ಮಕ್ಕಳಿಗೆ ವ್ಯಾಕರಣಾಂಶಗಳಿಗೆ ಪರಿಚಯಿಸಬೇಕು.
- ❖ ಈ ಸಂದರ್ಭದಲ್ಲಿ ಬೋಧಿಸಬೇಕಾದ ಸಂಬಂಧಿಸಿದಂತೆ ಉದಾಹರಣೆಗಳನ್ನು ನೀಡಿ ಅವುಗಳ ಪರಿಶೀಲನೆ, ಸೂತ್ರನಿರೂಪಣೆ ಹಾಗೂ ಸೂತ್ರ ಅನ್ವಯ ಕ್ರಮವನ್ನು ಮಕ್ಕಳಿಗೆ ಪರಿಚಯಿಸಬಹುದು.
- ❖ ಭಾಷಾ ತರಗತಿಗಳಲ್ಲಿ ವಿಭಕ್ತಿ ಪ್ರತ್ಯಯಗಳು, ಕಾಲ, ವಚನ, ಲಿಂಗ , ಸಂಧಿ – ಸಮಾಸಗಳು , ಛಂದಸ್ಸು, ಅಲಂಕಾರಗಳು, ಪದರಚನೆ, ಸುಸಂಬದ್ಧ ವಾಕ್ಯರಚನೆ ಇಂತಹ ಅಭ್ಯಾಸಗಳ ಮೂಲಕ ವ್ಯಾಕರಣಾಂಶಗಳನ್ನು ಪರಿಚಯಿಸಬೇಕು.
- ❖ ಭಾಷಾ ಪ್ರಯೋಗದ ಸಂದರ್ಭಗಳಲ್ಲಿ ವ್ಯಾಕರಣಾಂಶ ಗಳನ್ನು ಪರಿಚಯಿಸುವಾಗ ಸಂದರ್ಭಕ್ಕೆ ತಕ್ಕಂತೆ ಅನುಗಮನ ಹಾಗೂ ನಿಗಮನ ಪದ್ಧತಿಗಳನ್ನು ಅಳವಡಿಸಿಕೊಳ್ಳಬಹುದು.
- ❖ ಒಟ್ಟಾರೆ ಚಟುವಟಿಕೆಗಳ ಮೂಲಕ ಭಾಷಾ ಕೌಶಲಗಳ ರಚನೆ ಮತ್ತು ಪ್ರಯೋಗದ ಮೂಲಕ ವ್ಯಾಕರಣಾಂಶ ಗಳನ್ನು ಪರಿಚಯಿಸಬೇಕು.
- ❖ ಮಕ್ಕಳ ಮಾತು, ವಿವರ, ಪ್ರಶ್ನೋತ್ತರ, ಓದು, ಬರಹ

Downloaded From: www.kpscvaani.com

- ❖ ಭಾಷಾಕಲಿಕೆಯಲ್ಲಿ ನೈಪುಣ್ಯತೆ ಸಾಧಿಸಲು ಸ್ವಯಂ ಕಲಿಕೆಯು ಸ್ಪಷ್ಟತೆ ಮತ್ತು ಪರಿಪೂರ್ಣತೆಯನ್ನು ಒದಗಿಸಬಲ್ಲದು.
- ❖ "ಮನಸ್ಸಿದ್ದರೆ ಮಾರ್ಗ" ಎಂಬಂತೆ ವಿದ್ಯಾರ್ಥಿಯು ತಾನು ಸ್ವಯಂ ಮನಸ್ಸು ಮಾಡಿ ಕಲಿತರೆ ಭಾಷಾ ಕಲಿಕೆಯಲ್ಲಿ ನೈಪುಣ್ಯತೆ ಸಾಧಿಸಲು ಸಾಧ್ಯ.
- ❖ ಬಾಹ್ಯ ಎಷ್ಟೇ ಒತ್ತಡದಿಂದಲೂ ಕಲಿ ಎಂದರೂ ಕಲಿಕೆ ಪರಿಪೂರ್ಣಗೊಳ್ಳುವುದಿಲ್ಲ. ಅದು ಕೇವಲ ತೋರಿಕೆಯ ಮತ್ತೊಬ್ಬರ ಮೆಚ್ಚುಗೆಗೆ ಕೃತಕ ಕಲಿಕೆಯಾಗುತ್ತದೆ.
- ❖ ಆದರೆ ಸ್ವಯಂ ತಾನು ಕಲಿಯಬೇಕು ಎಂಬ ಇಚ್ಛೆ ಬಂದರೆ ಅದು ಪರಿಪೂರ್ಣ ಕಲಿಕೆ ಆಗಿ ಅದರಲ್ಲಿ ನೈಪುಣ್ಯತೆ ಸಾಧಿಸಲು ಸಾಧ್ಯವಾಗುತ್ತದೆ.

**25. 'ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಆಶಯದಲ್ಲಿ ಮೌಲ್ಯಮಾಪನವು ಹೀಗಿರಬೇಕೆಂಬ ಆಂಶವನ್ನು ಒತ್ತಿ ಹೇಳಿದೆ':**

(1) ಬೋಧನಾ ವಿಧಾನ
(2) ಅರ್ಹತಾ ಮಾಪನ
(3) ಪರೀಕ್ಷಾ ವಿಧಾನ
(4) ಕಲಿಕಾ ಸಾಧನ

**ಉತ್ತರ: (4) ಕಲಿಕಾ ಮಾಪನ (ಸಾಧನ)**

- ❖ ನಿರಂತರ ಮತ್ತು ವ್ಯಾಪಕ ಮೌಲ್ಯಮಪನದ ಆಶಯದಲ್ಲಿ ಮೌಲ್ಯ ಮಾಪನವು ಕಲಿಕಾ ಸಾಧನ ಎಂಬ ಅಂಶವನ್ನು ಒತ್ತಿ ಹೇಳಿದೆ.
- ❖ ಮೌಲ್ಯಮಾಪನವು ಶಿಕ್ಷಣದ ಅವಿಭಾಜ್ಯ ಅಂಗ.
- ❖ ಶಿಕ್ಷಣ ಫಲಪ್ರದವಾಗಬೇಕಾದರೆ ಬೋಧನೆ ಪರಿಣಾಮ ಕಾರಿಯಾಗಿರಬೇಕು. ಬೋಧನಾ ಕ್ರಿಯೆಯಿಂದ ಅಪೇಕ್ಷಿತ ಬದಲಾವಣೆ ನಿರೀಕ್ಷಿಸಬೇಕಾದರೆ ಬೋಧಿ –ಸುವ ವಿಷಯಗಳು ನಿರಂತರವಾಗಿ ಮೌಲ್ಯಮಾಪನ ಮಾಡಬೇಕು ಮತ್ತು ಮೇಲ್ವಿಚಾರಣೆ (Monitoring) ಮಾಡಬೇಕು.
- ❖ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗಳನ್ನು ಪರೀಕ್ಷಿಸುವುದನ್ನು ಸಾಮಾನ್ಯ ಅರ್ಥದಲ್ಲಿ ಮೌಲ್ಯಮಾಪನ ಎನ್ನಬಹುದು.

**26. 'ಮಾತನಾಡುವ ಕೌಶಲ್ಯಕ್ಕೆ ಸಂಬಂಧಿಸಿದಂತೆ ಮೌಲ್ಯಪಾಮನ ಕಾರ್ಯದಲ್ಲಿ ಈ ಚಟುವಟಿಕೆಗಳು ಹೆಚ್ಚು ಪರಿಣಾಕಕಾರಿ:**

(1) ಸಂದರ್ಶನ, ಅಭಿನಯ, ಸಂಭಾಷಣೆ, ಚರ್ಚೆ
(2) ಆಶುಭಾಷಣ, ಸಂದರ್ಶನ, ಚರ್ಚೆ, ಸಂಭಾಷಣೆ
(3) ಚರ್ಚೆ, ಆಶುಭಾಷಣ, ಸಂದರ್ಶನ, ಯೋಜನೆ
(4) ಸಂಭಾಷನೆ, ಸಂದರ್ಶನ, ಗುಂಪುಕಾರ್ಯ, ಆಶುಭಾಷಣ

**ಉತ್ತರ: (2) ಆಶುಭಾಷಣ, ಸಂದರ್ಶನ, ಚರ್ಚೆ, ಸಂಭಾಷಣೆ**

- ❖ ಮಾತನಾಡುವ ಕೌಶಲಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನ ಕಾರ್ಯದಲ್ಲಿ ಆಶುಭಾಷಣ, ಸಂದರ್ಶನ, ಚರ್ಚೆ, ಸಂಭಾಷಣೆ ಈ ಚಟುವಟಿಕೆಗಳು ಹೆಚ್ಚು ಪರಿಣಾಮಕಾರಿ.

**ಮಾತುಗಾರಿಕೆಯನ್ನು ಕಲಿಸುವ ಮತ್ತು ಪೋಷಿಸುವ ಭಾಷಾ ಅಭ್ಯರ್ಥಿಗಳು ಅಭ್ಯಾಸಗಳು**

- ❖ ಭಾಷಣಗಳನ್ನು ಏರ್ಪಡಿಸುವುದು
- ❖ ಆಶುಭಾಷಣಗಳು
- ❖ ಚರ್ಚೆ ಮತ್ತು ತರ್ಕ ಕೂಟಗಳು
- ❖ ಸಂದರ್ಶನ
- ❖ ಪುಟಾಣಿ ಭಾಷಣಗಳು
- ❖ ಕಥೆ ಹೇಳಿಸುವುದು ಮತ್ತು ಕೇಳಿಸುವುದು
- ❖ ಗಟ್ಟಿ ವಾಚನದ ಅಭ್ಯಾಸಗಳು
- ❖ ಕ್ರೀಡೆಗಳು ಮತ್ತು ನಾಟಕ ಅಭ್ಯಾಸಗಳು
- ❖ ಚಿತ್ರಪಟಗಳ ಮೂಲಕ ಮಾತನಾಡುವುದನ್ನು ಕಲಿಸುವುದು
- ❖ ಪ್ರಶ್ನೋತ್ತರ ಕಾರ್ಯಕ್ರಮಗಳು
- ❖ ಏಕಪಾತ್ರಾಭಿನಯ ಬಹು ಪಾತ್ರಾಭಿನಯ ಮತ್ತು ಗಾಯನಗಳು
- ❖ ಪತ್ರಿಕೆಗಳು ಮತ್ತು ವರದಿಗಳನ್ನು ಓದುವ ಅಭ್ಯಾಸಗಳು

**27. 'ಭಾಷಾ ಪ್ರಯೋಗಾಲಯವು ಭಾಷಾ ಶಿಕ್ಷಣದಲ್ಲಿ ಈ ರೀತಿ ನೆರವಾಗುತ್ತದೆ'.**

(1) ವ್ಯಾಕರಣಬದ್ಧವಾಗಿ ಭಾಷೆಯನ್ನು ಕಲಿಯಲು
(2) ಅಂತರ್ಜಾಲ ನೆರವಿನಂದ ಭಾಷೆಯನ್ನು ಕಲಿಯಲು
(3) ಭಾಷೆಯನ್ನು ಶಾಸ್ತ್ರೀಯ ಕ್ರಮದಲ್ಲಿ ಪ್ರಯೋಗಿಸಲು
(4) ಸೂಕ್ತ ಅಭ್ಯಾಸಗಳ ಮೂಲಕ ಭಾಷಾ ದೋಷಗಳನ್ನು ಪರಿಹರಿಸಿಕೊಳ್ಳಲು

**ಉತ್ತರ: (4) ಸೂಕ್ತ ಅಭ್ಯಾಸಗಳ ಮೂಲಕ ಭಾಷಾ ದೋಷಗಳನ್ನು ಸರಿಪಡಿಸಿಕೊಳ್ಳಲು**

**ಭಾಷಾ ಪ್ರಯೋಗಾಲಯದ ಅನುಕೂಲಗಳು**

❖ ಭಾಷೆಯ ವಿವಿಧ ಕೌಶಲಗಳ ಕಲಿಕೆ ಮತ್ತು ಕ್ರಮಬದ್ಧ ಅಭ್ಯಾಸಕ್ಕೆ ಭಾಷಾ ಪ್ರಯೋಗಾಲಯವು ನೆರವಾಗುತ್ತದೆ. ಇದೇ ರೀತಿ ಮಕ್ಕಳ ಭಾಷಾ ಕೌಶಲಗಳಲ್ಲಿ ಕಂಡುಬರುವ ದೋಷಗಳನ್ನು ಗುರ್ತಿಸಿ ಈ ದೋಷಗಳನ್ನು ಪರಿಹಾರ ಮಾಡಲು ಅನುಕೂಲವಾಗುತ್ತದೆ.

❖ ಭಾಷೆಯ ವಿವಿಧ ಕೌಶಲಗಳಲ್ಲಿ ಸೂಕ್ತ ತರಬೇತಿ ನೀಡಲು ಉತ್ತಮ ಸಾಧನವೆನಿಸುತ್ತದೆ. ಮಕ್ಕಳ ಆಲಿಸುವಿಕೆ, ಉಚ್ಚಾರ, ಧ್ವನಿಯ ಏರಿಳಿತಗಳು, ಸಂಭಾಷಣೆಗಳು, ಪ್ರಶೋತ್ತರಗಳು, ವಿವರಣೆ, ಭಾಷಣ, ಹಾಡು, ವಿವಿಧ ರೀತಿಯ ವಾಚನಗಳ ಕೌಶಲ, ಕೈಬರಹದ ಕೌಶಲಗಳು, ಶೀಘ್ರವಾಚನ, ಶೀಘ್ರಬರಹ ಇತ್ಯಾದಿಗಳನ್ನು ಕಲಿಯಲು ಸಹಾಯಕವಾಗುತ್ತದೆ.

❖ ಇದೇ ರೀತಿ ವಿದ್ಯಾರ್ಥಿಯು ಮಾತು, ಓದುಗಳನ್ನು ತಾನೇ ಕೇಳುತ್ತಾ ಮತ್ತು ಪರದೆಯ ಮೇಲೆ ನೋಡುತ್ತಾ ಮತ್ತು ಮತ್ತು ಓದಿನ ದೋಷಗಳನ್ನು ಗುರ್ತಿಸಿಕೊಂಡು ಆ ಬಗ್ಗೆ ಸೂಕ್ತ ಪರಿಹಾರ ಅಭ್ಯಾಸಗಳನ್ನು ಕೈಗೊಳ್ಳಲು ಅನುಕೂಲವಾಗುತ್ತದೆ.

❖ ಮಕ್ಕಳಲ್ಲಿ ಸಂವಹನ ಕೌಶಲ (communication skills) ಗಳನ್ನು ಅಭ್ಯಾಸ ಮಾಡಿಸಲು ಸಹಾಯಕವಾಗುತ್ತದೆ.

❖ ಭಾಷಾ ಪ್ರಯೋಗಶಾಲೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ವ್ಯಕ್ತಿಗತವಾಗಿ ಭಾಷಾ ಕೌಶಲಗಳನ್ನು ಅಭ್ಯಾಸ ಮಾಡಲು ಅನುಕೂಲವಿರುತ್ತದೆ.

❖ ಭಾಷಾ ವಿಜ್ಞಾನದಲ್ಲಿ ಪರಿಣಿತರಾದ ಉಪಾಧ್ಯಾಯರು ಮೇಲ್ವಿಚಾರಕರಾಗಿರುತ್ತಾರೆ. ವಿದ್ಯಾರ್ಥಿಗಳಿಗೆ ವಿವಿಧ ಅಭ್ಯಾಸಗಳನ್ನು ನಿಯೋಜಿಸುವುದು, ಮಾನಿಟರಿಂಗ್ (monitoring) ಮಾಡುವುದು, ಅಭ್ಯಾಸಗಳನ್ನು follow-up ಮಾಡುವುದರಿಂದ ವಿದ್ಯಾರ್ಥಿಗಳ ಭಾಷಾ ಕೌಶಲಗಳು ಉತ್ತಮವಾಗಿ ಬೆಳೆಯುತ್ತವೆ.

❖ ಇದೇ ರೀತಿ ಧ್ವನ್ಯಂಗಗಳ ದೋಷಗಳಿಂದಾಗಿ, ಅಸ್ಪಷ್ಟ ಕಲಿಕೆ ಹಾಗೂ ಅವೈಜ್ಞಾನಿಕ ಅಭ್ಯಾಸಗಳಿಂದ ಮಾತು ಮತ್ತು ಓದಿನಲ್ಲಾಗುವ ದೋಷಗಳನ್ನು ಪರಿಹರಿಸಲು ನೆರವಾಗುತ್ತದೆ.

**28. ಓದುವ ಪರಿಹಾರಾತ್ಮಕ ಕಾರ್ಯದಲ್ಲಿ ಈ ರೀತಿಯಾದ ಪರಿಹಾರಾತ್ಮಕ ಚಟುವಟಿಕೆಯನ್ನು ನಡೆಸುವುದು ಹೆಚ್ಚು ಸೂಕ್ತ'.**

(1) ವಿಶೇಷ ತರಗತಿ, ತರಗತಿ ಶಿಕ್ಷಕರಿಂದ, ತರಗತಿಯ ಎಲ್ಲ ವಿದ್ಯಾರ್ಥಿಗಳಿಗೆ

(2) ವಿಶೇಷ ತರಗತಿ, ವಿಶೇಷ ಶಿಕ್ಷಕರಿಂದ, ಓದುಗಾರಿಕೆಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ

(3) ವಿಶೇಷ ತರಗತಿ, ವಿಶೇಷ ಶಿಕ್ಷಕರಿಂದ, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ

(4) ಸಾಮಾನ್ಯ ತರಗತಿ, ತರಗತಿ ಶಿಕ್ಷಕರಿಂದ, ಓದಗಾರಿಕೆಯಲ್ಲಿ ಹಿಂದುಳಿದ ವದ್ಯಾರ್ಥಿಗಳಿಗೆ

**ಉತ್ತರ: (2) ವಿಶೇಷ ತರಗತಿ, ವಿಶೇಷ ಶಿಕ್ಷಕರಿಂದ, ಓದುಗಾರಿಕೆಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ**

❖ ಓದುವ ಪರಿಹಾರಾತ್ಮಕ ಕಾರ್ಯದಲ್ಲಿ ವಿಶೇಷ ತರಗತಿ, ವಿಶೇಷ ಶಿಕ್ಷಕರಿಂದ, ಓದುಗಾರಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪರಿಹಾರಾತ್ಮಕ ಚಟುವಟಿಕೆಯನ್ನು ನಡೆಸುವುದು ಹೆಚ್ಚು ಸೂಕ್ತ.

❖ ಏಕೆಂದರೆ, ಓದುಗಾರಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಸಾಮಾನ್ಯ ತರಗತಿಯಲ್ಲಿ ಕಲಿಯಲು ಹಿಂಜರಿಕೆ, ಬೌದ್ಧಿಕಮಟ್ಟ ವ್ಯತ್ಯಾಸವಾಗಿರುವ ಕಾರಣ ಅವರಿಗೆ ಪ್ರತ್ಯೇಕ ವಿಶೇಷ ತರಗತಿ, ವಿಶೇಷ ಶಿಕ್ಷಕರಿಂದ ಕಲಿಸುವುದು ಹೆಚ್ಚು ಸೂಕ್ತ.

**29. 'ಒಂದು ಘಟಕದ ಕಲಿಕಾ ಪ್ರಕ್ರಿಯೆಯ ನಂತರ ಭಾಷಾ ಕೌಶಲ್ಯಗಳ ಪ್ರಗತಿಗೆ ಭಾಷಾ ಶಿಕ್ಷಕರು ಪರಿಹಾರ ಬೋಧನೆ ನಡೆಸಬೇಕಾಗಿರುವುದು ಇವರಿಗೆ':**

(1) ತರಗತಿಯ ಆಯ್ದ ವಿದ್ಯಾರ್ಥಿಗಳಿಗೆ

(2) ತರಗತಿಯ ಪ್ರತಿಭಾವಂತ ಮಕ್ಕಳಿಗೆ

(3) ತರಗತಿಯ ಶೇ.5 ರಷ್ಟು ಮಕ್ಕಳಿಗೆ

(4) ತರಗತಿಯ ಎಲ್ಲ ವಿದ್ಯಾರ್ಥಿಗಳಿಗೆ

**ಉತ್ತರ: (4) ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ**

❖ ಒಂದು ಘಟಕದ ಕಲಿಕಾ ಪ್ರಕ್ರಿಯೆಯ ನಂತರ ಭಾಷಾ ಕೌಶಲಗಳ ಪ್ರಗತಿಗೆ ಭಾಷಾ ಶಿಕ್ಷಕರು ಪರಿಹಾರ ಬೋಧನೆ ನಡೆಸಬೇಕಾಗಿರುವುದು ತರಗತಿಯ ಎಲ್ಲ ವಿದ್ಯಾರ್ಥಿಗಳಿಗೆ. ಏಕೆಂದರೆ ಒಂದು ಗೊತ್ತಾದ ಅವಧಿಯಲ್ಲಿ ಬೋಧಿಸಲು ಅನುಕೂಲವಾಗುವ ಮತ್ತು ಸಂಬಂಧಿಸಿದ ವಿಷಯಗಳಿಂದ ಕೂಡಿದ ಪಠ್ಯವಸ್ತುವಿನ ವಿಭಾಗವನ್ನು ಒಂದು ಘಟಕ ಎನ್ನುತ್ತೇವೆ.

Downloaded From : www.kpscvaani.com

his pupils: (ತನ್ನ ವಿದ್ಯಾರ್ಥಿಗಳ ಸುತ್ತಲೂ ಆಂಗ್ಲಭಾಷೆಯ ವಾತಾವರಣ ಸೃಷ್ಟಿಸುವವನು)

Teacher has to create English environment when entered into the classroom, he must exchange greetings like Hello ! Good morning ! How are you etc.

He can ask count the numbers, which is your favourite colour, etc. or he can practice the simple slogans work is worship, practicising the rhyming words, exchanging the informations, obeying the orders, asking for the permissions, etc. and all these activitive should be done in English language. So that the students can understand and practice in their day to day life.

ಶಿಕ್ಷಕರಾದವರು ತಮ್ಮ ವರ್ಗಕೋಣೆಯಲ್ಲಿ ಇಂಗ್ಲಿಷ್ ವಾತಾವರಣವನ್ನು ಸೃಷ್ಟಿಸಬೇಕಾದದ್ದು ಬಹಳ ಮಹತ್ವದ ಕೆಲಸಗಳಲ್ಲೊಂದು. ಶಿಕ್ಷಕರು ವರ್ಗಕೋಣೆ ಯನ್ನು ಪ್ರವೇಶಿಸಿದಾಗಿನಿಂದ ಮುಂಜಾನೆಯ ಶುಭಾಶಯಗಳು ! ನೀವು ಹೇಗಿದ್ದೀರಾ ? ಶುಭೋದಯ ವಿದ್ಯಾರ್ಥಿಗಳೇ ! ಈ ರೀತಿಯಾಗಿ ಇಂಗ್ಲಿಷ್ ಭಾಷೆಯಲ್ಲಿ ತರಗತಿ ಪ್ರಾರಂಭಿಸಬೇಕು.

ಮುಂದುವರೆದು, ತಮ್ಮ ಹಾಜರಾತಿಯನ್ನು ನೀಡಿ, ಸಂಖ್ಯೆಗಳನ್ನು ಹೇಳಿ, ನಿಮಗಿಷ್ಟವಾದ ಬಣ್ಣಗಳು ಯಾವುವು ? ಮುಂತಾದ ಸರಳ ಪ್ರಶ್ನೆಗಳನ್ನು ಇಂಗ್ಲಿಷಿನಲ್ಲಿ ಕೇಳಿ ಅವರಿಂದ ಉತ್ತರ ಪಡೆಯಬೇಕು. ಪಠ್ಯದ ಕೊನೆಗಿರುವ ಚಟುವಟಿಕೆಗಳನ್ನು ಮಾಡಿಸು ವುದರ ಮೂಲಕವೂ ಆಂಗ್ಲ ಭಾಷೆಯ ವಾತಾವರಣ ಸೃಷ್ಟಿಸುವುದು. ಯಾವ ವಿದ್ಯಾರ್ಥಿ ಹೆಚ್ಚು ಆಸಕ್ತಿಯನ್ನು ತೋರಿಸುತ್ತಾನೋ, ಅವನಿಗೆ / ಅವಳಿಗೆ ಚಪ್ಪಾಳೆ ಹಾಕಿಸುವುದರ ಮೂಲಕ ಪುನರ್ಬಲನಗಳನ್ನು ಬಳಸಿ ಇನ್ನೂ ಹೆಚ್ಚಿನದಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು. ತನ್ಮೂಲಕ ಆಂಗ್ಲ ಭಾಷಾ ಕಲಿಕೆಯಲ್ಲಿ ಆಸಕ್ತಿ ಮಾಡುವಂತೆ ಮಾಡುವುದಾಗಿದೆ. ಇವೇ ಮುಂತಾದ ಚಟುವಟಿಕೆಗಳು ಒಬ್ಬ ಉತ್ತಮ ಆಂಗ್ಲಭಾಷಾ ಶಿಕ್ಷಕನಾಗಿ ರೂಪುಗೊಳ್ಳಲು ಸಹಾಯಕ ವಾಗುತ್ತವೆ.

❖ ಆದ್ದರಿಂದ ಆಯ್ಕೆ (4) ಸರಿ ಉತ್ತರವಾಗಿದೆ.

**52. The best way for a teacher to teach grammar is**

(1) inductive method

(2) Deductive method

(3) Structural method

(4) Communicative method

**Ans: (1) inductive method**

**ಇಂಗ್ಲೀಷ್ ವ್ಯಾಕರಣವನ್ನು ಬೋಧಿಸುವ ಅತ್ಯುತ್ತಮ ವಿಧಾನವೆಂದರೆ:**

❖ **Inductive method:**

In this method the learners themselves find out the grammar rules by observing the examples given by the teacher, most of the times teacher allow students to come their own Conclusions, hence this is also known as **"a student - led - approach of teaching."**

ಈ ವಿಧಾನವನ್ನು **"ಅನುಗಮನ ವಿಧಾನ"**ವೆಂದು ಕರೆಯಲಾಗಿದೆ. ಇಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ನೀಡಿದಂತಹ ಉದಾಹರಣೆಗಳನ್ನು ವೀಕ್ಷಿಸಿ, ಅರಿತುಕೊಂಡು ಅಲ್ಲಿರುವ ವ್ಯಾಕರಣದ ನಿಯಮ ಗಳನ್ನು ಕಂಡುಹಿಡಿಯುವಂತಹ ಒಂದು ಪ್ರಕ್ರಿಯೆ ಯಾಗಿದೆ. ಈ ವಿಧಾನದಲ್ಲಿ ಶಿಕ್ಷಕರು, ವಿದ್ಯಾರ್ಥಿಗಳಿಗೆ ತಮ್ಮ ವೀಕ್ಷಣೆಯ ಆಧಾರದ ಮೇಲೆ ನಿಯಮಗಳನ್ನು ರೂಪಿಸಲು ಅನುವು ಮಾಡಿಕೊಡುವುದರಿಂದ ಇದನ್ನು **"a student-led-approach"** ಎಂದು ಕರೆಯ ಲಾಗಿದೆ. ಸಂಕ್ಷಿಪ್ತವಾಗಿ ಇದನ್ನು **"ಉದಾಹರಣೆಯಿಂದ – ನಿಯಮದವರೆಗೆ"** ಎಂದು ಕರೆಯುತ್ತಾರೆ.

❖ **Deductive method : (ನಿಗಮನ ವಿಧಾನ) :**

This is known as traditional method of teaching grammar. In this method target language or rules are explained at the beginning of the class then process will be continued with the examples. This method is basically used for teaching grammar Structures.

Downloaded From : www.kpscvaani.com

(1) 80 (2) 120
(3) 140 (4) 100

**ಉತ್ತರ: (1) 80**

❖ ಬುದ್ಧಿಶಕ್ತಿ ಸೂಚ್ಯಂಕವನ್ನು ಮೊತ್ತ ಮೊದಲು ಪರಿಚಯಿಸಿದವನು: ಜರ್ಮನ್ ಮನೋವಿಜ್ಞಾನಿ "ವಿಲಿಯಂ ಸ್ಟರ್ನ್"

❖ ಬುದ್ಧಿಶಕ್ತಿ ಸೂಚ್ಯಂಕದ ಸೂತ್ರ ಈ ಕೆಳಕಂಡಂತಿದೆ

ಬುದ್ಧಿಶಕ್ತಿ ಸೂಚ್ಯಂಕ = $\frac{\text{ಮಾನಸಿಕ ವಯಸ್ಸು}}{\text{ದೈಹಿಕ ವಯಸ್ಸು}} \times 100$

ಮೋಹನನ ದೈಹಿಕ ವಯಸ್ಸು = 10 ವರ್ಷಗಳು

ಮಾನಸಿಕ ವಯಸ್ಸು = 8 ವರ್ಷಗಳು

ಬುದ್ಧಿಶಕ್ತಿ ಸೂಚ್ಯಂಕ = $\frac{\text{ಮಾ. ವ}}{\text{ದೈ. ವ}} \times 100$

$\frac{8}{10} \times 100$

ಬುದ್ಧಿಶಕ್ತಿ ಸೂಚ್ಯಂಕ = 80

**64. ಅನುವಂಶಿಯ ಗುಣಗಳನ್ನು ತಲೆಮಾರಿನಿಂದ ತಲೆಮಾರಿಗೆ ಕೊಂಡೊಯ್ಯುವ ನಿಜವಾದ ಜೈವಿಕ ಅಂಶಗಳು:**

(1) ವರ್ಣ ತಂತುಗಳು
(2) ಬೀಜಾಣುಗಳು
(3) ಗುಣಾಣುಗಳು
(4) ಅಂಡಾಣುಗಳು

**ಉತ್ತರ: (3) ಗುಣಾಣುಗಳು**

❖ ಅನುವಂಶೀಯ ಗುಣಗಳು ವಂಶಪಾರಂಪರ್ಯವಾಗಿ ಬರುವಂತಹವುಗಳು.

❖ ಗುಣಗಳನ್ನು "Genes" ಎಂದು ಕರೆಯುವರು. ಇವುಗಳೇ ಅನುವಂಶಿಯತೆಯ ಮೂಲ ಘಟಕಗಳು.

❖ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ದೈಹಿಕ ಮತ್ತು ಮಾನಸಿಕ ಗುಣಗಳು ವಂಶಪಾರಂಪರ್ಯವಾಗಿ ವರ್ಗಾವಣೆಯಾಗಲು ಈ ಗುಣಾಣುಗಳೇ ಕಾರಣ ವಾಗಿದೆ.

❖ **ವರ್ಣತಂತುಗಳು:** ವೀರ್ಯಾಣು ಮತ್ತು ಅಂಡಾಣುಗಳು ಎರಡು ಚಿಕ್ಕ ದಾರದಂತಹ ಬಣ್ಣದ ರಚನೆಗಳನ್ನು ಹೊಂದಿವೆ. ಇವುಗಳೇ **"ವರ್ಣತಂತುಗಳು"**.

**65. ವರ್ತನೆಯನ್ನು ಅತ್ಯಂತ ವಸ್ತುನಿಷ್ಠ ಹಾಗೂ ವೈಜ್ಞಾನಿಕವಾಗಿ ಅಧ್ಯಯನ ಮಾಡುವ ವಿಧಾನ**

(1) ಅವಲೋಕನ
(2) ವ್ಯಕ್ತಿ ಅಧ್ಯಯನ
(3) ಪ್ರಾಯೋಗಿಕ ವಿಧಾನ
(4) ಅಂತರ ಅವಲೋಕನ

**ಉತ್ತರ: (3) ಪ್ರಾಯೋಗಿಕ ವಿಧಾನ**

❖ ಮಾನವನ ವರ್ತನೆಯನ್ನು ವಸ್ತುನಿಷ್ಠ ಹಾಗೂ ವೈಜ್ಞಾನಿಕವಾಗಿ ಅಧ್ಯಯನ ಮಾಡುವ ವಿಧಾನ.

❖ ಇದು ವರ್ತನಾವಾದಿಗಳ ಮಹತ್ತರ ಕೊಡುಗೆ.

❖ **ವಿಲ್‌ಹೆಲ್ಮ್‌ವೂಂಟ್** ಎಂಬ ಜರ್ಮನ್ ಮನೋವಿಜ್ಞಾನಿ 1879ರಲ್ಲಿ ಜರ್ಮನಿಯ ಲಿಪ್‌ಜಿಗೆ (ಲೈಪ್ಸಿಗ್) ಎಂಬಲ್ಲಿ ಮೊದಲ ಮನೋವೈಜ್ಞಾನಿಕ ಪ್ರಯೋಗಶಾಲೆ ತೆರೆದನು.

❖ ಮನೋವಿಜ್ಞಾನಕ್ಕೆ ವಿಜ್ಞಾನದಷ್ಟೇ ಮಹತ್ವದ ಸ್ಥಾನಮಾನ ತಂದುಕೊಟ್ಟ ವಿಧಾನವಿದು.

**66. ಸಾಮಾಜಿಕ–ಸಾಂಸ್ಕೃತಿಕ ಸಿದ್ಧಾಂತವನ್ನು ನೀಡಿದವರು**

(1) ಬಂಡರೂ (2) ಬ್ರೂನರ್
(3) ಆಲ್‌ಬರ್ಟ್ ಎಲ್ಲಿಸ್ (4) ವೇಗೋಟಸ್ಕಿ

**ಉತ್ತರ: (4) ವೇಗೋಟಸ್ಕಿ**

❖ ವೇಗೋಟಸ್ಕಿಯ ಸಾಮಾಜಿಕ–ಸಾಂಸ್ಕೃತಿಕ ಕಲಿಕಾ ಸಿದ್ಧಾಂತವು "ಮಾನವನ ಕಲಿಕೆಯಲ್ಲಿ ಸಮಾಜ / ಸಾಮಾಜಿಕ ಪ್ರಕ್ರಿಯೆಯಲ್ಲಿ ಹೇಗೆ ಮಾನವನು ದೈಹಿಕವಾಗಿ ಬೆಳೆಯುವುದರ ಮೂಲಕ ತನ್ನ ಬುದ್ಧಿಶಕ್ತಿ ಅರಿವನ್ನು ಹೆಚ್ಚಿಸಿಕೊಳ್ಳುತ್ತಾನೆ" ಎಂದು ತಿಳಿಸಲಾಗಿದೆ.

**67. ನೈತಿಕ ಬೆಳವಣಿಗೆಯ ಸಿದ್ಧಾಂತವನ್ನು ಪ್ರತಿಪಾದಿಸಿದವರು**

(1) ಕ್ಹೋಲ್‌ಬರ್ಗ್ (2) ಪಿಯಾಜೆ
(3) ಬ್ರೂನರ್ (4) ಗ್ಯಾನೆ

**ಉತ್ತರ: (1) ಕ್ಹೋಲ್‌ಬರ್ಗ್**

❖ ಕ್ಹೋಲ್‌ಬರ್ಗ್ ರವರು ನೈತಿಕ ವಿಕಾಸವನ್ನು ವ್ಯಕ್ತಿಯ "ನ್ಯಾಯನಿರ್ಣಯ ಶಕ್ತಿ" ಎಂದು ವ್ಯಾಖ್ಯಾನಿಸುತ್ತಾರೆ.

❖ ಇವರ ಪ್ರಕಾರ ವ್ಯಕ್ತಿಯೊಬ್ಬ ಒಂದು ನೈತಿಕ ವಿಕಾಸದ ಹಂತದಿಂದ ಮತ್ತೊಂದು ನೈತಿಕ ವಿಕಾಸದ ಹಂತದವರೆಗೆ ಸಾಗುವುದು. ಅವನ "ಜ್ಞಾನಾತ್ಮಕ

Downloaded From: www.kpscvaani.com

❖ ಮಗುವಿನಲ್ಲಿ ತಾರ್ಕಿಕ ಮತ್ತು ಆಲೋಚನೆ ಸಾಮರ್ಥ್ಯ ಮಾಡುವ ವಯಸ್ಸು

❖ ಈ ಹಂತದಲ್ಲಿ ಸಂಖ್ಯಾ ಸ್ಥಾಯಿತ್ವ, 7ನೇ ವಯಸ್ಸಿನಲ್ಲಿ ದ್ರವ್ಯರಾಶಿ ಹಾಗೂ ತನ್ನ 9ನೇ ವಯಸ್ಸಿನಲ್ಲಿ ತೂಕದ ಬಗೆಗಿನ ಪರಿಕಲ್ಪನೆ ಬೆಳೆಸಿಕೊಳ್ಳುವನು ಎಂದು ಅವರು ವಿವರಿಸುತ್ತಾರೆ.

❖ ಆದ್ದರಿಂದ ಆಯ್ಕೆ (1) ಸರಿ.

**71. ಶಾಸ್ತ್ರೀಯ ಕಲಿಕೆಯನ್ನು ಪ್ರತಿಪಾದಿಸಿದವನು**

(1) ಪಾವ್‌ಲೋವ್ (2) ಸ್ಕಿನ್ನರ್

(3) ಥಾರ್ನ್‌ಡೈಕ್ (4) ಕೊಹ್ಲರ್

**ಉತ್ತರ: (1) ಪಾವ್‌ಲೋವ್**

❖ ಈ ರೀತಿಯ ಕಲಿಕೆಯ ಪ್ರತಿಪಾದಕರು ರಷ್ಯಾದ ಶಾರೀರಿಕ ತಜ್ಞ **"ಇವಾನ್ ಪೆಟ್ರೋವಿಚ್ ಪಾವಲೋವ್"**.

❖ ಇದನ್ನು "ಸಾಂಪ್ರದಾಯಿಕ ಅನುಬಂಧನ ಕಲಿಕೆ, ಅಭಿಜಾತ ಅನುಬಂಧನ ಕಲಿಕೆ, ಅನುಬಂಧನ ಕಲಿಕೆ (Learning by classical conditioning) ಎಂದೂ, ಇತರೇ ಹೆಸರುಗಳಿಂದ ಕರೆಯುವರು.

❖ ಆದ್ದರಿಂದ ಆಯ್ಕೆ (1) ಸರಿ ಉತ್ತರ.

**72. ಸ್ಮೃತಿಯ ಪ್ರಕ್ರಿಯಯಲ್ಲಿನ ಹಂತಗಳ ಅನುಕ್ರಮವು**

(1) ಧಾರಣೆ, ದಾಖಲೆ, ಸ್ಮರಿಸುವುದು, ಗುರುತಿಸುವುದು

(2) ದಾಖಲೆ, ಧಾರಣೆ, ಸ್ಮರಿಸುವುದು, ಗುರುತಿಸುವುದು

(3) ಸ್ಮರಿಸುವುದು, ದಾಖಲೆ, ಗುರುತಿಸುವುದು

(4) ಗುರುತಿಸುವುದು, ದಾಖಲೆ, ಧಾರಣೆ, ಸ್ಮರಿಸುವುದು

**ಉತ್ತರ: (2) ದಾಖಲೆ, ಧಾರಣೆ, ಸ್ಮರಿಸುವುದು, ಗುರುತಿಸುವುದು**

❖ ಕಲಿತ ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳುವ ಪ್ರಕ್ರಿಯೆಯನ್ನು "ಸ್ಮೃತಿ" ಎಂದು ಕರೆಯುವರು.

❖ ಈ ಸ್ಮೃತಿಯು 4 ಹಂತಗಳ ಪ್ರಕ್ರಿಯೆಯಾಗಿದೆ.

1. **ಕಲಿಕೆ:** ಇದನ್ನು ದಾಖಲಿಸುವಿಕೆ ಎಂದು ಕರೆಯುವರು.
2. **ಧಾರಣೆ:** ಕಲಿತ ವಿಷಯಗಳು ಸಂಕೇತಗಳಾಗಿ ಸಂಗ್ರಹವಾಗುವ ಕ್ರಿಯೆ.
3. **ಪುನಃಸ್ಮರಣೆ:** ಕಲಿತ ವಿಷಯವನ್ನು ನಮಗೆ ಬೇಕಾದಾಗ ನೆನಪಿಗೆ ತಂದುಕೊಳ್ಳುವ ಕ್ರಿಯೆ
4. **ಗುರ್ತಿಸುವುದು:** ಧಾರಣೆಗೊಳಪಟ್ಟ ವಿಷಯಗಳನ್ನು ನೋಡಿ ಗುರುತಿಸುವ ಕ್ರಿಯೆ.

❖ ಆದ್ದರಿಂದ ಆಯ್ಕೆ (2) ಸರಿ ಉತ್ತರ.

**73. ಬುದ್ಧಿಶಕ್ತಿ ಸೂಚ್ಯಂಕದ ಹಂಚಿಕೆಯನ್ನು ಪ್ರತಿಸಿಧಿಸವ ರೇಖೆಯು**

(1) ಸಾಮಾನ್ಯ ಸಾಂಭಾವ್ಯತಾ ವಕ್ರರೇಖೆ

(2) ಧನಾತ್ಮಕ ವಿಷಯ ವಕ್ರರೇಖೆ


(3) ಋಣಾತ್ಮಕ ವಿಷಯ ವಕ್ರರೇಖೆ

(4) ದ್ವಿಬಹುಲಕ ವಕ್ರರೇಖೆ

**ಉತ್ತರ: (1) ಸಾಮಾನ್ಯ ಸಾಂಭಾವ್ಯತಾ ವಕ್ರರೇಖೆ**

❖ ಸಾಮಾನ್ಯ ಸಂಭವತಾ ವಕ್ರರೇಖೆಯ ಒಂದು ದೊಡ್ಡ ಗುಂಪಿನ ಮಾನಸಿಕ ಸಾಮರ್ಥ್ಯಗಳನ್ನು ಅಳೆದಾಗ "ಅತಿ ಕಡಿಮೆ ಬುದ್ಧಿ ಶಕ್ತಿ ಹೊಂದಿರುವುದರಿಂದ ಹಿಡಿದು ಅತಿ ಹೆಚ್ಚು ಬುದ್ಧಿ ಶಕ್ತಿ ಹೊಂದಿರುವ ಪ್ರತಿಭಾನ್ವಿತರನ್ನು ಸೂಚಿಸುವ ರೇಖೆ"ಯಾಗಿದೆ.

❖ ಸರಳ ಅರ್ಥದಲ್ಲಿ ಹೇಳಬೇಕೆಂದರೆ "ಒಂದು ಸಾಮಾನ್ಯ ವರ್ಗಕೋಣೆಯಲ್ಲಿ ಸರಾಸರಿ ಕಲಿಕಾಕಾರರು ಅತಿ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. ಅತಿ ಕಡಿಮೆ ಬುದ್ಧಿಶಕ್ತಿ ಹೊಂದಿದವರು ರೇಖೆಯ ಒಂದು ಬದಿಯಲ್ಲಿ ಇರುತ್ತಾರೆ. ಹಾಗೂ ಅತಿ ಹೆಚ್ಚು ಬುದ್ಧಿಶಕ್ತಿಯನ್ನು ಹೊಂದಿದವರು ಕೂಡ ರೇಖೆಯ ಮತ್ತೊಂದು ಬದಿಯಲ್ಲಿ ಇರುತ್ತಾರೆ. ಆದ್ದರಿಂದ ಈ ರೇಖೆಯು **"ಗಂಟೆಯಾಕಾರದ ಸಮಪಾರ್ಶ್ವ ಆಕಾರ"**ವನ್ನು ಹೊಂದಿರುತ್ತದೆ.




1. ಅತಿ ಕಡಿಮೆ ಬುದ್ಧಿವಂತರು (ದಡ್ಡರು)
2. ಸರಾಸರಿ ಕಲಿಕಾಕಾರರು
3. ಬುದ್ಧಿವಂತರು

❖ ಆದ್ದರಿಂದ ಆಯ್ಕೆ (1) ಸರಿ.

**74. ಜ್ಞಾನಾತ್ಮಕ ವಿಕಾಸದ ಯಾವ ಹಂತದಲ್ಲಿ ತಾರ್ಕಿಕ ಚಿಂತನೆ ಸಂಪೂರ್ಣವಾಗಿ ವಿಕಾಸಗೊಳ್ಳುತ್ತದೆ?**

(1) ಸಂವೇದನಾಗತಿ ಹಂತ

(2) ಮೂರ್ತಕಾರ್ಯಗಳ ಹಂತ

Downloaded From: www.Kpscvaani.com

ರೂಪಿಸುವುದು" ಈ ಕ್ರಿಯಾಜನ್ಯ ಕಲಿಕೆಯ ಮುಖ್ಯ ಉದ್ದೇಶವಾಗಿದೆ.

**ಒಳನೋಟ ಕಲಿಕೆ:**

❖ ಇದರಲ್ಲಿ ಬಿಡಿಗಿಂತ ಇಡಿಗೇ ಹೆಚ್ಚು ಪ್ರಾಮುಖ್ಯತೆ ಕೊಡಲಾಗಿದೆ.

**ಪ್ರಯತ್ನ ಮತ್ತು ಪ್ರಮಾದ:**

❖ ಇದನ್ನು "ಸಂವೇದನಾ–ಗತಿ ಕಲಿಕೆ" ಎಂದು ಕರೆಯುವರು.

❖ ಪ್ರತಿಪಾದಕರು ಎಡ್ವರ್ಡ್ ಲಿ ಥಾರ್ನ್‌ಡೈಕ್.

❖ ಇವರು ಪ್ರಯತ್ನ – ಪ್ರಮಾದ ಕಲಿಕೆಯು ಅನುಭವದ ವಿಧಾನದ ಮೂಲಕ ಕಲಿಯುತ್ತದೆ ಎಂದು ಹೇಳಿದವರು.

❖ ಇಲ್ಲಿ ಸೈಕಲ್ ಕಲಿಕೆಯು ಕೇವಲ ಒಂದೇ ಬಾರಿಗೆ ಪ್ರಯತ್ನಿಸುವುದರಿಂದ ಬರುವಂತೆ ಕ್ರಿಯೆಯಲ್ಲ ಎಂದು ಅರಿಯುಬೇಕು. ಏಕೆಂದರೆ, ವ್ಯಕ್ತಿ ಮಾನಸಿಕವಾಗಿ ಕಲಿಯಬೇಕೆಂಬ ಅಭಿಲಾಷೆ ಇದ್ದಾಗ ಕಲಿಕೆ ಒಡಗೂಡುತ್ತದೆ. ಇಲ್ಲಿ ವ್ಯಕ್ತಿಯು ಮೊದಲ ಬಾರಿ ಸೈಕಲ್ ಹೊಡೆಯುುವಾಗ ಅದರ ಸಮತೋಲನ (balance) ಕಂಡುಕೊಳ್ಳುವುದು ಮುಖ್ಯ. ನಂತರ ನಿಧಾನವಾಗಿ ಪಡಲ್ ತುಳಿಯುವುದು, ಹ್ಯಾಂಡಲ್ ಬಾರ್‌ಗಳನ್ನು ಸರಿಯಾಗಿ ಬಳಸಿ balance ಮಾಡುವುದು, ವೇಗ ನಿಯಂತ್ರಿಸುವುದು, ಮುಂದಿನ ಹಾಗೂ ಹಿಂದಿನ ಬ್ರೇಕ್‌ಗಳ ಬಳಕೆ ಮುಂತಾದ ಅಂಶಗಳ ಅಭ್ಯಾಸವನ್ನು ಪ್ರತಿದಿನ ಮಾಡಬೇಕಾಗಿರುತ್ತದೆ. ಎಷ್ಟು ಸಾರಿ ವ್ಯಕ್ತಿಗಳು ಅಭ್ಯಾಸವನ್ನು ಮಾಡುತ್ತಾನೋ ಅಷ್ಟು ಪರಿಪೂರ್ಣವಾಗಿ ಸೈಕಲ್ ನಡೆಸುವುದರಲ್ಲಿ ಪಕ್ವತೆಯನ್ನು ಪಡೆದುಕೊಳ್ಳುತ್ತಾನೆ.

❖ ಆದ್ದರಿಂದ ಆಯ್ಕೆ (4) ಸರಿಯಾದ ಉತ್ತರ.

**85. ಒಂದು ಯಂತ್ರವನ್ನು ರಿಪೇರಿ ಮಡುವ ತಂತ್ರವು, ಒಂದು ಕಾರನ್ನು ಓಡಿಸಲು ನೇರವಾಗುವುದಿಲ್ಲ. ಇದು ಯಾವ ರೀತಿಯ ಕಲಿಕೆಯ ವರ್ಗಾವಣೆ?**

(1) ಧನಾತ್ಮಕ ವರ್ಗಾವಣೆ

(2) ಋಣಾತ್ಮಕ ವರ್ಗಾವಣೆ

(3) ಶೂನ್ಯ ವರ್ಗಾವಣೆ

(4) ಮೇಲಿನ ಎಲ್ಲವೂ

**ಉತ್ತರ: (3) ಶೂನ್ಯ ವರ್ಗಾವಣೆ (Zero Transfer)**

**ಕಲಿಕಾ ವರ್ಗಾವಣೆಯಲ್ಲಿ ಮೂರು ವಿಧಗಳು**

**1. ಧನಾತ್ಮಕ ವರ್ಗಾವಣೆ (Positive Transfer)**

❖ ಒಂದು ಸನ್ನಿವೇಶದಲ್ಲಿ ಕಲಿತ ಕಲಿಕೆ ಇನ್ನೊಂದು ಸನ್ನಿವೇಶದ ಕಲಿಕೆಯಲ್ಲಿ ಸಹಾಯ ಮಾಡುವುದು ಧನಾತ್ಮಕ ವರ್ಗಾವಣೆ ಆಗಿದೆ.

❖ ಉದಾ: ಗಣಿತದ ಕಲಿಕೆ, ಮಾನಸಿಕ ಸಾಮರ್ಥ್ಯ ವಿಷಯದ ಕಲಿಕೆಗೆ ಸಹಾಯ ಮಾಡುವುದು.

**2. ಋಣಾತ್ಮಕ ಕಲಿಕೆ:**

❖ ಒಂದು ಸನ್ನಿವೇಶದಲ್ಲಿ ಕಲಿತ ಕಲಿಕೆ ಇನ್ನೊಂದು ಸನ್ನಿವೇಶದ ಕಲಿಕೆಗೆ ತೊಂದರೆಯನ್ನು ಮಾಡಿದರೆ ಅದನ್ನು "ಋಣಾತ್ಮಕ ಕಲಿಕಾ ವರ್ಗಾವಣೆ" ಎಂದು ಕರೆಯುವರು.

❖ ಉದಾ: ಹಿಂದಿ ವಿಷಯ ಮಾತನಾಡುವ ವ್ಯಕ್ತಿಗೆ ತೆಲುಗು ಭಾಷೆಯನ್ನು ಮಾತನಾಡುವಾಗ ತೊಂದರೆ ಯಾಗುವುದು.

**3. ಶೂನ್ಯ ವರ್ಗಾವಣೆ (Zero Transfer)**

❖ ಈ ಹಿಂದೆ ಕಲಿತ ವಿಷಯ / ಕಲಿಕೆಯು ಈಗ ಹೊಸದಾಗಿ ಕಲಿಯುವ ಕಲಿಕೆಗೆ ತೊಂದರೆಯನ್ನು ಮಾಡುವುದಿಲ್ಲ ಮತ್ತು ಸಹಾಯವನ್ನು ಮಾಡುವುದಿಲ್ಲ.

❖ ಉದಾ: ಚೆಸ್ ಆಟದ ಕಲಿಕೆ, ಫುಟ್ಬಾಲ್ ಆಟದ ಕಲಿಕೆಯ ಮೇಲೆ ಯಾವುದೇ ರೀತಿಯ ಪ್ರಭಾವ ಬೀರಲಾರದು.

❖ ಆದ್ದರಿಂದ ಆಯ್ಕೆ (3) ಸರಿ ಉತ್ತರ.

**86. ಶಾಲೆಗಳಲ್ಲಿ ಸಾಮಾನ್ಯ ಮಕ್ಕಳೊಡನೆ ವಿಶೇಷ ಮಕ್ಕಳನ್ನು ಸೇರಿಸಿ ನೀಡುವ ಶಿಕ್ಷಣವು**

(1) ವಿಶೇಷ ಶಿಕ್ಷಣ (2) ಔಪಚಾರಿಕ ಶಿಕ್ಷಣ

(3) ಅನೌಪಚಾರಿಕ ಶಿಕ್ಷಣ (4) ಸಮನ್ವಯ ಶಿಕ್ಷಣ

**ಉತ್ತರ: (4) ಸಮನ್ವಯ ಶಿಕ್ಷಣ**

❖ **ವಿಶೇಷ ಶಿಕ್ಷಣ:** ವಿಶೇಷ ಶಿಕ್ಷಣವೆಂದರೆ ಭಾವನಾತ್ಮಕವಾಗಿ, ಬೌದ್ಧಿಕವಾಗಿ, ಶ್ರವಣ–ದೃಷ್ಟಿ ದೋಷ, ಮಾತನಾಡುವಲ್ಲಿನ ತೊಂದರೆಗಳನ್ನು ಹೊಂದಿರುವುದರ ಮೂಲಕ ಕಲಿಕೆಯುಲ್ಲಿ ಅಸಮರ್ಥತೆಯನ್ನು ಹೊಂದಿರುವ ಮಕ್ಕಳಿಗೆ ನೀಡುವ ಶಿಕ್ಷಣವಾಗಿದೆ.

❖ **ಔಪಚಾರಿಕ ಶಿಕ್ಷಣ:** (Formal Education) ಈ ವಿಧಾನದಲ್ಲಿ ಎಲ್ಲಾ ವರ್ಗದ ವಿದ್ಯಾರ್ಥಿಗಳು

Downloaded From: www.kpscvaani.com

ಗ್ರಂಥಗಳು ಈ ಸಾಲಿಗೆ ಸೇರುತ್ತವೆ. ಇವುಗಳಲ್ಲಿಯೂ ಆಯಾ ಕಾಲಘಟ್ಟದ ಸಾಮಾಜಿಕ , ಸಾಂಸ್ಕೃತಿಕ, ರಾಜಕೀಯ, ಆರ್ಥಿಕ, ಆಡಳಿತ ಮೊದಲಾದ ಸಂಗತಿಗಳ ಚಿತ್ರಣಗಳನ್ನು ಗಮನಿಸಬಹುದು.

- ❖ ದೇಶೀಯ ಸಾಹಿತ್ಯದಲ್ಲಿ ಅತಿಶಯೋಕ್ತಿ, ಉತ್ಪ್ರೆಕ್ಷೆ ಮತ್ತು ಸ್ವಾಮಿನಿಷ್ಠೆ ಅಂಶಗಳು ತೀವ್ರವಾಗಿದ್ದರೆ, ವಿದೇಶೀಯ ಸಾಹಿತ್ಯದಲ್ಲಿ ಸ್ಥಳೀಯ ಜ್ಞಾನದ ಕೊರತೆಯಿಂದ ತಪ್ಪುಗ್ರಹಿಕೆಗಳು ವ್ಯಕ್ತವಾಗಿರುತ್ತವೆ. ಇವು ಲಿಖಿತ ಸಾಹಿತ್ಯದ ನ್ಯೂನ್ಯತೆಗಳಾಗಿವೆ. ಈ ನ್ಯೂನ್ಯತೆಗಳನ್ನು ಗಮನದಲ್ಲಿರಿಸಿಕೊಂಡು ಇತಿಹಾಸ ರಚನೆ ಮಾಡ ಬೇಕಾದ ಸವಾಲು ಇತಿಹಾಸಕಾರರ ಮುಂದಿರುತ್ತದೆ.

**ಶಾಸನಗಳು:**

- ❖ ಶಾಸನ ಎಂದರೆ ಕೊರೆಯಲ್ಪಟ್ಟಿರುವ ಎಂದರ್ಥ. ಕಲ್ಲು, ಬಂಡೆ, ಲೋಹ, ದಂತ, ಸುಟ್ಟ ಮಣ್ಣಿನ ಹಲಗೆ ಮೊದಲಾದ ದೀರ್ಘಕಾಲ ಬಾಳಿಕೆ ಬರುವ ವಸ್ತುಗಳ ಮೇಲೆ ಶಾಸನಗಳನ್ನು ಬರೆಯಲಾಗುತ್ತಿತ್ತು.
- ❖ ಅಂದಿನ ಘಟನೆಗಳ ಜೊತೆಗೆ ನೇರ ಸಂಬಂಧಗಳನ್ನು ಹೊಂದಿರುವುದರಿಂದ ಶಾಸನಗಳು ಹೆಚ್ಚು ವಿಶ್ವಾಸಾರ್ಹ ಆಧಾರಗಳಾಗಿವೆ.
- ❖ ಶಾಸನಗಳೇ ಭಾರತದಲ್ಲಿ ಕಂಡುಬರುವ ಆರಂಭಿಕ ಶಾಸನಗಳಾಗಿವೆ.
- ❖ ಅಶೋಕನ ಬಹುತೇಕ ಶಾಸನಗಳು ಬ್ರಾಹ್ಮಿ ಲಿಪಿಯಲ್ಲಿವೆ. ಅವುಗಳ ಭಾಷೆ ಪ್ರಾಕೃತವಾಗಿದೆ.
- ❖ ಕನ್ನಡ, ತಮಿಳು, ತೆಲುಗು, ಸಂಸ್ಕೃತ, ಪ್ರಾಕೃತ ಭಾಷೆಗಳಲ್ಲಿ ಸಾವಿರಾರು ಶಾಸನಗಳು ಕಂಡುಬರುತ್ತವೆ.
- ❖ ಸಮುದ್ರಗುಪ್ತನ ಅಲಹಾಬಾದ್ ಸ್ಥಂಭಶಾಸನ, ಇಮ್ಮಡಿ ಪುಲಿಕೇಶಿಯ ಐಹೊಳೆ ಶಾಸನ, ಖಾರವೇಲನ ಹಾಥಿಗುಂಪ ಶಾಸನ ಮೊದಲಾದವುಗಳು ಅವರ ಸೈನಿಕ ಸಾಧನೆಗಳನ್ನು ವಿವರಿಸುತ್ತವೆ.
- ❖ ಉತ್ತರ ಮೇರೂರಿನ ಶಾಸನ ಚೋಳರ ಗ್ರಾಮಾಡಳಿತ ವನ್ನು ತಿಳಿಸುತ್ತದೆ.
- ❖ ಇವಲ್ಲದೆ ಅನೇಕ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಸಂಗತಿಗಳನ್ನು ಶಾಸನಗಳು ತಿಳಿಸುತ್ತವೆ.

**93. ಭಾರತದಲ್ಲಿ ಮೊತ್ತಮೊದಲಿಗೆ ಸಾಮ್ರಾಜ್ಯ ಕಟ್ಟಿ ಐಕ್ಯತೆಯನ್ನು ಮೂಡಿಸಿದ ಹಂತ:**

(1) ಕುಶಾಣರು (2) ಗುಪ್ತರು

(3) ಶಾತವಾಹನರು (4) ಮೌರ್ಯರು

**ಉತ್ತರ: (4) ಮೌರ್ಯರು**

- ❖ ಮೌರ್ಯ ಸಾಮ್ರಾಜ್ಯದ ಸ್ಥಾಪನೆಯು ಭಾರತದ ಇತಿಹಾಸದಲ್ಲಿ ಒಂದು ಮೈಲುಗಲ್ಲಾಗಿದೆ. ಕಾರಣ ಇದು ಭಾರತದ ಪ್ರಥಮ ಐತಿಹಾಸಿಕ ಸಾಮ್ರಾಜ್ಯವಲ್ಲದೆ ಅತ್ಯಂತ ದೊಡ್ಡ ಸಾಮ್ರಾಜ್ಯವೂ ಹೌದು.
- ❖ ರಾಜಕೀಯವಾಗಿ ಅದು ಹರಿದುಹಂಚಿ ಹೋಗಿದ್ದ ಭಾರತವನ್ನು ಒಟ್ಟುಗೂಡಿಸಿತು. ವಿದೇಶಿಯರನ್ನು ಹೊರಹಾಕಿ ಸಾಧಿಸಿತು. ಆಡಳಿತಾತ್ಮಕವಾಗಿ ವಿಶಾಲವಾದ ಸಾಮ್ರಾಜ್ಯಕ್ಕೆ ದಕ್ಷವಾದ ಕೇಂದ್ರೀಕೃತ ಪ್ರಭುತ್ವವನ್ನು ಒದಗಿಸಿತು. ಅವರು ರೂಪಿಸಿದ ಆಡಳಿತ ಪದ್ಧತಿ ಮುಂದಿನವರಿಗೆ ಮಾದರಿಯಾಯಿತು. ಭಾರತದ ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ವಿದೇಶಗಳಿಗೆ ಒಟ್ಟು ಭಾರತಕ್ಕೆ ಬೃಹತ್ ಭಾರತದ ಕೀರ್ತಿ ತಂದುಕೊಟ್ಟಿತು.
- ❖ ಅಶೋಕನು ಪಾಲಿಸಿದ ನೈತಿಕ ಉನ್ನತಾದರ್ಶಗಳು, ಸುಖಿರಾಜ್ಯ, ಅಹಿಂಸಾ ನೀತಿ, ಆದರ್ಶ ರಾಜ್ಯಭಾರತ್ವ ನೀತಿಗಳು ಭಾರತಕ್ಕೆ ವಿಶ್ವಮಾನ್ಯ ಕೀರ್ತಿ ತಂದುಕೊಟ್ಟವು.
- ❖ ಅದು ಬೌದ್ಧ ಧರ್ಮವನ್ನು ವಿಶ್ವವಿಖ್ಯಾತಗೊಳಿಸಿತು.
- ❖ ಮೌರ್ಯ ಸಾಮ್ರಾಜ್ಯವು ಭಾರತದ ಇತಿಹಾಸಕ್ಕೆ ನಿಖರವಾದ ಕಾಲಗಣನೆ ಒದಗಿಸಿತು. ಈ ಎಲ್ಲಾ ಕಾರಣಗಳಿಂದ ಅದು ಮಹತ್ವ ಪಡೆದುಕೊಂಡಿದೆ .
- ❖ **ಚಂದ್ರಗುಪ್ತ ಮೌರ್ಯ**ನು ಮೌರ್ಯ ವಂಶದ ಸ್ಥಾಪಕ. ಬಿಹಾರಿನ **ಪಾಟಲೀಪುತ್ರ** ಅವನ ರಾಜಧಾನಿ, **ಧರ್ಮಚಕ್ರ** ಅವರ ರಾಜ್ಯ ಲಾಂಛನವಾಗಿತ್ತು.

**ಗುಪ್ತರು:**

- ❖ ಮೌರ್ಯರ ಮತ್ತು ಕುಶಾನರ ನಂತರ ಬಂದ ಸಾಮ್ರಾಜ್ಯವಾಗಿದೆ.
- ❖ **ಶ್ರೀಗುಪ್ತ** ಇದರ ಸ್ಥಾಪಕ.
- ❖ ಅವರ ಕಾಲವನ್ನು **"ಸುವರ್ಣ ಯುಗ"** ಎಂದು ವಿ.ಎ.ಸ್ಮಿತ್ ಅವರು ಕರೆದಿದ್ದಾರೆ.
- ❖ **ಎರಡನೇ ಚಂದ್ರಗುಪ್ತ** ಪ್ರಸಿದ್ಧನಾಗಿದ್ದಾನೆ.

Downloaded From: www.kpscvaani.com

ಕನಿಷ್ಕನ ನೇತೃತ್ವದಲ್ಲಿಯೇ ನಡೆಸಲಾಯಿತು. ಈತನೂ ಅಶೋಕನ ರೀತಿಯಲ್ಲಿಯೇ ಬೌದ್ಧಧರ್ಮ ಪ್ರಚಾರಕ್ಕಾಗಿ ಮಧ್ಯಏಷ್ಯ ಹಾಗೂ ಚೀನಾಗಳಿಗೆ ನಿಯೋಗಗಳನ್ನು ಕಳುಹಿಸಿದ್ದನು.

❖ ಇವನ ಕಾಲದಲ್ಲಿ ಕಲೆ ಮತ್ತು ವಾಸ್ತುಶಿಲ್ಪವು ಸಹ ಪ್ರೋತ್ಸಾಹವನ್ನು ಪಡೆಯಿತು.

**ಅಶೋಕ:**

❖ **"ಶಾಸನಗಳ ಪಿತಾಮಹ"** ಸಾಮ್ರಾಟ್ **ಅಶೋಕ.**

❖ ಭಾರತದ ಇತಿಹಾಸದಲ್ಲಿಯೇ **ವಮೌರ್ಯ ಸಾಮ್ರಾಜ್ಯದ ಅಧಿಪತಿ** ಆಗಿದ್ದನು.

**96. ಅಲ್ಲಾವುದ್ದೀನ್ ಖಿಲ್ಜಿಯ ಭವ್ಯರಚನೆ**

(1) ಕೆಂಪುಕೋಟೆ (2) ಅಲೈದರ್ವಾಜ

(3) ಬುಲಂದ ದರ್ವಾಜ (4) ಚಾರ್‌ಮಿನಾರ್

**ಉತ್ತರ: (2) ಅಲೈದರ್ವಾಜ**

❖ **ಅಲ್ಲಾವುದ್ದೀನ್ ಖಿಲ್ಜಿಯ** ಭವ್ಯ ರಚನೆ ಎಂದರೆ ಅಲೈದರ್ವಾಜ ಆಗಿದೆ.

❖ ಇದರ ಜೊತೆಗೆ ದೆಹಲಿಯ ಹೊಸ ನಗರವಾದ ಸಿರಿಕೋಟೆ, ಜಾಮಿ ಮಸೀದಿ, ಆಲೈಕೋಟೆಗಳನ್ನು **ಅಲ್ಲಾವುದ್ದೀನ್ ಖಿಲ್ಜಿ** ನಿರ್ಮಿಸಿದನು.

❖ **ಕೆಂಪು ಕೋಟೆಯನ್ನು** ಶಹಜಹಾನನು ಕಟ್ಟಿಸಿದನು.

❖ **ಬುಲಂದ್ ದರ್ವಾಜಾ: ಅಕ್ಬರ್** ತನಗೆ ಗುಜರಾತನಲ್ಲಿ ವಿಜಯಶಾಲಿಯಾದ ಸಂದರ್ಭದಲ್ಲಿ ಬುಲಂದ್ ದರ್ವಾಜಾ (ಮಹಾನ್ ಬಾಗಿಲು) ಅನ್ನು 17ನೇ ಶತಮಾನದಲ್ಲಿ ಕಟ್ಟಿಸಿದನು.

❖ **ಮಹಮ್ಮದ್ ಕುಲಿ ಕುತ್ಬ್ ಷಾ** ಚಾರ್‌ಮಿನಾರ್ ಅನ್ನು ಕಟ್ಟಿಸಿದನು. ಇದು ಈಗಿನ ಹೈದರಾಬಾದ್‌ನಲ್ಲಿದೆ.

**97. ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿಯು ಮೊಘಲ್ ಚಕ್ರವರ್ತಿಯಿಂದ ಹೈದರಾಬಾದ್, ಬಂಗಾಳ, ಗುಜರಾತ್ ಪ್ರದೇಶಗಳಲ್ಲಿ ತೆರಿಗೆ ರಹಿತ ವ್ಯಾಪರ ಮಾಡಲು ಅನುಮತಿ ಪಡೆದರು. ಇದರ ಪರಿಣಾಯ**

(1) ಹೈದರಾಬಾದ್, ಬಂಗಾಳ, ಗುಜರಾತ್‌ಗಳಲ್ಲಿ ಸಾಮ್ರಾಜ್ಯ ಸ್ಥಾಪಿಸಿದರು

(2) ಚಕ್ರವರ್ತಿಯ ಸಾಮಂತರಾಗಿ ಹೈದರಾಬಾದ್, ಬಂಗಾಳ, ಗುಜರಾತ್‌ಗಳಲ್ಲಿ ಆಳಿದರು

(3) ಬಕ್ಸಾರ್ ಕದನ ನಡೆಯಿತು

(4) ಚಕ್ರವರ್ತಿಗೆ ಪ್ರತಿವರ್ಷ 3000 ರೂಪಾಯಿಗಳನ್ನು ಕೊಡಬೇಕಾಯಿತು

**ಉತ್ತರ: (4) ಚಕ್ರವರ್ತಿಗೆ ಪ್ರತಿವರ್ಷ 3000 ರೂಪಾಯಿಗಳನ್ನು ಕೊಡಬೇಕಾಯಿತು**

❖ 1717ರಲ್ಲಿ ಮೊಗಲ್ ಚಕ್ರವರ್ತಿ ಫರುಕ್ಸಿಯಾರನು ಬಂಗಾಳದಲ್ಲಿ ಬ್ರಿಟಿಷರಿಗೆ ತೆರಿಗೆ ರಹಿತವಾಗಿ ವ್ಯಾಪಾರ ಮಾಡಲು ಅನುಮತಿ (ಫಾರ್ಮಾನು) ನೀಡಿದ್ದನು.

❖ ಅದರಂತೆ ಬ್ರಿಟಿಷರಿಗೆ ದಸ್ತಕ್‌ಗಳನ್ನು ಕೊಡಲಾಗಿತ್ತು. ದಸ್ತಕ್‌ಗಳೆಂದರೆ **"ಈ ವಸ್ತುಗಳು ಬ್ರಿಟೀಷರಿಗೆ ಸೇರಿವೆ ಆದ್ದರಿಂದ ಅವುಗಳಿಗೆ ತೆರಿಗೆ ಕೊಡಬೇಕಾಗಿಲ್ಲ"** ಎಂದು ಘೋಷಿಸಿ ಕೊಟ್ಟ ಉಚಿತ ಪಾಸುಗಳು.

❖ 1717ರ ಫರ್ಮಾನ್‌ನಂತೆ ಬಂಗಾಳ, ಗುಜರಾತ್ ಹೈದರಾಬಾದ್, ಒರಿಸ್ಸಾ ಪ್ರದೇಶಗಳಲ್ಲಿ ತೆರಿಗೆ ರಹಿತ ವ್ಯಾಪಾರ ಮಾಡಲು ಅನುಮತಿ ಪಡೆದರು. ಇದರ ಪರಿಣಾಮ ಚಕ್ರವರ್ತಿಗೆ ಪ್ರತಿವರ್ಷ 3000 ರೂಪಾಯಿಗಳನ್ನು ಕೊಡಬೇಕಾಯಿತು.

**98. ತಾನೇ ಪೇಶ್ವೆ ಎಂದು ಘೋಷಿಸಿ ಕಾನ್ಪುರ ದಂಗೆಯ ನಾಯಕತ್ವ ವಹಿಸಿದವರು.**

(1) ಬಹದ್ದೂರ್ ಷಾ (2) ತಾತ್ಯಾ ಟೋಪಿ

(3) ನಾನಾ ಸಾಹೇಬ್ (4) ವಾಜಿಬ್ ಅಲಿ

**ಉತ್ತರ: (3) ನಾನಾ ಸಾಹೇಬ್**

❖ ಜೂನ್ 5, 1857ರಂದು ಕಾನ್ಪುರದಲ್ಲಿ ದಂಗೆ ಆರಂಭವಾಯಿತು.

❖ ಪೇಶ್ವೆ ಎರಡನೆಯ ಬಾಜಿರಾಯನ ದತ್ತುಪುತ್ರ "ನಾನಾಸಾಹೇಬ" ಅದಕ್ಕೆ ನಾಯಕನಾಗಿದ್ದು, ಆತ ತಾನೇ ಪೇಶ್ವೆ ಎಂದು ಘೋಷಿಸಿಕೊಂಡನು.

❖ ದಿಲ್ಲಿಯಲ್ಲಿ ಸೇನಾಪತಿ **ಬಖ್ತ್‌ಖಾನ್,** ಕಾನ್ಪುರದಲ್ಲಿ **ನಾನಾ ಸಾಹೇಬ್** ಮತ್ತು **ತಾಂತ್ಯಾ ಟೋಪೆ,** ಲಕ್ನೋದಲ್ಲಿ **ಬೇಗವ್ ಹಜ್ರತ್ ಮಹಲ್,** ಝಾನ್ಸಿಯಲ್ಲಿ **ಲಕ್ಷ್ಮೀಬಾಯಿ** ಮತ್ತು ಬಿಹಾರದಲ್ಲಿ **ಕುಂವರ್ ಸಿಂಗ್** ರವರ ನೇತೃತ್ವದಲ್ಲಿ ದಂಗೆಗಳು ನಡೆದವು.

❖ ಬ್ರಿಟಿಷರು ದಂಗೆಯನ್ನು ಒಂದೊಂದಾಗಿ ದಮನ ಮಾಡಿದರು. ಬಂಡಾಯವು ಉತ್ತರ ಭಾರತಕ್ಕೆ ಸೀಮಿತವಾಗಿರದೆ, ದಕ್ಷಿಣ ಭಾರತಕ್ಕೂ ಹಬ್ಬಿತು.

❖ ಕರ್ನಾಟಕದಲ್ಲಿ **ಮುಂಡರಗಿ ಭೀಮರಾವ್, ಹಲಗಲಿ ಬೇಡರು, ಸುರಪುರದ ನಾಲ್ಕನೇ ವೆಂಕಟಪ್ಪ ನಾಯಕ** ಮತ್ತು **ನರಗುಂದದ ಬಾಬಾಸಾಹೇಬ** ಮುಖ್ಯ

Downloaded From: www.kpscvaani.com

(4) ವಿಧಾನ ಸಭೆಯ ಸದಸ್ಯರ ಸಂಖ್ಯೆಯಷ್ಟೇ

**ಉತ್ತರ: (2) ವಿಧಾನ ಸಭೆಯ ಸದಸ್ಯರ 1/3 ರಷ್ಟು**

- ❖ ಸಾಮಾನ್ಯವಾಗಿ ರಾಜ್ಯದ ವಿಧಾನ ಪರಿಷತ್ತಿನ ಸಂಖ್ಯಾಬಲ ವಿಧಾನಸಭೆಯ ಸದಸ್ಯರು 1/3 ರಷ್ಟು ಇರುತ್ತದೆ.

**ವಿಧಾನ ಪರಿಷತ್ತು (ಮೇಲ್ಮನೆ, ಬುದ್ಧಿವಂತರ ಸದನ) (Legislative Council)**

- ❖ ವಿಧಾನ ಪರಿಷತ್‌ಗೆ ಸ್ಪರ್ಧಿಸಲು **ಕನಿಷ್ಠ 30 ವರ್ಷ** ವಯಸ್ಸಾಗಿರಬೇಕು.
- ❖ ಇದೊಂದು **ಶಾಶ್ವತ ಸದನ**ವಾಗಿದ್ದು, ಎರಡು ವರ್ಷಕ್ಕೊಮ್ಮೆ **1/3ರಷ್ಟು** ಸದಸ್ಯರುಗಳು ನಿವೃತ್ತ ರಾಗುತ್ತಾರೆ.
- ❖ ವಿಧಾನ ಪರಿಷತ್ತಿನ ಸದಸ್ಯರ ಅಧಿಕಾರವಧಿ 6 ವರ್ಷಗಳು.
- ❖ ವಿಧಾನ ಪರಿಷತ್ ಚುನಾವಣೆಯು ಪರೋಕ್ಷ ಚುನಾವಣೆಯಾಗಿದ್ದು, ವಿವಿಧ ಕ್ಷೇತ್ರಗಳಿಂದ ಆಯ್ಕೆ ಮಾಡಲಾಗುತ್ತದೆ.
- ❖ **ಸಂವಿಧಾನದ 169 ನೇ ವಿಧಿ:** ಸಂಸತ್ತು ವಿಧಾನ ಪರಿಷತ್ತನ್ನು ಆಯಾ ರಾಜ್ಯದ ವಿಧಾನ ಸಭೆಯ ಶಿಫಾರಸ್ಸಿನ ಮೇಲೆ ಪರಿಷತ್ತನ್ನು ಸ್ಥಾಪಿಸಬಹುದು ಅಥವಾ ರದ್ದುಗೊಳಿಸಬಹುದು.

**ರಾಜ್ಯದ ವಿಧಾನ ಪರಿಷತ್‌ನ ವಿಸರ್ಜನೆ ಮತ್ತು ಸೃಜಿಸುವ ಅಧಿಕಾರ:**

- ❖ ವಿಧಾನ ಸಭೆಯನ್ನು ಹೊಂದುವುದು ಕಡ್ಡಾಯವಾದರೆ, ವಿಧಾನ ಪರಿಷತ್ತು ಕಡ್ಡಾಯವಲ್ಲ.
- ❖ ಸಂವಿಧಾನದ **169ನೇ ವಿಧಿ** ಅನ್ವಯ ಆಯಾ ರಾಜ್ಯದ ವಿಧಾನ ಸಭೆಯು ಒಟ್ಟು ಸದಸ್ಯರ ಬಹುಮತದ ಮೂಲಕ ಸಭೆಯಲ್ಲಿ ಹಾಜರಿದ್ದು, ಮತ ಕೊಡುವ ಸದಸ್ಯರ **2/3 ಭಾಗಕ್ಕೆ** ಕಡಿಮೆ ಇಲ್ಲದಷ್ಟು ಸದಸ್ಯರ ಬಹುಮತದ ಮೂಲಕ ಈ ನಿರ್ಣಯವನ್ನು ಅಂಗೀಕರಿಸಿದರೆ, ಸಂಸತ್ತಿನ ಕಾನೂನಿನ ಮೂಲಕ ರಾಜ್ಯ ವಿಧಾನ ಪರಿಷತ್ತನ್ನು ಸೃಷ್ಟಿಸಬಹುದು ಮತ್ತು ರದ್ದುಪಡಿಸಬಹುದು.
- ❖ **ವಿಧಾನ ಪರಿಷತ್ತಿನ ಸಂರಚನೆ: ಸಂವಿಧಾನದ 171 ನೇ ವಿಧಿ:** ವಿಧಾನ ಪರಿಷತ್ತಿನ ರಚನೆ ಬಗ್ಗೆ ತಿಳಿಸುತ್ತದೆ . ಕರ್ನಾಟಕ ರಾಜ್ಯದಲ್ಲಿ **75 ಸದಸ್ಯರಿದ್ದು,** ಅವರು ಗಳೆಂದರೆ,

| **ಕ್ಷೇತ್ರಗಳು** | **ಒಟ್ಟು ಸ್ಥಾನಗಳು** |
|---|---|
| ಸ್ಥಳೀಯ ಸಂಸ್ಥೆಗಳು(1/3) | 25 |
| ವಿಧಾನ ಸಭೆ (1/3) | 25 |
| ಪದವೀಧರ ಶಿಕ್ಷಕ ಕ್ಷೇತ್ರ (1/12) | 07 |
| ಪದವೀಧರ ಕ್ಷೇತ್ರ (1/12) | 07 |
| ನಾಮಕರಣ (1/6) | 11 |
| **ಒಟ್ಟು** | **75** |

**ವಿಧಾನ ಪರಿಷತ್‌ನ ಅಧಿಕಾರಗಳು**

- ❖ ಹಣಕಾಸಿನ ವಿಷಯದಲ್ಲಿ ವಿಧಾನಸಭೆಗೆ ಹೆಚ್ಚಿನ ಅಧಿಕಾರವಿದೆ. ಆದರೆ ಹಣಕಾಸಿನ ಮಸೂದೆಗೆ ಸಂಬಂಧಿಸಿದಂತೆ ವಿಧಾನ ಪರಿಷತ್ ತಿರಸ್ಕರಿಸಲು ಅಧಿಕಾರ ಇಲ್ಲದಿದ್ದರೂ 14 ದಿನಗಳವರೆಗೆ ತಡೆ ಹಿಡಿಯಬಹುದು.
- ❖ ವಿಧಾನ ಪರಿಷತ್ ಶಾಸನಗಳಿಗೆ ಸಂಬಂಧಿಸಿದಂತೆ **3 ತಿಂಗಳವರೆಗೆ** ತಡೆಹಿಡಿಯಬಹುದು. ಎರಡನೇ ಬಾರಿಗೆ ಕಳುಹಿಸಿಕೊಟ್ಟಾಗ **ಒಂದು ತಿಂಗಳೊಳಗೆ** ಅಂಗೀಕಾರ ನೀಡಬೇಕು.
- ❖ ಇಲ್ಲವಾದರೆ ಎರಡೂ ಸದನದಿಂದ ಅಂಗೀಕಾರವಾಗಿದೆ ಎಂದು ಭಾವಿಸಿ ರಾಜ್ಯಪಾಲರ ಒಪ್ಪಿಗೆಗೆ ಕಳುಹಿಸಿ ಕೊಡಬಹುದು.

**ವಿಧಾನ ಪರಿಷತ್ತು ಹೊಂದಿರುವ 6 ರಾಜ್ಯ & ಸ್ಥಾನಗಳು**

1. ಕರ್ನಾಟಕ (75) 2. ಉತ್ತರ ಪ್ರದೇಶ (100)
3. ಆಂಧ್ರಪ್ರದೇಶ (58) 4. ಬಿಹಾರ (75)
5. ಮಹಾರಾಷ್ಟ್ರ (78) 6. ತಲಂಗಾಣ (40)

(ಇತ್ತೀಚೆಗೆ ಆಂಧ್ರಪ್ರದೇಶ ವಿಧಾನಸಭೆಯು ತನ್ನ ರಾಜ್ಯದ ವಿಧಾನ ಪರಿಷತ್ತು ರದ್ದು ಮಾಡಲು ಅನುಮೋದನೆ ನೀಡಿದ್ದು, ಸಂಸತ್ತಿನ ಅನುಮತಿ ಪಡೆಯಬೇಕಿದೆ.) ಪಶ್ಚಿಮ ಬಂಗಾಳ ವಿಧಾನಸಭೆಯು ವಿಧಾನ ಪರಿಷತ್‌ಅನ್ನು ಸ್ಥಾಪಿಸುವ ಸಂಬಂಧಿಸಿದಂತೆ ಅನುಮೋದನೆ ನೀಡಿದೆ.

**128. ಭಾರತದ ರಾಷ್ಟ್ರಪತಿಯಾಗಲು ಇರಬೇಕಾದ ಅರ್ಹತೆಗಳು**

a) 35 ವರ್ಷ ಅಥವಾ ಅದಕ್ಕಿಂತ ಮೇಲ್ಪಟ್ಟಿರಬೇಕು

b) 50 ವರ್ಷ ಅಥವಾ ಅದಕ್ಕಿಂತ ಮೇಲ್ಪಟ್ಟಿರಬೇಕು

c) ಭಾರತದ ಪ್ರಜೆಯಾಗಿರಬೇಕು

d) ಪಾಂಡಿತ್ಯ ಹೊಂದಿದ ವ್ಯಕ್ತಿಯಾಗಿರಬೇಕು

e) ಭಾರತ ಸರ್ಕಾರದಲ್ಲಿ ಯಾವುದೇ ಲಾಭದಾಯಕ ಹುದ್ದೆ ಹೊಂದಿರಬಾರದು

Downloaded From: www.kpscvaani.com

**ಉತ್ತರ: (4) ವಿದ್ಯಾರ್ಥಿಗಳಲ್ಲಿ ಐತಿಹಾಸಿಕ ಚಿಂತನಾ ಶಕ್ತಿ ಹೆಚ್ಚಿಸುವುದು**

- ❖ ಉತ್ತಮ ಪೌರತ್ವದ ಲಕ್ಷಣಗಳನ್ನು ಬೆಳೆಸುವುದು ಪೌರನೀತಿ ಬೋಧನಾದ ಉದ್ದೇಶವಾಗಿದೆ.
- ❖ ಭೂಮಿಯ ಅಧ್ಯಯನದ ಬಗ್ಗೆ ಆಸಕ್ತಿಯನ್ನು ಹೆಚ್ಚಿಸುವುದು. ಇದು ಭೂಗೋಳಶಾಸ್ತ್ರ ಬೋಧನ ಶಾಸ್ತ್ರದ ಉದ್ದೇಶವಾಗಿದೆ.
- ❖ ವಿದ್ಯಾರ್ಥಿಗಳಲ್ಲಿ ಐತಿಹಾಸಿಕ ಚಿಂತನಾಶಕ್ತಿ ಹೆಚ್ಚಿಸುವುದು, ಇತಿಹಾಸ ಬೋಧನೆಯ ಸಾಮಾನ್ಯ ಉದ್ದೇಶವಾಗಿದೆ.

ಇತಿಹಾಸ ಬೋಧನೆಯ ಉದ್ದೇಶಗಳು:

1. ಮಗುವಿನಲ್ಲಿ ಸ್ಮರಣೆ ಮತ್ತು ಜಾಗರೂಕತೆ ಶಕ್ತಿಯನ್ನು ಬೆಳೆಸುವುದು.
2. ಐತಿಹಾಸಿಕ ಮನೋಭಾವ (Historical mindedness) ವನ್ನು ಬೆಳೆಸುವುದು.
3. ಐತಿಹಾಸಿಕ ಕಲ್ಪನಾಶಕ್ತಿ (Historical Imagination) ಯನ್ನು ಬೆಳೆಸುವುದು.
4. ರಾಷ್ಟ್ರೀಯತೆಯನ್ನು ಬೆಳೆಸುವುದು.
5. ಪೌರತ್ವವನ್ನು ಬೆಳೆಸುವುದು
6. ಅಂತರರಾಷ್ಟ್ರೀಯ ತಿಳುವಳಿಕೆಯುನ್ನುಂಟು ಮಾಡುವುದು.
7. ಮಗುವಿನಲ್ಲಿ ಭಾವೈಕ್ಯತೆಯನ್ನು ಬೆಳೆಸುವುದು.
8. ಭಾರತೀಯ ಸಂಸ್ಕೃತಿಯನ್ನು ಅಳವಡಿಸುವುದು.
9. ಮಗುವನ್ನು ಸಮಾಜೀಕರಿಸುವುದು.
10. ವಿದ್ಯಾರ್ಥಿಗಳಲ್ಲಿ ನಕಾಶೆ ಬಿಡಿಸುವ ಮತ್ತು ಓದುವ, ಕಾಲರೇಖೆ, ಕಾಲನಕ್ಷೆಗಳನ್ನು ತಯಾರಿಸುವ ಕೌಶಲ್ಯಗಳನ್ನು ಬೆಳೆಸುವದು.
11. ವಿದ್ಯಾರ್ಥಿಗಳಲ್ಲಿ ವಿವಿಧ ಧರ್ಮ, ಜನರು, ದೇಶಗಳು, ಸಾಮಾಜಿಕ, ರಾಜಕೀಯ ಸಂಘ – ಸಂಸ್ಥೆಗಳ ಮತ್ತು ವಿಚಾರ ಅಭಿಪ್ರಾಯಗಳ ಬಗೆಗೆ ಸರಿಯಾದ ಮನೋಭಾವನೆ ಬೆಳೆಸುವುದು.
12. ವಿದ್ಯಾರ್ಥಿಗಳಿಗೆ ಐತಿಹಾಸಿಕ ಘಟನೆಗಳ ಕಾರಣ ಮತ್ತು ಪರಿಣಾಮ ಸಂಬಂಧಗಳನ್ನು ತಿಳಿಸುವುದು ಮೇಲಿನ ಇತಿಹಾಸ ಬೋಧನೆಯ ಉದ್ದೇಶಗಳಲ್ಲಿ ಪ್ರಮುಖವಾದವುಗಳನ್ನು ವಿವರವಾಗಿ ತಿಳಿದು ಕೊಳ್ಳೋಣ.

**1. ಐತಿಹಾಸಿಕ ಮನೋಭಾವ ಬೆಳೆಸುವುದು:**

- ❖ ಇತಿಹಾಸದ ಅಧ್ಯಯನವು ಮಕ್ಕಳಿಗೆ ಪ್ರಸ್ತುತ ಸ್ಥಿತಿಯು ಹಿಂದಿನ ಕಾಲದ ಪರಿವರ್ತನೆಯಾಗಿದೆ ಎಂಬುದನ್ನು ತಿಳಿದುಕೊಳ್ಳಲು ಸಹಾಯಕವಾಗಿರುತ್ತದೆ.
- ❖ ಇತಿಹಾಸವು ಯಾವುದನ್ನು ತೊರೆಯಬೇಕು, ಯಾವುದನ್ನು ಅನುಸರಿಸಬೇಕು ಎಂಬ ತಿಳಿವಳಿಕೆಯ ಮೂಲಕ ಮಕ್ಕಳಲ್ಲಿ **ಕಾಲದ ಪರಿಕಲ್ಪನೆ, ಕಾಲ ಮತ್ತು ಸ್ಥಳಗಳ ನಡುವಿನ ಸಂಬಂಧ**ವನ್ನು ತಿಳಿಸುತ್ತದೆ, ಜೀವನ ಪ್ರವಾಹವು ಅನಾದಿಯಿಂದಲೂ ನಿರಂತರವಾಗಿ ಪ್ರವಹಿಸುತ್ತದೆ.
- ❖ ತಾನು ನಿರ್ಮಿಸಿದ್ದನ್ನೆಲ್ಲಾ ಕಾಲಪುರುಷನು ಕುಟ್ಟಿ ನೆಲಸಮ ಮಾಡುವುದರೊಳಗೆ ಮಾನವನು ತಿರುಗಿ ಕಟ್ಟುತ್ತಾನೆ: ಹೀಗೆ ಈ ಸ್ಪರ್ಧೆ ಪ್ರವಾಹ , ಪ್ರಗತಿ , ಈ ನಿರಂತರತೆಯ ಅಭ್ಯಾಸವ ವಿದ್ಯಾರ್ಥಿಯ ಮನಸ್ಸಿನ ಮೇಲೆ ಒಂದು ವಿಧವಾದ ಪರಿಣಾಮ ಬೀರುತ್ತದೆ. ಅವನಲ್ಲಿ ಒಂದು ಬಗೆಯ ಜೀವನ ದೃಷ್ಟಿ ಬೆಳೆಸುತ್ತದೆ.
- ❖ ತನ್ನ ಸುತ್ತಲಿರುವ ವಸ್ತು, ಒಡವೆ, ಸಂಗತಿ, ಸಂದರ್ಭಗಳ ಅರ್ಥ ಮಾಡುವಾಗ ಅವನಲ್ಲಿ ಪ್ರಗತಿ ದೃಷ್ಟಿಯೇ ಪ್ರಧಾನವಾಗುತ್ತದೆ. ಇದಕ್ಕೆ ನಾವು **"ಐತಿಹಾಸಿಕ ಮನೋಭಾವ"** ಎನ್ನುತ್ತೇವೆ.
- ❖ ಈ ಮನೋಭಾವವನ್ನು ಬೆಳೆಸುವುದೇ ಇತಿಹಾಸ ಬೋಧನೆಯ ಉದ್ದೇಶ ಇದರಿಂದ ವಿದ್ಯಾರ್ಥಿಯ ಮನಸ್ಸಿನಲ್ಲಿ ಆಯಾ ಘಟನೆಗಳು ಬೆಳೆದು ಬಂದ ರೀತಿಯು ಅರಳಿ ಆದರ ಸಮಗ್ರರೂಪ ಹೊಳೆಯುತ್ತದೆ.
- ❖ ತಮ್ಮ ಆಹಾರ – ವಿಹಾರ , ಮನೆ – ಮಠ , ಸಂಘ – ಸಂಸ್ಥೆ, ಇದೆಲ್ಲ ಹೇಗೆ ರೂಪಗೊಂಡವು ? ಯಾಕೆ ರೂಪಗೊಂಡವು ? ಈಗ ಯಾವ ಸ್ಥಿತಿಯಲ್ಲಿವೆ ? ಎಂಬ ವಿಶ್ವಾಸವರ ವಿಚಾರಗಳು ಮನಸ್ಸಿನಲ್ಲಿ ಸುತ್ತಾಡುತ್ತಿರುತ್ತವೆ.
- ❖ ಜೀವನ ಪ್ರವಾಹದ ಗತಿ, ವಿಸ್ತಾರ, ನಿರಂತರತೆಯ ವಿಚಾರದೊಂದಿಗೆ ಮನುಷ್ಯ ಜೀವಿಯ ಸಂಕುಚಿತ, ಕ್ಷಣಿಕ ಜೀವನದ ವಿಚಾರಗಳು, ತಾನೆಷ್ಟು ಕ್ಷುದ್ರ ಹಾಗೂ ಅಲ್ಪಾಯುಷಿ, ಜೀವನ ಎಷ್ಟು ಅಗಾಧ ಹಾಗೂ ಅನಂತವಾದದ್ದು ಎಂಬ ಭಾವನೆ ಒಡಮೂಡುತ್ತದೆ.

Downloaded From: www.kpscvaani.com

(2) ಮಾನ್ಯಖೇಟ, ದ್ವಾರಸಮುದ್ರ, ಪುರುಷಪುರ, ಪಾಟಲೀಪುತ್ರ
(3) ದ್ವಾರಸಮುದ್ರ, ಪುರಷಪುರ, ಪಾಟಲೀಪುತ್ರ, ಮಾನ್ಯಖೇಟ
(4) ಮಾನ್ಯಖೇಟ, ದ್ವಾರಸಮುದ್ರ, ಪಾಟಲೀಪುತ್ರ, ಪುರುಷಪುರ

**ಉತ್ತರ: (4) ಮಾನ್ಯಖೇಟ, ದ್ವಾರಸಮುದ್ರ, ಪಾಟಲೀಪುತ್ರ, ಪುರುಷಪುರ**


❖ **ವಿವಿಧ ರಾಜವಂಶಗಳು & ಅವರ ರಾಜಧಾನಿಗಳು:**
1. ರಾಷ್ಟ್ರಕೂಟರು – ಮಾನ್ಯಖೇಟ
2. ಹೊಯ್ಸಳರು – ದ್ವಾರಸಮುದ್ರ
3. ಗುಪ್ತರು – ಪಾಟಲೀಪುತ್ರ
4. ಕುಶಾನರು – ಪುರುಷಪುರ
5. ಮೌರ್ಯರು – ಪಾಟಲೀಪುತ್ರ
6. ವರ್ಧನರು – ಥಾಣೇಶ್ವರ
7. ಶಾತವಾಹನರು – ಪೈಠಣ
8. ಕದಂಬರು ಬನವಾಸಿ
9. ಗಂಗರು – ಕೋಲಾರ (ಕುವಲಾಳ) ತಲಕಾಡು, ಮನಕುಂದ, ಮಣ್ಣೆ
10. ಬಾದಾಮಿಯ ಚಾಲುಕ್ಯರು – ಬಾದಾಮಿ
11. ಪಲ್ಲವರು – ಕಂಚಿ (ಕಂಚಿಪುರ)
12. ಕಲ್ಯಾಣದ ಚಾಲುಕ್ಯರು – ಕಲ್ಯಾಣ (ಬಸವ ಕಲ್ಯಾಣ)
13. ಚೋಳರು – ಉರ್ರೈಯೂರ್ (ಉರಗಪುರ) ತಂಜಾವೂರು

**95. ಈ ಕೆಳಗಿನವುಗಳು ಬೌದ್ಧ ಸಮ್ಮೇಳನಗಳು ನಡೆದ ನಾಲ್ಕು ಕೇಂದ್ರಗಳಾಗಿವೆ. ಇವುಗಳಲ್ಲಿ ಬೌದ್ಧಸಮ್ಮೇಳನಗಳು ನಡೆದ ಕಾಲಾನುಕ್ರಮಣಿಕೆಯ ಗುಂಪು**
(1) ರಾಜಗೃಹ–ವೈಶಾಲಿ–ಪಾಟಲೀಪುತ್ರ–ಕುಂಡಲವನ
(2) ವೈಶಾಲಿ–ಪಾಟಲೀಪುತ್ರ–ಕುಂಡಲವನ–ರಾಜಗೃಹ
(3) ಪಾಟಲೀಪುತ್ರ–ಕುಂಡಲವನ–ರಾಜಗೃಹ–ವೈಶಾಲಿ
(4) ಕುಂಡಲವನ–ರಾಜಗೃಹ–ವೈಶಾಲಿ–ಪಾಟಲೀಪುತ್ರ

**ಉತ್ತರ: (1) ರಾಜಗೃಹ–ವೈಶಾಲಿ–ಪಾಟಲೀಪುತ್ರ–ಕುಂಡಲವನ**

| ಸಂ. | ಸ್ಥಳ | ಕಾಲ | ಅಧ್ಯಕ್ಷರು | ಆಶ್ರಯ ದಾತ | ಉದ್ದೇಶ |
|---|---|---|---|---|---|
| 1 | ರಾಜಗೃಹ | ಸಾ.ಶ.ಪೂ. 483 | ಮಹಾ ಕಶ್ಯಪ | ಅಜಾತ ಶತ್ರು | ಬುದ್ಧನ ಹೇಳಿಕೆಗಳನ್ನು ಸಂಗ್ರಹಿಸುವುದು |
| 2. | ವೈಶಾಲಿ | ಸಾ.ಶ.ಪೂ. 383 | ಸಭಾ ಕಮಿ | ಕಾಲಾ ಶೋಕ | ಬೌದ್ಧ ಸನ್ಯಾಸಿಗಳ ನಡುವಿನ ಭಿನ್ನಾಭಿಪ್ರಾಯ ತೊಡೆದು ಹಾಕಲು ಪ್ರಯತ್ನಿಸುವುದು. ಸಂಘ ತೇರ ವಾದಿ ಮತ್ತು ಮಹಾ ಸಾಂಘಿಕರಾಗಿ ವಿಭಜನೆ |
| 3. | ಪಾಟಲೀಪುತ್ರ | ಸಾ.ಶ.ಪೂ 250 | ಮೊಗ ಲಿತ್ರ ತಿಸ್ಸಾ | ಅಶೋಕ | ತ್ರಿಪಿಟಕಗಳ ಅಂತಿಮ ರಚನೆ ವಿದೇಶಗಳಿಗೆ ಧರ್ಮಪ್ರಚಾರ ನೇಮಕ ಅಭಿದಮ್ಮ ಪೀಠಕ ರಚನೆ |
| 4. | ಕುಂಡಲೀವನ | ಸಾ.ಶ. 102 | ವಸು ಮಿತ್ರ ಉಪಾಧ್ಯಕ್ಷ ಅಶ್ವಘೋಷ | ಕನಿಷ್ಕ | ಬೌದ್ಧ ಧರ್ಮ ವಿಭಜನೆ |
| 5. | ಕನೋಜ್ | ಸಾ.ಶ. 643 | ಹ್ಯೂಯೆನ್ ತ್ಸಾಂಗ್ | ಹರ್ಷವರ್ಧನ | ಬುದ್ಧ ವಿಗ್ರಹದ ಜೊತೆಯಲ್ಲಿ ಶಿವ ಮತ್ತು ಸೂರ್ಯನ ವಿಗ್ರಹಗಳಿಗೂ ಉತ್ಸವ ನಡೆಸಲಾಯಿತು. |

Downloaded From: www.kpscvaani.com




ಈ ಕೆಳಗಿನ ಯಾವ ಗುಂಪು ವ್ಯಾಪಾರ ಕೇಂದ್ರಗಳನ್ನು D,P,E,F ಸರಣಿಯಲ್ಲಿ ಜೋಡಿಸಿದ ಗುಂಪಾಗಿದೆ?

(1) d, b, a, c (2) a, c, d, b

(3) d, a, b, c (4) b, d, c, a

**ಉತ್ತರ: (1) d, b, a, c**

- ❖ ಅತಿ ಪ್ರಾಚೀನ ಕಾಲದಿಂದಲೂ ಭಾರತ ಪಾಶ್ಚಿಮಾತ್ಯ ದೇಶಗಳೊಂದಿಗೆ ವ್ಯಾಪಾರ ಸಂಬಂಧಗಳನ್ನು ಹೊಂದಿತ್ತು. ಭಾರತದ ವಸ್ತುಗಳಾದ ಹತ್ತಿ, ಮುತ್ತು, ಶ್ರೀಗಂಧ, ಸಾಂಬಾರ ಪದಾರ್ಥ ಮುಂತಾದವುಗಳಿಗೆ ಯುರೋಪಿನ ಮಾರುಕಟ್ಟೆಗಳಲ್ಲಿ ಹೆಚ್ಚಿನ ಬೇಡಿಕೆ ಇತ್ತು.
- ❖ 1453 ರಲ್ಲಿ ತುರ್ಕರು ಕಾನ್‌ಸ್ಟಾಂಟಿನೋಪಲ್ ಅನ್ನು ವಶಪಡಿಸಿಕೊಂಡಿದ್ದರ ಪರಿಣಾಮವಾಗಿ ಯುರೋಪಿಯನ್ನರು ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯುವುದು ಅನಿವಾರ್ಯವಾಯಿತು.
- ❖ ಪೋರ್ಚುಗೀಸ್‌ರು , ಇಂಗ್ಲೀಷರು , ಡಚ್ಚರು ಮತ್ತು ಫ್ರೆಂಚರು ವ್ಯಾಪಾರಕ್ಕಾಗಿ ಭಾರತಕ್ಕೆ ಬಂದರು .

**ಪೋರ್ಚುಗೀಸರು:**

- ❖ ಸಮುದ್ರಮಾರ್ಗದ ಮೂಲಕ ಭಾರತಕ್ಕೆ ಆಗಮಿಸಿದ ಯುರೋಪಿಯನ್ನರಲ್ಲಿ ಪೋರ್ಚುಗೀಸರು ಮೊದಲಿಗರು. ವಾಸ್ಕೊ–ಡ–ಗಾಮನು 1498ರಲ್ಲಿ ಭಾರತ ತಲುಪಿದನು.
- ❖ ಕಲ್ಲಿಕೋಟೆಯ ದೊರೆ ಜಾಮೊರಿನ್ ಈತನನ್ನು ಸ್ವಾಗತಿಸಿದನು. ಇದರಿಂದಾಗಿ ಯುರೋಪಿನ ಜೊತೆಗೆ ಭಾರತದ ವ್ಯಾಪಾರ ಸಂಬಂಧವು ಪುನರ್ ಸ್ಥಾಪಿಸ ಲ್ಪಟ್ಟಿತು.
- ❖ ಅಂದಿನಿಂದ ಭಾರತದೊಂದಿಗಿನ ವ್ಯಾಪಾರ ಚುರುಕುಗೊಂಡಿತು. ಫ್ರಾನ್ಸಿಸ್ಕೊ–ಡಿ–ಅಲ್ಮಿಡಾ ಭಾರತದ ಪ್ರಥಮ ಮೋರ್ಚುಗೀಸ್ ಗೌವರ್ನರ್ ಆಗಿದ್ದನು.
- ❖ ಅಲ್ಫೆನ್ಸೋ–ಡಿ–ಅಲ್ಬುಕರ್ಕನು ಇವನ ಉತ್ತರಾಧಿಕಾರಿಯಾದನು. ಇವನು 1510 ರಲ್ಲಿ ಬಿಜಾಪುರದ ಆದಿಲ್‌ಷಾಹಿಗಳಿಂದ ಗೋವಾವನ್ನು ಗೆದ್ದುಕೊಂಡನು ಮತ್ತು ಅದನ್ನು ತಮ್ಮ ಆಡಳಿತದ ಕೇಂದ್ರವನ್ನಾಗಿ ಮಾಡಿಕೊಂಡನು. 1961ರವರೆಗೆ ಇದು ಪೋರ್ಚುಗೀಸ್‌ರ ಅಧೀನದಲ್ಲಿತ್ತು. .
- ❖ ಪೋರ್ಚುಗೀಸರು ಗೋವಾ, ದಿಯು, ದಮನ್, ಸಾಲ್‌ಸೆಟ್, ಬೇಸಿನ್, ಬಾಂಬೆ ಮುಂತಾದ ಕಡೆಗಳಲ್ಲಿ ತಮ್ಮ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿದರು . ಇಂಗ್ಲೀಷ್ ಮತ್ತು ಡಚ್ಚರೊಂದಿಗೆ ಸ್ಪರ್ಧಿಸಲು ಅಸಮರ್ಥ ರಾಗಿದ್ದರಿಂದ ಪೋರ್ಚುಗೀಸರು ಭಾರತದಲ್ಲಿ ಬಹುಕಾಲ ಉಳಿಯಲಿಲ್ಲ.
- ❖ ಭ್ರಷ್ಟ ಮತ್ತು ಅಸಮರ್ಥ ಅಧಿಕಾರಿಗಳು, ಧಾರ್ಮಿಕ ಮತಾಂಧ ನೀತಿ, ಬ್ರೆಜಿಲ್‌ನ ಮೇಲಿನ ಹೆಚ್ಚಿನ ಗಮನ, ಮರಾಠರ ಏಳಿಗೆ, ವಿಜಯನಗರ ಸಾಮ್ರಾಜ್ಯದ ಅವನತಿ ಮುಂತಾದವು ಭಾರತದಲ್ಲಿನ ಅವರ ಅವನತಿಗೆ ಪ್ರಮುಖ ಕಾರಣಗಳಾದವು.

**ಡಚ್ಚರು:**

- ❖ 1602 ರಲ್ಲಿ ಡಚ್ಚರು "ಡಚ್ ಈಸ್ಟ್ ಇಂಡಿಯಾ ಕಂಪನಿ" ಯನ್ನು ಸ್ಥಾಪಿಸಿದರು. ಮಚಲಿಪಟ್ಟಣ, ನಾಗಪಟ್ಟಣ, ಬಲಿಪಟ್ಟಣ, ಚೆನ್ ಸುರಾ, ಕೊಚ್ಚಿನ್, ಖಾಸಿಂಬಜಾರ್, ಮಾತೆ ಮುಂತಾದೆಡೆಗಳಲ್ಲಿ ತಮ್ಮ ವ್ಯಾಪಾರಿ ಕೇಂದ್ರಗಳನ್ನು ಸ್ಥಾಪಿಸಿದರು.
- ❖ ಪುಲಿಕಾಟ್ ಭಾರತದಲ್ಲಿ ಅವರ ರಾಜಧಾನಿ ಆಗಿತ್ತು. ಆಗ್ನೇಯ ಏಷಿಯಾ ದ್ವೀಪಗಳ (ಇಂಡೋನೇಷಿಯಾ, ಮಲಯ, ಥೈಲಾಂಡ್, ಫಿಲಿಪೈನ್ಸ್ ಮತ್ತು ಕಾಂಬೋಡಿಯಾ) ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದರಿಂದ ಮತ್ತು ಬ್ರಿಟಿಷರೊಂದಿಗೆ ಸ್ಪರ್ಧಿಸಲು ಅಸಮರ್ಥರಾಗಿದ್ದರಿಂದ ಡಚ್ಚರು ಭಾರತದಲ್ಲಿ ಬಹಳ ಕಾಲ ಉಳಿಯಲಿಲ್ಲ.

Downloaded From: www.kpscvaani.com

ಎಂದು ಕರೆಯುತ್ತಾರೆ.

❖ ಒಂದು ಪ್ರದೇಶದಲ್ಲಿ ವಾಸಿಸುವ ಒಟ್ಟು ಜನಸಂಖ್ಯೆಯನ್ನು ಆ ಪ್ರದೇಶದ ಒಟ್ಟು ಭೌಗೋಳಿಕ ವಿಸ್ತೀರ್ಣದಿಂದ ಭಾಗಿಸಿದಾಗ ಆ ಪ್ರದೇಶದ ಜನಸಾಂದ್ರತೆ ದೊರೆಯುತ್ತದೆ.

❖ 2011 ರ ಜನಗಣತಿಯ ಪ್ರಕಾರ ಭಾರತದ ಸರಾಸರಿ ಜನಸಾಂದ್ರತೆ ಪ್ರತಿ ಚದರ ಕಿ.ಮೀ.ಗೆ 382

$$\text{ಜನಸಾಂದ್ರತೆ} = \frac{\text{ಒಟ್ಟು ಜನಸಂಖ್ಯೆ}}{\text{ವಿಸ್ತೀರ್ಣ}}$$

$$= \frac{8000}{16}$$

ಜನಸಾಂದ್ರತೆ = 500

**ಲಿಂಗಾನುಪಾತ:**


❖ ಪ್ರತಿ ಸಾವಿರ ರುಷರಿಗೆ ಸ್ತ್ರೀಯರ ಸಂಖ್ಯೆಯನ್ನು ಲಿಂಗಾನುಪಾತ ಎಂದು ಕರೆಯಲಾಗಿದೆ.

❖ 2011 ರ ಜನಗಣತಿಯ ಪ್ರಕಾರ ಭಾರತದ ಸರಾಸರಿ ಲಿಂಗಾನುಪಾತವು ಪ್ರತಿ ಸಾವಿರ ಪ್ರರುಷರಿಗೆ 940 ಮಹಿಳೆಯರು.

$$\text{ಲಿಂಗಾನುಪಾತ} = \frac{3000}{5000} x1000$$

$$= 600$$

113. **ಈ ಕೆಳಗಿನ ಚಿತ್ರದಲ್ಲಿ ನದಿಯ ಪಾತ್ರದ ಹಂತಗಳನ್ನು ತೋರಿಸಲಾಗಿದೆ. ಈ ಹಂತದಲ್ಲಿ ಉಂಟಾಗುವ ಭೂ ಸ್ವರೂಪಗಳ ಸರಿಯಾದ ಅನುಕ್ರಮವನ್ನು ಗುರುತಿಸಿ.**




| | ಹಂತ–01 | ಹಂತ–02 | ಹಂತ–03 |
|---|---|---|---|
| (1) | ನದಿಯ ತಿರುವುಗಳು | ಮುಖಜ ಭೂಮಿ | ಜಲಪಾತಗಳು |
| (2) | ಕಂದರಗಳು | ನದಿಯ ತಿರುವುಗಳು | ಶೃಂಗ ಸರೋವರಗಳು |
| (3) | ಜಲಪಾತಗಳು | ಪ್ರವಾಹ ಮೈದಾನಗಳು | ನದಿಯ ತಿರುವುಗಳು |
| (4) | ಜಲಪಾತಗಳು | V ಆಕಾರದ ಕಣಿವೆಗಳು | ಮೆಕ್ಕಲು ಬೀಸಣಿಗೆ |

**ಉತ್ತರ: (2) ಕಂದರಗಳು–ನದಿಯ ತಿರುವುಗಳು–ಶೃಂಗ ಸರೋವರಗಳು**

**ನದಿಯ ಪಾತ್ರ:**

❖ ನದಿಯ ಉಗಮ ಸ್ಥಾನದಿಂದ ಸರೋವರ ಅಥವಾ ಸಮುದ್ರಗಳಲ್ಲಿ ಸೇರಿಕೊಂಡು ಅಂತ್ಯವಾಗುವವರೆಗೂ, ನದಿಯು ಹರಿಯಲು ನಿರ್ಮಿಸಿಕೊಂಡಿರುವ ನಿರ್ದಿಷ್ಟ ಮಾರ್ಗವನ್ನು "ನದಿಯ ಪಾತ್ರ" ಎನ್ನುವರು.

❖ ಇದನ್ನು 3 ಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ:

1) ಮೇಲ್ಕಣಿವೆಯ ಪಾತ್ರ
2) ಮಧ್ಯ ಕಣಿವೆಯ ಪಾತ್ರ
3) ಕೆಳ ಕಣಿವೆಯ ಪಾತ್ರ

**ಮೇಲ್ಕಣಿವೆಯ ಪಾತ್ರ (Upper Course) :**

❖ ಇದು ಸಾಮಾನ್ಯವಾಗಿ ಎತ್ತರವಾದ ಪರ್ವತಗಳು, ಪ್ರಸ್ಥಭೂಮಿ ಅಥವಾ ಬೆಟ್ಟಗುಡ್ಡಗಳ ಭಾಗದಲ್ಲಿ ಕಂಡುಬರುವುದು. ಆದ್ದರಿಂದ ಇದನ್ನು ಪರ್ವತ ಕಣಿವೆ ಎಂತಲೂ ಕರೆಯುವರು.

❖ ಭೂರಚನಾ ಶಾಸ್ತ್ರಜ್ಞರು ಇದನ್ನು 'ಬಾಲ್ಯಾವಸ್ಥೆ' ಎಂದು ಕರೆಯುವರು. ಈ ಭಾಗದಲ್ಲಿ ನದಿ ಉಗಮವಾಗುವುದು. ಈ ಭಾಗದಲ್ಲಿ ನದಿಯ ಪಾತ್ರವು ಕಡಿದಾಗಿದ್ದು, ವೇಗವಾಗಿ ಹರಿಯುತ್ತದೆ.

❖ ಇಲ್ಲಿ ನದಿಯ ಸವೆತ ಕಾರ್ಯವು ಪ್ರಧಾನವಾಗಿದ್ದು ವಿವಿಧ ಭೂ ಸ್ವರೂಪ ಗಳು ಸೃಷ್ಟಿಯಾಗುತ್ತವೆ.

❖ ಉದಾ: ಕಂದರ, V ಆಕಾರಣ ಕಣಿವೆ, ಜಲಪಾತ, ಕುಂಭಕುಳಿ ಇತ್ಯಾದಿ

**2) ಮಧ್ಯ ಕಣಿವೆ ಪಾತ್ರ (Middle Course):**

❖ ಎತ್ತರವಾದ ಪರ್ವತ ಭಾಗಗಳನ್ನು ಬಿಟ್ಟು ಮೈದಾನ ಪ್ರವೇಶಿಸುವ ಭಾಗದಿಂದ ನದಿಯ ಮಧ್ಯ ಕಣಿವೆಯ ಪಾತ್ರವು ಪ್ರಾರಂಭಾಗುತ್ತದೆ.

❖ ಈ ಭಾಗದಲ್ಲಿ ಪ್ರಧಾನ ನದಿಗೆ ಅನೇಕ ಉಪನದಿಗಳು ಕೂಡಿಕೊಳ್ಳುವುದರಿಂದ ನೀರಿನ ಪ್ರಮಾಣವು

Downloaded From: www.kpscvaani.com

❖ ಬೋಧನೆಯಲ್ಲಿ ಪಾಠೋಪಕರಣ ಬಳಕೆಯು ಮನಶ್ಶಾಸ್ತ್ರ ತತ್ವದ ಆಧಾರದ ಮೇಲೆ ಮೇಲಿದೆ.

**135. ಕಲಿಕಾ ಅನುಭವಗಳನ್ನು ರಚಿಸುವಾಗ ಗಮನಿಸುವ ದೃಷ್ಟಿಕೋನ**

(1) ವಿಷಯ ಮತ್ತು ವಿದ್ಯಾರ್ಥಿ

(2) ಉದ್ದೇಶಗಳು ಮತ್ತು ವಿಷಯ

(3) ಉಪಾಧ್ಯಾಯ ಮತ್ತು ವಿಷಯ

(4) ಶಿಕ್ಷಕ ಮತ್ತು ವಿದ್ಯಾರ್ಥಿ

**ಉತ್ತರ: (1) ವಿಷಯ ಮತ್ತು ವಿದ್ಯಾರ್ಥಿ**

❖ ಕಲಿಕಾ ಅನುಭವಗಳನ್ನು ರಚಿಸುವಾಗ ಗಮನಿಸುವ ದೃಷ್ಟಿಕೋನವೆಂದರೆ **ವಿಷಯ ಮತ್ತು ವಿದ್ಯಾರ್ಥಿ.**

❖ **ವಿಷಯ:** ಕಲಿಕಾ ಅನುಭವಗಳೇಂದರೆ, ವಿದ್ಯಾರ್ಥಿಯೊಬ್ಬನು ನಿರ್ದಿಷ್ಟವಾದ ವಿಷಯ ವಸ್ತುವನ್ನು ಅಭ್ಯಸಿಸಿದಾಗ ಅದರ ಫಲವಾಗಿ ವಿದ್ಯಾರ್ಥಿಯಲ್ಲಿ ಉಂಟಾಗುವ ಅಪೇಕ್ಷಿತ ಬದಲಾವಣೆಯಾಗಿದೆ.

❖ **ವಿದ್ಯಾರ್ಥಿ:** ಕಲಿಕಾ ಅನುಭವಗಳನ್ನು ರಚಿಸುವಾಗ ವಿದ್ಯಾರ್ಥಿಗಳನ್ನು ಕೂಡ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ವಿದ್ಯಾರ್ಥಿಯ ವಯೋಮಾನ ಕ್ಕನುಗುಣವಾಗಿ ವಿಷಯವಸ್ತು / ಪಠ್ಯವಸ್ತುವನ್ನು ರಚಿಸಬೇಕಾಗುತ್ತದೆ. ಏಕೆಂದರೆ, ವಿದ್ಯಾರ್ಥಿಗೆ ತನ್ನ ಬೌದ್ಧಿಕ ಮಟ್ಟಕ್ಕಿಂತ ಹೆಚ್ಚಿನ ವಿಷಯವನ್ನು ಅಭ್ಯಸಿಸುವಂತೆ ರೂಪಿಸಿದಾಗ ವಿದ್ಯಾರ್ಥಿಯು ಕಲಿಕೆಯಲ್ಲಿ ತೊಂದರೆ ಗಳನ್ನು ಎದುರಿಸಬೇಕಾಗುತ್ತದೆ.

**136. ಘಟಕ ಪರೀಕ್ಷೆಯನ್ನು ನಡೆಸುವ ಮುಖ್ಯ ಉದ್ದೇಶ**

(1) ಶಿಕ್ಷಕರ ಬೋಧನೆಯಲ್ಲಿನ ದೋಷವನ್ನು ಕಂಡು ಹಿಡಿಯಲು

(2) ವಿದ್ಯಾರ್ಥಿಗಳ ವರ್ತನೆಯ ಮೌಲ್ಯಮಾಪನ

(3) ವಿಷಯದ ಮೌಲ್ಯಮಾಪನ

(4) ವಿಷಯ ಮತ್ತು ವಿದ್ಯಾರ್ಥಿಗಳ ವರ್ತನೆಯ ಮೌಲ್ಯಮಾಪನ

**ಉತ್ತರ: (4) ವಿಷಯ ಮತ್ತು ವಿದ್ಯಾರ್ಥಿಗಳ ವರ್ತನೆಯ ಮೌಲ್ಯಮಾಪನ**

❖ ಘಟಕ ಪರೀಕ್ಷೆ ಎಂದರೆ ಶಿಕ್ಷಕರು ಒಂದು ಘಟಕವನ್ನು ಬೋಧಿಸಿದ ನಂತರ ಆ ಘಟಕದ ಬಗ್ಗೆ ವಿದ್ಯಾ ಸಾಧನೆಯನ್ನು ಮೌಲ್ಯಮಾಪನ ನಡೆಸುವ ಒಂದು ಸಣ್ಣ ಪರೀಕ್ಷೆಯೇ **ಘಟಕ ಪರೀಕ್ಷೆ**. ಘಟಕ ಯೋಜನೆಯ ಕೊನೆಯ ಹಂತವೇ **ಘಟಕ ಪರೀಕ್ಷೆ.**

❖ ಒಂದು ಘಟಕ ಪರೀಕ್ಷೆಯು ಬಹು ವ್ಯಾಪಕವಾದ ಮತ್ತು ಸಂಬಂಧಿತವಾದ ಹಾಗೂ ಅರ್ಥವಾದ ಚಂದಕೆಗಳನ್ನು ಒಳಗೊಂಡಿದ್ದು, ವಿದ್ಯಾರ್ಥಿಗಳ ವಿಶೇಷವಾದ ಶೈಕ್ಷಣಿ ಅನುಭವಗಳನ್ನು ಮತ್ತು ವರ್ಣನಾ ಬದಲಾವಣೆಗಳನ್ನ ಅಳೆಯುವ ಸಾಧನವಾಗಿದೆ.

❖ ಒಂದು ಕೇಂದ್ರೀಕೃತ ಸಮಸ್ಯೆಯ ಸುತ್ತಲೂ ಆವರಿಸತಕ್ಕ ವಿವಿಧ ರೀತಿಯ ಕಲಿಕೆಯ ಅನುಭವಗಳನ್ನು ಮತ್ತು ವಿವಿಧ ಚಟುವಟಿಕೆಗಳನ್ನು ಒಳಗೊಂಡ ಭಾಗವೇ ಘಟಕ ಪರೀಕ್ಷೆ.

❖ ಪ್ರತಿ ಘಟಕದ ಕೊನೆಯಲ್ಲಿ ನಡೆಸುವ ವ್ಯಾಪಕ ಸಾಧನೆ ಪರೀಕ್ಷೆಯನ್ನು ಘಟಕ ಪರೀಕ್ಷೆ ಎಂದು ಕರೆಯುವರು.

❖ ಘಟಕ ಪರೀಕ್ಷೆಯಲ್ಲಿ ಕೇವಲ ವಿಷಯ ವಸ್ತುವಿನ ಘಟಕದ ಮೌಲ್ಯಮಾಪನ ಮಾತ್ರ ಮಾಡುವುದಿಲ್ಲ. ಉದ್ದೇಶಗಳ ಸಾಧನೆ ವಸ್ತು ವಿಷಯ ಹಾಗೂ ಕಲಿಕಾ ಚಟುವಟಿಕೆ ಗಳನ್ನು ಮೌಲ್ಯಮಾಪನ ಮಾಡುವದು ಪರಿಣಾಮಕಾರಿ ಘಟಕ ಪರೀಕ್ಷೆಯ ಉದ್ದೇಶವಾಗಿರುತ್ತದೆ.

❖ ಶಿಕ್ಷಕರು ಒಂದು ಘಟಕವನ್ನು ಬೋಧಿಸಿದ ನಂತರ ಈ ಘಟಕದ ಮೇಲೆ ಘಟಕ ಪರೀಕ್ಷೆ ತಯಾರಿಸುವಾಗ ಬೋಧನಾ ಉದ್ದೇಶಗಳನ್ನು, ಕಲಿಕಾ ಚಟುವಟಿಕೆಗಳನ್ನು ಹಾಗೂ ಮೌಲ್ಯಮಾಪನದ ತಂತ್ರಗಳನ್ನು ನೆನಪಿನಲ್ಲಿಟ್ಟು ಕೊಂಡಿರಬೇಕು.

**137. ಪಾಠ ಯೋಜನೆಯ ಅರ್ಥ**

(1) ಬೋಧನೆಯ ಪೂರ್ವ ಸಿದ್ಧತೆ

(2) ಕಲಿಕೆಗೆ ಪೂರ್ವ ಸಿದ್ಧತೆ

(3) ಪ್ರೇರಣೆಯ ಪ್ರಕ್ರಿಯೆ

(4) ವಿಷಯವಾರು ಪೂರ್ವ ಸಿದ್ಧತೆ

**ಉತ್ತರ: (1) ಬೋಧನೆಯ ಪೂರ್ವ ಸಿದ್ಧತೆ**

❖ ಯೋಜನೆಯು ಉತ್ತಮ ಬೋಧನೆಯ ಒಂದು ಲಕ್ಷಣ. ಎಲ್ಲಾ ಕಲೆಗಳಿಗೂ ಕೌಶಲ್ಯಗಳ ಮತ್ತು ರೂಢಿಗಳ ಅವಶ್ಯಕತೆಯಿದೆ.

❖ ಬೋಧನೆಯು ಒಂದು ಕಲೆಯಾದುದರಿಂದ ಯೋಜನೆಯ ಅವಶ್ಯಕತೆ ಹೆಚ್ಚಾಗಿರುತ್ತದೆ. ಶಿಕ್ಷಕನು

Downloaded From: www.mpscvaani.com

(4) ಸಂದರ್ಶಕರ ದಾಖಲೆಗಳು

**ಉತ್ತರ: (1) ಸ್ಮಾರಕಗಳು**

❖ ಸ್ಮಾರಕಗಳು (Monuments) ಇತಿಹಾಸ ರಚನೆಗೆ ಪ್ರತ್ಯಕ್ಷದರ್ಶಿ ಆಧಾರಗಳಾಗಿವೆ.

❖ ದೇವಾಲಯಗಳು, ಅರಮನೆಗಳು, ಸ್ತೂಪಗಳು, ಬಸದಿಗಳು, ಮಸೀದಿಗಳು, ಗೋರಿಗಳು, ಕೋಟೆ ಕೊತ್ತಲಗಳು, ಚರ್ಚ್‌ಗಳು, ಮಣ್ಣಿನ ವಿಗ್ರಹಗಳು, ಇವೆಲ್ಲ ಸ್ಮಾರಕಗಳು. ಇವು ಅಂದಿನ ಜನರ ವೇಷಭೂಷಣ, ಉಡುಗೆ ತೊಡುಗೆ, ರೂಢಿ ಪದ್ಧತಿಗಳು, ಧಾರ್ಮಿಕ ಜೀವನ, ಸಂಗೀತ, ನೃತ್ಯ , ಚಿತ್ರಕಲೆಗಳ ಪ್ರಗತಿ, ಬಗ್ಗೆ ಮಾಹಿತಿ ಒದಗಿಸುತ್ತವೆ.

❖ ಹರಪ್ಪ, ಮೊಹಂಜೊದಾರೋ, ನಲಂದ, ಸಾಮಾಜಿಕ ಸ್ಥಿತಿ ಇತ್ಯಾದಿಗಳ ಮಥುರ, ಸಾರನಾಥ, ಸಾಂಚಿ, ದಿಯೋಘರ್, ಪಾಟಲೀಪುತ್ರ , ತಕ್ಷಶಿಲಾ , ಕೊನಾರ್ಕ್, ಖಜುರಾಹೊ, ಐಹೊಳೆ, ಪಟ್ಟದಕಲ್ಲು, ಬಾದಾಮಿ, ಬೇಲೂರು, ಹಳೆಬೀಡು, ಹಂಪಿ, ಕಂಚಿ, ತಂಜಾವೂರು ಮಹಾಬಲಿಪುರಂ ಮೊದಲಾದ ಕಡೆ ಇರುವ ಸ್ಮಾರಕಗಳು ಅಂದಿನ ಜನರ ಜೀವನ, ಕಲಾಭಿರುಚಿ ಬಿಂಬಿಸುತ್ತಾ ಇಂದಿಗೂ ನಮ್ಮ ಕಣ್ಣೆದುರು ನಿಂತಿವೆ. ಇವು ಭಾರತೀಯ ರ ಸಾಂಸ್ಕೃತಿಕ ಪರಂಪರೆ ತಿಳಿಯಲು ನೆರವಾಗಿವೆ.

❖ ಮಥುರಾ, ಗಾಂಧಾರಗಳಲ್ಲಿನ ಬುದ್ಧನ ಮೂರ್ತಿಗಳು, ಶ್ರವಣಬೆಳಗೊಳದ ಗೊಮ್ಮಟೇಶ್ವರನ ಮೂರ್ತಿ ಕೋನಾರ್ಕ್‌ನ ಸೂರ್ಯಚಕ್ರ, ಬೇಲೂರಿನ ಶಿಲಾ ಬಾಲಿಕೆಯರು ಅಂದಿನ ಶಿಲ್ಪಿಗಳ ಕೈಚಳಕ, ಭಕ್ತಿ, ತ್ಯಾಗ , ಧರ್ಮನಿಷ್ಠೆಗಳನ್ನು ಪ್ರತಿಬಿಂಬಿಸಿವ . ಸಂಗೀತ ವಾದ್ಯಗಳು ಆಗಿನ ಸಂಗೀತ ಪ್ರಗತಿಗೆ ಸಾಕ್ಷಿ.

❖ ಅಜಂತ, ಎಲ್ಲೋರ, ಬಾಘ್, ಲೇಪಾಕ್ಷಿಗಳಲ್ಲಿನ ಚಿತ್ರಕಲೆ ಅಂದಿನ ಜನಜೀವನದ ಸ್ಪಷ್ಟ ಚಿತ್ರಣ ಕೊಡುತ್ತವೆ.

❖ ಸಿಂಧೂ ಬಯಲಿನಲ್ಲಿ ದೊರೆತಿರುವ ಮುದ್ರಿಕೆಗಳು ಸಿಂಧೂ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುತ್ತವೆ.

❖ ದಖನ್‌ನಲ್ಲಿ ದೊರೆತಿರುವ ಆದಿಮಾನವನ ಶಿಲಾಯುಧಗಳಿಂದ ಆಗಿನ ಶಿಲಾಯುಗ ಸಂಸ್ಕೃತಿಯನ್ನು ಅರಿಯಬಹುದು.

❖ ಖಜುರಾಹೊ ದೇವಾಲಯದ ಉನ್ನತ ದರ್ಜೆಯ ಕಲೆಯು ಧರ್ಮ, ಅರ್ಥ, ಕಾಮ, ಮೋಕ್ಷಗಳಂತಹ ಜೀವನದರ್ಶನದ ಸ್ಪಷ್ಟಚಿತ್ರಣ ಕೊಡುತ್ತದೆ.

**145. ಈ ಕೆಳಗಿನವುಗಳಲ್ಲಿ ಯಾವುದು ಶಿಕ್ಷಕರ ವ್ಯವಸ್ಥಿತ ಚರ್ಚೆಯಲ್ಲ?**

(1) ತರಗತಿಯಲ್ಲಿ ಪಾಠದ ನಡುವೆ ಚರ್ಚೆ

(2) ಚರ್ಚಾ ಗೋಷ್ಠಿ

(3) ವಿಚಾರ ಸಂಕೀರ್ಣ

(4) ವಿಚಾರ ಗೋಷ್ಠಿ

**ಉತ್ತರ: (1) ತರಗತಿಯಲ್ಲಿ ಪಾಠದ ನಡುವೆ ಚರ್ಚೆ**

**ವಿಚಾರ ಸಂಕಿರಣ ಸಮೂಹ ಯೋಜನೆ (The Seniinar Group plan) :**

❖ ವಿದ್ಯಾರ್ಥಿಗಳು ಸಮೂಹ ಸಾಮಾಜಿಕ ಅಥವಾ ಐತಿಹಾಸಿಕ ಸಮಸ್ಯೆಯನ್ನು ಕಂಡುಹಿಡಿಯುವುದು, ಅವರು ಚರ್ಚಾ ಸಮೂಹಕ್ಕೆ ವರದಿಯನ್ನು ಸಲ್ಲಿಸುವರು; ತಮ್ಮ ಠರಾವುಗಳನ್ನು ಮೌಲ್ಯಮಾಪನ ಮಾಡುವರು.

❖ ಆ ನಿರ್ಣಯಗಳನ್ನು ವಿಮರ್ಶಾತ್ಮಕ ರೀತಿಯಲ್ಲಿ ಮೌಲ್ಯಮಾಪನ ಮಾಡುವರು.

❖ ಸಮಸ್ಯೆಗೆ ಸಂಬಂಧಿಸಿದಂತೆ ಅನೇಕ ಸಂಗತಿಗಳನ್ನು ಸಂಗ್ರಹಿಸುವರು, ಸಂಯೋಜಿಸುವರು, ಚರ್ಚಿಸುವರು ನಂತರ ಮೌಲ್ಯಮಾಪನ ಮಾಡುವರು.

❖ ವಿಚಾರ ಸಂಕಿರಣವು ಸ್ವಯಂ ಕಲಿಕೆಗೆ ತರಬೇತಿಯನ್ನು ನೀಡುತ್ತದೆ . ಸ್ವತಂತ್ರ ಚಿಂತನೆಗೆ ಪ್ರಚೋದನೆ ನೀಡುತ್ತದೆ.

❖ ಇದು ತಂಡ ಸ್ಫೂರ್ತಿ ಮತ್ತು ಸಹಕಾರ ಮನೋಭಾವನೆ ಯನ್ನು ಬೆಳೆಸುತ್ತದೆ.

**ಚರ್ಚಾಗೋಷ್ಠಿ (Symposium) :**

❖ ಇದೂ ಸಹ ಚರ್ಚಾ ಸಮೂಹದ ಒಂದು ಪ್ರಕಾರವಾಗಿದೆ. ಇಲ್ಲಿ ಇಬ್ಬರು ಅಥವಾ ಹೆಚ್ಚು ಜನರು ಸಮಸ್ಯೆಯ ವಿವಿಧ ಮುಖಗಳನ್ನು ಸಭಿಕರ ಮುಂದೆ ನಿರೂಪಿಸುವರು, ಓದುಗನು ವಿವಿಧ ಅಂಶಗಳಿಂದೊಡಗೂಡಿದ ಸಮಸ್ಯೆಯನ್ನು ನಿರೂಪಿಸಿದ ನಂತರ ಗೋಷ್ಠಿಯ ಸದಸ್ಯರು ಅವನಿಗೆ ಪ್ರಶ್ನೆಗಳನ್ನು ಕೇಳಬಹುದು. ಮಾಹಿತಿಯನ್ನು ಪಡೆಯಬಹುದು.

❖ ಗೋಷ್ಠಿಯ ಒಬ್ಬ ಸದಸ್ಯ ಅಥವಾ ಶಿಕ್ಷಕನು ಅಧ್ಯಕ್ಷನಂತೆ ಕಾರ್ಯ ನಿರ್ವಹಿಸಬಹುದು.

❖ ಅವನು ಚರ್ಚೆಯ ವಿಷಯವನ್ನು ಸಭಿಕರಿಗೆ

Downloaded From: www.kpscvaani.com

(2) learners ' ability to summarise the main points in a text
(3) learners ' strong and weak points in language
(4) learners ' knowledge of grammar

**Ans: (3) learners ' strong and weak points in language**

- ❖ ನೈದಾನಿಕ ಪರೀಕ್ಷೆಯನ್ನು ಕೈಗೊಳ್ಳುವ ಮುಖ್ಯ ಉದ್ದೇಶವೆಂದರೆ:
- ❖ **learners ' ability to memorise the content of a text book:** ಪಠ್ಯಪುಸ್ತಕದಲ್ಲಿ ಕೊಟ್ಟಿರುವ ವಿಷಯು ವಸ್ತುವನ್ನು ನೆನಪಿನಲ್ಲಿಟ್ಟುಕೊಳ್ಳುವಂತೆ ಮಾಡುವುದು.
- ❖ **learners ' ability to summarise the main points in a text:** ಪಠ್ಯವಸ್ತುವಿನ ಮುಖ್ಯಾಂಶಗಳನ್ನು ಸಾರಾಂಶೀಕರಿಸುವಂತಹ ಸಾಮರ್ಥ್ಯ / ಸಾರಾಂಶದ ರೂಪದಲ್ಲಿ ಬರೆಯುವಂತಹ ಸಾಮರ್ಥ್ಯ.
- ❖ **learners ' strong and weak points in language:** ಭಾಷಾ ಕಲಿಕೆಯಲ್ಲಿ ಕಲಿಕಾರ್ಥಿ ಹೊಂದಿರುವ ಸಾಮರ್ಥ್ಯ ಮತ್ತು ದೌರ್ಬಲ್ಯಗಳೇನು ಎಂದು ತಿಳಿಯಲು.
- ❖ **learners ' knowledge of grammar:** ಕಲಿಕಾರ್ಥಿ ವ್ಯಾಕರಣದಲ್ಲಿ ಹೊಂದಿರುವ ಜ್ಞಾನವಾಗಿದೆ.
- ❖ Diagnostic Tests are the tests which has the main intention of testing the students previous class and acquisition knowledge of focussing on his strength and weaknesses.
- ❖ ವಿದ್ಯಾರ್ಥಿಯು ಹಿಂದಿನ ತರಗತಿಯಲ್ಲಿ ಗಳಿಸಿರುವ ಸಾಮರ್ಥ್ಯ ಹಾಗೂ ಪೂರ್ವಜ್ಞಾನ ಬಳಸಿ ಆತನು ಯಾವ ಕ್ಷೇತ್ರದಲ್ಲಿ ಸಾಮರ್ಥ್ಯ ಗಳಿಸಿದ್ದಾನೆ? ಅವನಿಗಿರುವ ದೌರ್ಬಲ್ಯಗಳೇನು ಎಂದು ಗುರುತಿಸುವ ಪ್ರಶ್ನೆಗಳಾಗಿವೆ.
- ❖ ಆದ್ದರಿಂದ ಆಯ್ಕೆ (3) ಸರಿಯುತ್ತರ.

**56. The cheapest and most easily accessible mass media is**

(1) television (2) radio
(3) internet (4) newspaper

**Ans: (2) radio**

- ❖ Radio is considered as the cheapest and easily accessible mass media in communication. Hence opt (2) is correct.
- ❖ ಸರಳವಾಗಿ ಉಪಯೋಗಿಸಬಹುದಾದ ಹಾಗೂ ಸ್ವಲ್ಪ ಕಡಿಮೆ ಬೆಲೆಯ ಸಮೂಹ ಮಾಧ್ಯಮವಾಗಿ 'ರೇಡಿಯೋ'ವನ್ನು ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಬಳಸಲಾಗುತ್ತದೆ.

Downloaded From: www.kpscvaani.com

**57. The following statements are related to the characteristics of young learners. Which statement is FALSE?**

(1) They try things out and keep experimenting
(2) When conditions are optimal, they can acquire a second language too
(3) They acquire their first language very easily
(4) They are passive learners

**Ans: (4) They are passive learners**

- ❖ ಕೆಳಗೆ ಕೊಟ್ಟಿರುವ ಅಂಶಗಳಲ್ಲಿ ಯಾವ ಕಲಿಕಾಕಾರನ ಬಗ್ಗೆ ಯಾವ ಮಾಹಿತಿ ತಪ್ಪಾಗಿದೆ?
- ❖ **They try things out and keep experimenting:** ಹೊಸ ಹೊಸ ವಿಷಯಗಳನ್ನು ಕಲಿಯುವಲ್ಲಿ ಮತ್ತು ಪರೀಕ್ಷಿಸುವಲ್ಲಿ ಮನಸ್ಸುಳ್ಳವರು ಆಗಿರುತ್ತಾರೆ.
- ❖ **When conditions are optimal, they can acquire a second language too:** ಕಲಿಕಾ ವಾತಾವರಣ ಆಶಾವಾದವಾಗಿರುವ ಅವರು ದ್ವಿತೀಯ ಭಾಷೆಯನ್ನು ಕೂಡ ಕಲಿಯಬಲ್ಲರು.
- ❖ **They acquire their first language very easily:** ಅವರು ತಮ್ಮ ಪ್ರಥಮ ಭಾಷೆ / ಮಾತೃಭಾಷೆಯನ್ನು ಯಾವುದೇ ಕಷ್ಟವಿಲ್ಲದೆ ಕಲಿಯಬಲ್ಲರು.

# KAR-TET

ಪತ್ರಿಕೆ–II (6–8th)

**2023**

# ಕಲಾ ವಿಭಾಗ

- Part I : ಭಾಷೆ–1 ಕನ್ನಡ
- Part II : ಭಾಷೆ–2 ಇಂಗ್ಲೀಷ್
- Part III : ಬಾಲವಿಕಾಸ & ಬೋಧನಾ ಶಾಸ್ತ್ರ
- Part IV : ಸಮಾಜ ವಿಜ್ಞಾನ

**ಪರೀಕ್ಷೆ ನಡೆದ ದಿನಾಂಕ : 03–09–2023**

## ಭಾಷೆ – I
## ಕನ್ನಡ

**ಸೂಚನೆ :** ಈ ಕೆಳಗೆ ಕೊಟ್ಟಿರುವ ಗದ್ಯ ಭಾಗವನ್ನು ಓದಿ, ಕೇಳಿರುವ ಪ್ರಶ್ನೆಗಳಿಗೆ (2 ರಿಂದ 8) ಉತ್ತರಿಸಿರಿ: ಚಂಪೂ ಎಂಬುದು ಒಂದು ವಿಶಿಷ್ಟವಾದ ಕಾವ್ಯ ಪ್ರಕಾರ, ಚಂಪೂವಿನಲ್ಲಿ ಗದ್ಯ, ಪದ್ಯಗಳೆರಡೂ ಬಳಕೆಯಾಗಿರುತ್ತವೆ. ಆದ್ದರಿಂದಲೇ ಇದನ್ನು 'ಮಿಶ್ರ ಕಾವ್ಯ' ಎಂದು ಸಹ ಕರೆಯುವರು. ಇದರಲ್ಲಿ ಅನೇಕ ಬಗೆಯ ಪದ್ಯ ಜಾತಿಗಳು ಬಳಕೆಯಾಗಿರುತ್ತವೆ. ಮುಖ್ಯವಾಗಿ 'ಆರು' ಪದ್ಯ ಜಾತಿಗಳು ಹೆಚ್ಚಾಗಿ ಬಳಕೆಯಾಗಿದ್ದು ಇವನ್ನು 'ಖ್ಯಾತ ಕರ್ನಾಟಕ'ಗಳೆಂದು ಕರೆಯುತ್ತಾರೆ. ಅವುಗಳೆಂದರೆ, ಚಂಪಕಮಾಲೆ, ಉತ್ಪಲಮಾಲೆ, ಮತ್ತೇಭವಿಕ್ರೀಡಿತ, ಶಾರ್ದೂಲ ವಿಕ್ರೀಡಿತ, ಸ್ರಗ್ಧರೆ ಮತ್ತು ಮಹಾಸ್ರಗ್ಧರೆ, ಇವು ಸಂಸ್ಕೃತ ವೃತ್ತಗಳು. ಇವಲ್ಲದೆ ಚಂಪೂ ಕಾವ್ಯಗಳಲ್ಲಿ ಕನ್ನಡ ಪದ್ಯ ಜಾತಿಗಳಾದ ತ್ರಿಪದಿ, ಅಕ್ಕರ ಮತ್ತು ರಗಳೆಗಳೂ ಬಳಕೆಯಾಗಿವೆ. 'ಕಂದ'ದ ಬಳಕೆಯನ್ನು ವಿಶೇಷವಾಗಿ ಚಂಪೂ ಕಾವ್ಯಗಳಲ್ಲಿ ಕಾಣಬಹುದು.

❖ ಚಂಪೂವಿನಲ್ಲಿ ಗದ್ಯವು ಸಾಧಾರಣ ವಿಷಯ ನಿರೂಪಣೆಗೋ ಅಥವಾ ಏನಾದರೂ ವಿವರಣೆ ನೀಡಲು ಬಳಕೆಯಾಗಿರುತ್ತವೆ. ಚಂಪೂ ಕೃತಿಗಳು ದೀರ್ಘವಾದ ಕಾವ್ಯಗಳೇ ಸರಿ. ವಿಸ್ತಾರವಾದ ಕತೆಯನ್ನು ಇವು ಒಳಗೊಂಡಿರುತ್ತವೆ. ಕತೆಯ ಬೇರೆ ಬೇರೆ ಘಟ್ಟಗಳಿಗೆ ಅನುಗುಣವಾಗಿ ಲಂಬ, ಸಂಧಿ, ಆಶ್ವಾಸಗಳೆಂದು ವಿಭಾಗಗಳಾಗಿ ವಿಂಗಡಿಸಿರುವುದು ಕಾಣಬರುತ್ತದೆ.

❖ ಚಂಪೂ ಕಾವ್ಯಗಳಲ್ಲಿ ಹದಿನೆಂಟು ವರ್ಣನೆಗಳಿದ್ದು ಶೃಂಗಾರ, ವೀರ, ಶಾಂತ ರಸಗಳು ಮುಖ್ಯವಾಗಿದ್ದು ಉಳಿದ ರಸಗಳು ಇದನ್ನು ಅನುಸರಿಸಿಕೊಂಡು ಬಂದಿರುತ್ತವೆ. ಕಾವ್ಯದ ಆರಂಭದಲ್ಲಿ ಮಂಗಳ ಪದ್ಯವಿರುತ್ತದೆ. ಇದರಲ್ಲಿ ಕವಿ ತನ್ನ ಆರಾಧ್ಯ ದೈವವನ್ನು ಪ್ರಾರ್ಥಿಸುತ್ತಾನೆ. ನಂತರ ಹಿಂದಿನ ಕವಿಗಳು, ತನ್ನ ಕಾವ್ಯದ ವೈಶಿಷ್ಟ್ಯ ಹಾಗೂ ವೈಯಕ್ತಿಕ ವಿವರಗಳನ್ನು ಕೊಟ್ಟಿರುತ್ತಾನೆ. ಪ್ರತಿ ಸಂಧಿ ಅಥವಾ ಆಶ್ವಾಸದ ಕಡೆಯಲ್ಲಿ ಕವಿ ತನ್ನ ಬಿರುದುಗಳನ್ನು, ಯಾರಿಂದ ಕೃತಿ ರಚನೆಯಾಯಿತು ಎಂಬುದನ್ನು ಹೇಳಿಕೊಂಡಿರುತ್ತಾನೆ. ಕಾವ್ಯದ ಕೊನೆಯಲ್ಲಿ ತನ್ನ ಕಾವ್ಯವನ್ನು ಓದುವುದರಿಂದ ದೊರೆಯುವ ಪ್ರಯೋಜನ ಅಥವಾ ಫಲವಂತಹದು ಎಂಬುದನ್ನು ಹೇಳುತ್ತಾನೆ. ಇದಕ್ಕೇ 'ಫಲಶೃತಿ' ಎಂದು ಹೆಸರು. ಕಾವ್ಯದ ಮೊದಲಲ್ಲಿ ಅಥವಾ ಕೊನೆಯಲ್ಲಿ ಕವಿ ತನ್ನ ಆಶ್ರಯದಾತನನ್ನು ಕುರಿತಾದ ಕೆಲವು ವಿಚಾರಗಳನ್ನು ಹೇಳಿರುತ್ತಾನೆ.

❖ ಹಳೆಗನ್ನಡದಲ್ಲಿ ಚಂಪೂ ಕಾವ್ಯಗಳು ಹೆಚ್ಚಾಗಿ ಕಾಣಬರುತ್ತವೆ. ಪಂಪನ 'ವಿಕ್ರಮಾರ್ಜುನ ವಿಜಯ', 'ಆದಿಪುರಾಣ', 'ರನ್ನನ ಗದಾಯುದ್ಧ' ಮೊದಲಾದವು ಚಂಪೂ ಕಾವ್ಯಗಳಿಗೆ ಉದಾಹರಣೆ : ಚಂಪೂ ರೂಪವು ಪಂಪಯುಗದಲ್ಲಿ ಅಂದರೆ 10 ರಿಂದ 12ನೇ ಶತಮಾನದವರೆಗಿನ ಅವಧಿಯಲ್ಲಿ ಹೆಚ್ಚು ಜನಪ್ರಿಯವಾಗಿತ್ತು. ದೇಸಿ ಛಂದಸ್ಸಿನ ಪ್ರಕಾರಗಳಾದ ರಗಳೆ– ಅಕ್ಕರ – ತ್ರಿಪದಿಯ ಬಳಕೆ ಸಹ ಸೇರಿ ಚಂಪೂ ಹೊಸ ಸ್ವರೂಪವನ್ನು ಪಡೆಯಿತು. ಆದ್ದರಿಂದಲೇ 'ಈ ಯುಗದ ಚಂಪೂ ಕನ್ನಡ ಚಂಪೂವಾಯಿತು' ಎನ್ನುವರು.

**1. ಚಂಪೂ ಕಾವ್ಯ ಪ್ರಕಾರವನ್ನು ಹೀಗೂ ಕರೆಯುವರು**

1) ಮಿಶ್ರ ಕಾವ್ಯ 2) ಕಥನ ಕಾವ್ಯ

3) ಗದ್ಯ ಕಾವ್ಯ 4) ಖಂಡ ಕಾವ್ಯ

**ಉತ್ತರ : 1) ಮಿಶ್ರ ಕಾವ್ಯ**

Downloaded From : www.kpscvaani.com

3) ಕುಮಾರವ್ಯಾಸ ಯುಗ

4) ಪಂಪಯುಗ

**ಉತ್ತರ : 4) ಪಂಪಯುಗ**

❖ ಹಳೆಗನ್ನಡದಲ್ಲಿ ಚಂಪೂ ಕಾವ್ಯಗಳು ಹೆಚ್ಚಾಗಿ ಕಾಣಬರುತ್ತವೆ. ಪಂಪನ 'ವಿಕ್ರಮಾರ್ಜುನ ವಿಜಯ', 'ಆದಿಪುರಾಣ', 'ರನ್ನನ ಗದಾಯುದ್ಧ' ಮೊದಲಾದವು ಚಂಪೂ ಕಾವ್ಯಗಳಿಗೆ ಉದಾಹರಣೆ : ಚಂಪೂ ರೂಪವು ಪಂಪಯುಗದಲ್ಲಿ ಅಂದರೆ 10 ರಿಂದ 12ನೇ ಶತಮಾನದವರೆಗಿನ ಅವಧಿಯಲ್ಲಿ ಹೆಚ್ಚು ಜನಪ್ರಿಯವಾಗಿತ್ತು.

**8. ಕವಿ ತನ್ನ ಬಿರುದುಗಳನ್ನು ಯಾರಿಂದ ಕೃತಿ ರಚನೆಯಾಯಿತು ಎಂಬುದನ್ನು ಹೇಳಿಕೊಂಡಿರುವುದು ಇಲ್ಲಿ**

1) ಪ್ರತಿ ಸಂಧಿ ಅಥವಾ ಆಶ್ವಾಸದ ಆರಂಭದಲ್ಲಿ

2) ಕಾವ್ಯದ ಆರಂಭದಲ್ಲಿ

3) ಪ್ರತಿ ಸಂಧಿ ಅಥವಾ ಆಶ್ವಾಸದ ಕಡೆಯಲ್ಲಿ

4) ಕಾವ್ಯದ ಕೊನೆಯಲ್ಲಿ

**ಉತ್ತರ : 3) ಪ್ರತಿ ಸಂಧಿ ಅಥವಾ ಆಶ್ವಾಸದ ಕಡೆಯಲ್ಲಿ**

❖ ಪ್ರತಿ ಸಂಧಿ ಅಥವಾ ಆಶ್ವಾಸದ ಕಡೆಯಲ್ಲಿ ಕವಿ ತನ್ನ ಬಿರುದುಗಳನ್ನು, ಯಾರಿಂದ ಕೃತಿ ರಚನೆಯಾಯಿತು ಎಂಬುದನ್ನು ಹೇಳಿಕೊಂಡಿರುತ್ತಾನೆ.

**ಸೂಚನೆ : ಈ ಕೆಳಗೆ ಕೊಟ್ಟಿರುವ ಪದ್ಯವನ್ನು ಓದಿ, ಕೇಳಿರುವ ಪ್ರಶ್ನೆಗಳಿಗೆ (9 ರಿಂದ 15) ಉತ್ತರಿಸಿ :**

ಬಚ್ಚಿಟ್ಟುಕೊಂಡು ಬದುಕುವುದು ನನಗಿಷ್ಟವಿಲ್ಲ;
ಹಾಗಂತ ಎಲ್ಲವನ್ನೂ ಬಿಚ್ಚಿ ಹರಾಜಿಗಿಡುತ್ತೇನೆಂದು
ಇದರರ್ಥವಲ್ಲ.

ಬಹು ದೊಡ್ಡ ಮಾತನಾಡುತ್ತ
ದಿನದಿನದ ಸರಳ ಸಾಧಾರಣದ ಬದುಕಿ-
ಗವಮಾನ ಮಾಡುವವರನ್ನು ಕಂಡರೆ
ನನಗೆ ಆಗುವುದಿಲ್ಲ.

ತೂಗಾಡುವ ಕಿರೀಟಗಳಿಗೆ ತಕ್ಕಂತೆ
ತಲೆಯ ಆಕಾರಗಳನ್ನು ಬದಲಾಯಿಸುತ್ತ
ಪರದಾಡುವುದು ನನಗೆ ಅಭ್ಯಾಸವಿಲ್ಲ
ಹೇಗೋ ನನ್ನ ಪಾಡಿಗೆ ನಾನು ಬದುಕುತ್ತೇನೆ;
ಇದ್ದಷ್ಟು ನೆಲವ ಉತ್ತು ಬಿತ್ತಿ ನೀರೆರೆದು
ಮಲಗಿರುವ ಬೀಜಗಳ ಕಣ್ಣು ತೆರೆಸುತ್ತೇನೆ.
ನಾಳೆ ಈ ಸಸಿಗಳೆಲ್ಲ ವಟವೃಕ್ಷವಾಗಿ
ಸಾವಿರ ಜನಕ್ಕೆ ನೆರಳಾದಾವೆಂಬ ಮಹದಾಸೆ
ಇರದಿದ್ದರೂ
ಒಂದೆರಡಾದರೂ ಬೀಜವಾಗುವಂಥ ಹಣ್ಣು
ಬಿಟ್ಟಾವೆಂದು ನಂಬಿ ಕಾಯುತ್ತೇನೆ.

❖ ಇದು ತಾಂತ್ರಿಕ ಯುಗ, [AI (Artificial Intelligence)] ಕೃತಕ ಬುದ್ಧಿವಂತಿಕೆ ಯುಗ. ಬಟನ್ ಒತ್ತಿದರೆ ಸಾಕು ಬೇಕೆಂದ ಮಾಹಿತಿ ಕ್ಷಣಾರ್ಧದಲ್ಲಿ ಕಣ್ಮುಂದೆ ಬರುತ್ತದೆ. ಇದು ಮಾಹಿತಿಯ ವಿಷಯಕ್ಕಾಯ್ತು. ಆದರೆ, ವ್ಯಕ್ತಿಯೊಬ್ಬನ ಭಾವನೆಗಳನ್ನು ಹೀಗೆ ಇಷ್ಟೇ ಸಲೀಸಾಗಿ ಅರ್ಥೈಸಲಾದೀತೇ? ವ್ಯಕ್ತಿಯ ಭಾವನೆಗಳನೇಕ ಇಂದಿಗೂ ನಿಗೂಢವಾಗಿಯೇ ಉಳಿದಿವೆ. ಎಷ್ಟೇ ಸರಳ ವ್ಯಕ್ತಿಯನ್ನೂ ಪರಿಪೂರ್ಣವಾಗಿ ಅರ್ಥ ಮಾಡಿಕೊಳ್ಳುವುದು ಕಷ್ಟದ ಮಾತೇ. ಅದಕ್ಕೆಂದೇ ವ್ಯಕ್ತಿ ಗುಂಪಿನಲ್ಲಿದ್ದಾಗಲೂ ಒಬ್ಬಂಟಿಯೇ! ಅವನ ಮನದ ಭಾವನೆಗಳು ಅವನಿಗಷ್ಟೇ ಪರಿಪೂರ್ಣವಾಗಿ ಅರ್ಥವಾದೀತು. ಎಷ್ಟೆಲ್ಲಾ ಸೃಷ್ಟಿಸಿರುವ ಮಾನವನಿಗೆ, ಮನಸ್ಸಿಗೊಂದು ಸಮರ್ಥ ಕನ್ನಡಿಯನ್ನು, ವ್ಯಕ್ತಿಯ ಮನಸ್ಸನ್ನೋದುವ AI / ಕಂಪ್ಯೂಟರ್ ಒಂದನ್ನು ಇಂದಿಗೂ ಸೃಷ್ಟಿಸಲಾಗಿಲ್ಲ.

❖ ವ್ಯಕ್ತಿಯೊಬ್ಬ ಅರ್ಥವಾಗದಿರುವುದಕ್ಕೆ ಒಂದು ಕಾರಣ ಅವನು ಹಾಕಿಕೊಂಡಿರುವ ಮುಖವಾಡಗಳು. ಸಮಯಕ್ಕೆ ತಕ್ಕಂತೆ, ಎದುರಿನ ವ್ಯಕ್ತಿಗೆ ತಕ್ಕಂತೆ, ಸಂದರ್ಭಕ್ಕೆ ತಕ್ಕಂತೆ ಮುಖವಾಡಗಳನ್ನು ಹಾಕಿಕೊಳ್ಳುವ ಕಲೆ ಮನುಷ್ಯನಿಗೆ ಚೆನ್ನಾಗಿ ಕರಗತವಾಗಿದೆ. ಕೆಲವೊಮ್ಮೆ ತಾನು ತೊಟ್ಟುಕೊಂಡ ಮುಖವಾಡವೇ ನಿಜಮುಖವೆಂದು ಅವನ ಮುಖವಾಡ ಸಮರ್ಥವಾಗಿ ನಟನೆಯಾಡುತ್ತದೆ.

❖ ಹಾಗೆಂದು ವ್ಯಕ್ತಿಯೊಬ್ಬನಿಗೆ ಖಾಸಗಿ ಬದುಕೊಂದು ಇರಲೇಬಾರದೆಂದು ಇದರರ್ಥವಲ್ಲ. ಆದರೆ ತನ್ನ ವ್ಯಕ್ತಿತ್ವವನ್ನು ಗಟ್ಟಿಗೊಳಿಸಿಕೊಂಡು ಬದುಕುವ ವ್ಯಕ್ತಿ ಪೊಳ್ಳು ಸ್ವಾರ್ಥಕ್ಕೆ ಬಲಿಯಾಗಿ ಹೇಗೆಂದರೆ ಹಾಗೆ ವ್ಯಕ್ತಿತ್ವ ಬದಲಿಸುವ ಊಸರವಳ್ಳಿಯಾಗಬಾರದಲ್ಲವೇ?

Downloaded From: www.kpscvaani.com

❖ ಪಠ್ಯ ವಿಷಯವನ್ನು ವೇಗವಾಗಿ ಓದುತ್ತಾ ಅದೇ ವೇಗದಲ್ಲಿ ಅರ್ಥಮಾಡಿಕೊಳ್ಳುವುದೇ ಶೀಘ್ರವಾಚನ. ಕಡಿಮೆ ಸಮಯದಲ್ಲಿ ಹೆಚ್ಚು ವಿಷಯಗಳನ್ನು ಓದಿ ಅರ್ಥಮಾಡಿಕೊಳ್ಳುವುದು. ಸಮಯದ ಸದ್ವಿನಿಯೋಗಕ್ಕೆ ಅರ್ಥಗ್ರಹಿಕೆಗೆ ಜ್ಞಾನಾರ್ಜನೆಗೆ ಮತ್ತು ಸಮಕಾಲೀನ ಜಗತ್ತಿನೊಡನೆ ನಿರಂತರ ಸಂಪರ್ಕ ಹೊಂದಲು ವೇಗವರ್ಧಿತ ಓದು ಸಹಾಯಕ. ನಮ್ಮ ವಿದ್ಯಾರ್ಥಿಗಳು ಕೇವಲ ಪಠ್ಯ ಪುಸ್ತಕಗಳನ್ನಷ್ಟೇ ಓದುವುದರಿಂದ ಅವರ ವ್ಯಕ್ತಿತ್ವ ವಿಕಾಸ ಪೂರ್ಣವಾಗಲಾರದು. ಶಾಲೆಯ ಓದಿಗೆ ಪೂರಕವಾಗಿ ಮತ್ತು ಸಾಮಾಜಿಕ ಜೀವನಕ್ಕೆ ಅಗತ್ಯವೆನಿಸುವ ಹಲವು ಹತ್ತು ವಿಷಯಗಳನ್ನು ಓದಲೇಬೇಕಾಗುತ್ತದೆ. ಆದುದರಿಂದ ವಿದ್ಯಾರ್ಥಿಗಳಿಗೆ ವೇಗ ವರ್ಧಕ ಓದಿನಲ್ಲಿ ಸೂಕ್ತ ತರಬೇತಿ ಮತ್ತು ಅಭ್ಯಾಸಗಳನ್ನು ನೀಡಬೇಕು.

**18. ಉತ್ತಮ ಕೈ ಬರೆಹದ ಲಕ್ಷಣ**

1) ಕಾಗುಣಿತದ ಕ್ರಮಬದ್ಧತೆ
2) ಪದಗಳನ್ನು ಕತ್ತರಿಸಿ ಬರೆಯುವುದು
3) ವಕ್ರವಾದ ಸಾಲುಗಳಲ್ಲಿ ಬರೆಯುವುದು
4) ಅಕ್ಷರಗಳ ಗಾತ್ರ ಚಿಕ್ಕದು, ದೊಡ್ಡದು ಮಾಡಿ ಬರೆಯುವುದು

**ಉತ್ತರ : 1) ಕಾಗುಣಿತದ ಕ್ರಮಬದ್ಧತೆ**

❖ ಉತ್ತಮ ಮತ್ತು ಸುಂದರ ಕೈಬರಹವು ಎಲ್ಲರನ್ನೂ ಆಕರ್ಷಿಸುತ್ತದೆ. ಸುಂದರವಾದ ಕೈ ಬರಹದ ಕೌಶಲವಿರುವುದು ಎಲ್ಲರಿಂದಲೂ ಮಾನ್ಯತೆ, ಪಡೆಯುತ್ತಾರೆ. ಸುಂದರ ಕೈ ಬರಹವನ್ನು ಬರೆಯುವುದು ಒಂದು ಕಲೆ ಆಗಿದ್ದು ಸುಂದರ ಬರಹವು ಹಲವು ರೀತಿಗಳಲ್ಲಿ ಉಪಯೋಗಕ್ಕೆ ಬರುತ್ತದೆ. ಒಬ್ಬರಕೈ ಬರಹದ ಸುಂದರತೆ ಅಥವಾ ವಕ್ರತೆ ಆ ವ್ಯಕ್ತಿ ಬರಹ ಕಲಿಯುವಲ್ಲಿ ಮಾಡಿರುವ ಕ್ರಮಬದ್ಧ ಅಭ್ಯಾಸಗಳನ್ನು ಆಧರಿಸಿರುತ್ತದೆ. ಆದರೂ ಕೆಲವರು ಮೂಲತಃ ಸುಂದರವಾಗಿ ಬರೆಯುತ್ತಾರೆ. ಸ್ವಲ್ಪವೇ ಅಭ್ಯಾಸದಿಂದ ಪರಿಣಾಮಕಾರಿಯಾಗಿ ಬರೆಯುತ್ತಾರೆ. ಕೆಲವರು ಎಷ್ಟೇ ಅಭ್ಯಾಸ ಮಾಡಿದರೂ ಸುಂದರವಾಗಿ ಬರೆಯಲಾರರು. ಇದಕ್ಕೆ ಸ್ನಾಯು, ಮಾನಸಿಕ ಮತ್ತು ಶೈಕ್ಷಣಿಕ ತರಬೇತಿಯ ಅಂಶಗಳು ಕಾರಣವಾಗಿರಬಹುದು. ಬರಹವನ್ನು ಕಲಿಯುವ ಪ್ರಾಥಮಿಕ ಹಂತಗಳಲ್ಲಿ ಪಡೆದಿರುವ ತರಬೇತಿ ಮತ್ತು ಬರಹ ಕಲಿತ ನಂತರ ಸುಂದರ, ಉತ್ತಮವಾದ ಬರವಣಿಗೆಯನ್ನು ಕಲಿಯಲು ಅವರು ವಹಿಸಿರುವ ಆಸಕ್ತಿ. ಅವರ ಪ್ರಾಮಾಣಿಕ ಪ್ರಯತ್ನ. ಸತತ ಅಭ್ಯಾಸದೊಂದಿಗೆ ಕೆಲವರು ಸುಂದರವಾದ ಬರವಣಿಗೆಯನ್ನು ರೂಢಿಸಿಕೊಂಡಿರುತ್ತಾರೆ. ಉತ್ತಮ ಕೈ ಬರಹದ ಕೆಲವು ಗುಣಲಕ್ಷಣಗಳು ಈ ರೀತಿ ಇವೆ.

1. ಕೈ ಬರಹವು ದುಂಡಾಗಿ, ಆಕರ್ಷಕವಾಗಿರಬೇಕು.
2. ಅಕ್ಷರಗಳ ರಚನೆ ಸುಸ್ಪಷ್ಟವಾಗಿರಬೇಕು.
3. ಅಕ್ಷರಗಳು ಸಮರೂಪದ ಗಾತ್ರದಲ್ಲಿರಬೇಕು.
4. ಅಕ್ಷರ, ಪದಗಳ ಜೋಡಣೆ ಸುಸಂಬದ್ಧವಾಗಿರಬೇಕು.
5. ಕೈಬರಹದಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳಬೇಕು.
6. ಕಾಗುಣಿತ ಲೇಖನ, ಚಿಹ್ನೆಗಳ ಬಳವಡಿಕೆ ಕ್ರಮಬದ್ಧವಾಗಿರಬೇಕು.
7. ನೇರವಾದ ಸಾಲುಗಳಲ್ಲಿ ಬರೆಯಬೇಕು.
8. ವಾಕ್ಯ ವೃಂದಗಳಲ್ಲಿ ಬರೆಯಬೇಕು.
9. ವೇಗವಾಗಿ ಬರೆಯಬೇಕು.

**19. ಖಂಡ ಪದ್ಧತಿಯ ಲಕ್ಷಣವೆಂದರೆ**

1) ಇಡಿಯಿಂದ ಬಿಡಿಗೆ
2) ಕಡಿಮೆ ಸಮಯ
3) ಬಿಡಿಯಿಂದ ಇಡಿಗೆ
4) ಸ್ವಾಭಾವಿಕ ಕಲಿಕೆ

**ಉತ್ತರ : 3. ಬಿಡಿಯಿಂದ ಇಡಿಗೆ**

❖ ಬಿಡಿಯಿಂದ – ಇಡಿಗೆ : ಕಲಿಯಬೇಕಾಗಿರುವ ವಿಷಯ ವಸ್ತುವನ್ನು ಸಂಪೂರ್ಣವಾಗಿ ಒಂದು ಘಟಕವೆಂದು ಪರಿಗಣಿಸಿದಾಗ ಅಥವಾ ವಿಷಯ ವಸ್ತುವನ್ನು ಭಾಗಗಳಾಗಿ ಒಡೆಯದೇ ಅಖಂಡವಾಗಿ ಕಲಿಸುವ ಅಥವಾ ಕಲಿಯುವ ಪದ್ಧತಿಯಾಗಿದೆ. ಆದ್ದರಿಂದ ಇದನ್ನು ಅಖಂಡ ಕಲಿಕಾ ಪದ್ಧತಿಯ ಲಕ್ಷಣವೆಂದೇ ಪರಿಗಣಿಸಲಾಗಿದೆ. ಈ ರೀತಿಯ ಪದ್ಧತಿಯ ಅನುಕರಣೆಗೆ ಕಲಿಯಬೇಕಾದ ಎರಡೂ ಘಟಕಗಳ ಮಧ್ಯೆ ಉತ್ತಮ ಸಹಸಂಬಂಧವಿರ ಬೇಕಾದದ್ದು ಅತ್ಯಂತ ಮಹತ್ವದ್ದಾಗಿರುತ್ತದೆ.

Downloaded From: www.kpsvaani.com

**ಉತ್ತರ : 1) ಆದೇಶ ಸಂಧಿ**

ಕೆಲವೊಮ್ಮೆ ಉತ್ತರ ಪದದ ಆದಿಯಲ್ಲಿರುವ **ಪ್,ಬ್,ಮ್,** ಗಳ ಸ್ಥಾನದಲ್ಲಿ ಸಂಧಿಯಾಗುವಾಗ **'ವ್'** ಕಾರಾದೇಶ ಆದರೆ ಇದನ್ನು **ಆದೇಶ ಸಂಧಿ** ಎನ್ನುತ್ತೇವೆ.

**ವಕಾರಾದೇಶ ಸಂಧಿ**

ನೊರೆ + ಪಾಲು = ನೊರೆವಾಲು

ನೆಲೆ + ಮನೆ = ನೆಲೆವನೆ

ತಲೆ + ಬಾಗು = ತಲೆವಾಗು

ನಾಲ್ಕು + ಮಡಿ = ನಾಲ್ವಡಿ

ಎಳ + ಬಳ್ಳಿ = ಎಳವಳ್ಳಿ

ನಲ್ + ಮಾತು = ನಲ್ವಾತು

ತೆರೆ + ಬಾಯಿ = ತೆರೆವಾಯಿ

ಪಳ + ಮಾನಸ = ಪಳವಾನಸ

ಕೆನೆ + ಪಾಲು = ಕೆನೆವಾಲು

ನೆರೆ + ಬೀದಿ = ನೆರೆವೀದಿ

ಬ್ = ವ್

ಕಡು + ಬೆಳ್ಪು = ಕಡುವೆಳ್ಪು

ಬ್ = ವ್

ಉತ್ತರ ಪದದ ಆದಿಯಲ್ಲಿರುವ **'ಬ್'** (ಬೆಳ್ಪು) ಕಾರವನ್ನು ಹೊಡೆದು ಹಾಕಿ ಸಂಧಿಯಾಗುವಾಗ ಅದೇ ಸ್ಥಳದಲ್ಲಿ **'ವ್'** (ವೆಳ್ಪು) ಕಾರ **ಆದೇಶವಾಗಿ** ಬಂದು ನಿಂತಿದೆ.

**27. 'ಲಿಪಿಯಲ್ಲಿ' ಈ ಪದದಲ್ಲಿರುವ ವಿಭಕ್ತಿ ಮತ್ತು ಅದರ ಕಾರಕಾರ್ಥಗಳ ಸರಿಯಾದ ಜೋಡಿ**

1) ದ್ವಿತೀಯಾ ವಿಭಕ್ತಿ – ಕರ್ಮಾರ್ಥ

2) ದ್ವಿತೀಯಾ ವಿಭಕ್ತಿ – ಅಪಾದಾನಕಾರಕ

3) ಸಪ್ತಮಿ ವಿಭಕ್ತಿ – ಅಧಿಕರಣಕಾರಕ

4) ಸಪ್ತಮೀ ವಿಭಕ್ತಿ – ಅಪಾದಾನಕಾರಕ

**ಉತ್ತರ : 3) ಸಪ್ತಮಿ ವಿಭಕ್ತಿ – ಅಧಿಕರಣಕಾರಕ**

| ವಿಭಕ್ತಿ | ಹೊಸಗನ್ನಡ ಪ್ರತ್ಯಯ | ಹಳೆಗನ್ನಡ ಪ್ರತ್ಯಯ | ಕಾರಕಗಳು |
|---|---|---|---|
| ಪ್ರಥಮಾ | ಉ | ಮ್/ಂ | ಕರ್ತೃ |
| ದ್ವಿತೀಯಾ | ಅನ್ನು | ಅಮ್/ಅಂ | ಕರ್ಮ |
| ತೃತೀಯಾ | ಇಂದ | ಇಂ/ಇಂದಂ ಇಮ್/ಇಂದೆ | ಕರಣ |
| ಚತುರ್ಥೀ | ಗೆ, ಇಗೆ, ಕ್ಕೆ ಅಕ್ಕೆ | ಕ್ಕೆ, ಗೆ, ಕೆ, ಕ್ಕೆ | ಸಂಪ್ರದಾನ |
| ಪಂಚಮೀ | ದೆಸೆಯಿಂದ ಇಂದ/ಯಿಂದ | ಅತ್ತಣಿಂ ಅತ್ತಣಿಂದೆ | ಅಪಾದಾನ |
| ಷಷ್ಠೀ | ಅ | ಅ | ಸಂಬಂಧ |
| ಸಪ್ತಮೀ | ಅಲ್ಲಿ/ಇಲ್ಲಿ/ಒಳು | ಳ್/ಒಳ್ | ಅಧಿಕರಣ |
| ಸಂಬೋಧನಾ | ಆ,ಏ,ಇರಾ,ಈ | ಆ,ಈ,ಏ,ಇರಾ | ಅಭಿಮುಖೀಕರಣ |

**28. 'ಮನುಷ್ಯ' ಎಂಬ ಪದವು**

1) ಅಂಕಿತನಾಮ 2) ರೂಢನಾಮ

3) ಅನ್ವರ್ಥ ನಾಮ 4) ಭಾವನಾಮ

**ಉತ್ತರ : 2) ರೂಢನಾಮ**

(ಅ) **ರೂಢ ನಾಮ:–** ಪರಂಪರಾಗತವಾಗಿ ಮೊದಲಿನಿಂದಲೂ ರೂಢಿಯಿಂದ ಬಂದ ನಾಮಗಳೆಲ್ಲವನ್ನೂ ರೂಢನಾಮ ಗಳೆನ್ನುವರು.

**ಉದಾ:** ಹುಡುಗ–ಹುಡುಗಿ, ಮನುಷ್ಯ, ಬೆಟ್ಟ–ಗುಡ್ಡ, ಸಮುದ್ರ, ಊರು, ಪರ್ವತ, ನದಿ, ಪಟ್ಟಣ, ನಗರ ಇತ್ಯಾದಿ.

(ಆ) **ಅಂಕಿತ ನಾಮ:–** ಇದ್ದ ಹಲವಾರು ವ್ಯಕ್ತಿ, ವಸ್ತು, ಸ್ಥಳಗಳಲ್ಲಿ ಒಂದನ್ನಷ್ಟೇ ಗುರುತಿಸುವುದಕ್ಕಾಗಿ ಇಟ್ಟಂತಹ ಹೆಸರುಗಳನ್ನು ಅಥವಾ ವ್ಯವಹಾರದ ಅನುಕೂಲಕ್ಕಾಗಿ ಇಟ್ಟ ಹೆಸರುಗಳನ್ನು ಅಂಕಿತನಾಮ ಎನ್ನುವರು.

**ಉದಾ:** ಶಿವ, ವಿಷ್ಣು, ರಾಮು, ಸಿಂಧು, ಸಿಂಚನಾ, ಸುಚಿತ್ರ, ರಂಜಿತ, ಧಾರವಾಡ, ಯಾದವಾಡ, ವಿಜಯಪುರ, ಸಹ್ಯಾದ್ರಿ, ಕರ್ನಾಟಕ, ಬೆಂಗಳೂರು, ಮನಗೂಳಿ, ಇತ್ಯಾದಿ.

(ಇ) **ಅನ್ವರ್ಥಕ ನಾಮ:–** ವ್ಯಕ್ತಿ ಮಾಡುವಂತಹ ವೃತ್ತಿಯ ಹಿನ್ನೆಲೆ ಅಥವಾ ಅವನು ಹೊಂದಿರುವ ದೈಹಿಕ ಅಂಗವೈಕಲ್ಯತೆಯ ಹಿನ್ನೆಲೆಯಲ್ಲಿ ಬಂದ ಹೆಸರುಗಳು

Downloaded From: www.kpscvaani.com

ಅಥವಾ ಅರ್ಥಕ್ಕೆ ಅನುಗುಣವಾಗಿ ಇಟ್ಟ ಹೆಸರುಗಳನ್ನು ಅನ್ವರ್ಥಕನಾಮ ಎನ್ನುವರು.

**ಉದಾ:** ಶಿಕ್ಷಕ, ಚಾಲಕ, ಉಪನ್ಯಾಸಕಿ, ಬಡಿಗ, ಗಾಣಿಗ, ಕುಂಬಾರ, ಕಂಬಾರ, ಕುಳ್ಳ, ಲಂಬು, ದಾನಿ, ದಯಾಮಯಿ, ಮುಂಗೋಪಿ, ಕುಂಟ, ಕುರುಡ, ಹೆಳವ, ಕಿವುಡ, ಮೂಗ, ಬಿಳಿಯ, ಕರಿಯ, ಕೆಂಚ ಇತ್ಯಾದಿ.

❖ **ಭಾವನಾಮಗಳು:–** ನಾಮ ಪ್ರಕೃತಿಯ ಹಿಂದಿರುವ ಭಾವವನ್ನು ತಿಳಿಸುವ ನಾಮಪ್ರಕೃತಿಗಳನ್ನು ಭಾವನಾಮಗಳೆನ್ನುವರು ಅಥವಾ ಒಂದು ವಸ್ತುವಿನ ಅಥವಾ ಕ್ರಿಯೆಯ ಭಾವವನ್ನು ತಿಳಿಸುವ ಶಬ್ದಗಳಿಗೆ ಭಾವನಾಮಗಳೆನ್ನುತ್ತಾರೆ.

**29. ಚತುರ್ಥಿ ವಿಭಕ್ತಿಯ ಕಾರಕಾರ್ಥ**

1) ಅಪಾದಾನ 2) ಅಧಿಕರಣ

3) ಸಂಬಂಧ 4) ಸಂಪ್ರದಾನ

**ಉತ್ತರ : 4) ಸಂಪ್ರದಾನ**

❖ ಇದೇ ಪತ್ರಿಕೆಯ ಪ್ರಶ್ನೆ ಸಂಖ್ಯೆ 27ರಲ್ಲಿ ವಿವರಿಸಲಾಗಿದೆ ಗಮನಿಸಿ.

**30. ಪೂರ್ವೋತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಿಂದ ಸಮಾನವಾಗಿದ್ದು ವಿಶೇಷಣ–ವಿಶೇಷ್ಯ ಸಂಬಂಧದಿಂದ ಕೂಡಿ ಆಗುವ ಸಮಾಸ**

1) ಕರ್ಮಧಾರೆಯ ಸಮಾಸ

2) ತತ್ಪುರುಷ ಸಮಾಸ

3) ದ್ವಿಗು ಸಮಾಸ

4) ಅಂಶಿ ಸಮಾಸ

**ಉತ್ತರ : 1. ಕರ್ಮಧಾರೆಯ ಸಮಾಸ**

❖ ಪೂರ್ವೋತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಿಂದ ಸಮಾನವಾಗಿದ್ದು ವಿಶೇಷಣ–ವಿಶೇಷ್ಯ ಸಂಬಂಧದಿಂದ ಕೂಡಿ ಆಗುವ ಸಮಾಸ.

❖ ವಿಶೇಷಣ (ಬಣ್ಣಿಸುವುದು) ವಿಶೇಷ್ಯ (ಬಣ್ಣಿಸಿ ಕೊಳ್ಳುವುದು) ಉಪಮಾನ (ಹೋಲಿಸು ವುದು), ಉಪಮೇಯ (ಹೋಲಿಸಿ ಕೊಳ್ಳುವುದು) ಗಳು ಸೇರಿ ಆಗುವ ಮತ್ತು ಪೂರ್ವ ಪದದಲ್ಲಿ ಸಂಭಾವನೆ, ಅವಧಾರಣೆ ತೋರುವ ಸಮಾಸಗಳು ನಾಮ ದೊಂದಿಗೆ ಸೇರಿ ಉತ್ತರ ಪದದ ಅರ್ಥ ಪ್ರಧಾನ ವಾಗಿರುವಂತಹ ಸಮಾಸವನ್ನು ಕರ್ಮಧಾರೆಯ ಸಮಾಸ ಎನ್ನುವರು.

# PART - II
# Language - II
# ENGLISH

❖ **Read the passage and answer the questions 31-38 by choosing the most appropriate option :**

❖ Mallu lived in a village near the forest. He went daily to the fetch wood, wild fruits and flowers from the forest. He sold them in the nearby town and gave the money to his mother Shanthamma. One day, when he was plucking jack fruits, a big elephant came there. Mallu was afraid. The elephant waved his trunk and fan like ears. Mallu requested the elephant, "Gajaraja, I am a poor by. Don't harm me. My mother is alone at home. I must take money to her." Gajaraja stood still. Mallu thanked the elephant, took his bag and bundle of wood and went home.

❖ The next day was Mallu's birthday. Shanthamma had prepared sweets. Mallu took some sweets went to the forest and waited for Gajaraja. When he came, Mallu offered sweets, Jaggery and other nice food to Gajaraja and said, "Oh, great Gajaraja! please take these sweets and be my friend. Today is my birthday". Gajaraja happily ate all the sweets and said, "Mallu dear, I am very happy to-day, because of the sweets and your friendship. Thank you, Now come with me."

Downloaded From: www.kpscvaani.com

❖ Gajaraja helped Mallu to climb upon him. Mallu felt very happy and proud sitting on the back of the elephant. Mallu and Gajaraja went into the deep forest. Then Gajaraja took Mallu near by a tree. There was a wide hallow in the tree. Gajaraja took out fruits and other rare objects from that hollow, and gave them to Mallu. Everyday, Mallu would bring some nice food to Gajaraja, and Gajaraja suppiled wood, fruits and flowers to Mallu. By selling those things Mallu earned enough money and became a shop owner. Sometimes, Gajaraja visited Mallu in his shop.

One day Gajaraja looked very sad. He told Mallu, "people are destorying the forest. We have no place to live. My son went to a town in search of food and he was killed. What have we done to you all Mallu?" Mallu had no answer.

**ಗದ್ಯಭಾಗದ ಕನ್ನಡ ಸಾರಾಂಶ :** ಮಲ್ಲು ಎನ್ನುವ ವ್ಯಕ್ತಿ ಅರಣ್ಯದ ಬಳಿಯಿರುವ ಹಳ್ಳಿಯಲ್ಲಿ ವಾಸಿಸುತ್ತಿದ್ದ. ಆತನು ದಿನನಿತ್ಯ ಕಟ್ಟಿಗೆ, ಹಣ್ಣುಗಳು ಹಾಗೂ ಹೂವುಗಳನ್ನು ಸಂಗ್ರಹಿಸಿ ತರಲು ಕಾಡಿಗೆ ಹೋಗುತ್ತಿದ್ದನು. ಹತ್ತಿರದ ಪಟ್ಟಣಕ್ಕೆ ಹೋಗಿ, ಅವುಗಳನ್ನು ಮಾರಿ ಬಂದ ಹಣವನ್ನೆಲ್ಲ ತನ್ನ ತಾಯಿ ಶಾಂತಮ್ಮಳಿಗೆ ಕೊಡುತ್ತಿದ್ದನು. ಒಂದು ದಿನ ಕಾಡಿನಲ್ಲಿ ಹಲಸಿನ ಹಣ್ಣನ್ನು ಕೀಳುತ್ತಿರುವಾಗ ಆನೆಯೊಂದು ಅಲ್ಲಿಗೆ ಬಂದಿತು. ಆಗ ಮಲ್ಲು ಭಯಗೊಂಡನು. ಆನೆ ತನ್ನ ಸೊಂಡಿಲು ಮತ್ತು ಕಿವಿಗಳನ್ನು ಅಲುಗಾಡಿಸಿತು. ಮಲ್ಲು ಆನೆಗೆ 'ಗಜರಾಜನೇ ನನಗೇನು ತೊಂದರೆ ಕೊಡಬೇಡ. ನನ್ನ ತಾಯಿ ಮನೆಯಲ್ಲಿ ಒಬ್ಬಳೇ ಇದ್ದಾಳೆ. ನಾನು ಅವಳಿಗೋಸ್ಕರ ಹಣವನ್ನು ಕೊಂಡ್ಯೊಯಬೇಕು' ಎಂದು ಮನವಿ ಮಾಡಿಕೊಂಡನು. ಗಜರಾಜ ಅವನಿಗೆ ಯಾವುದೇ ತೊಂದರೆ ಮಾಡಲಿಲ್ಲ. ಆನೆಗೆ ಧನ್ಯವಾದ ಹೇಳಿದ ಮಲ್ಲು ತನ್ನ ಚೀಲದೊಡನೆ ಮನೆಗೆ ಮರಳಿದನು. ಮಾರನೆಯ ದಿನ ಮಲ್ಲುನ ಜನ್ಮದಿನವಿತ್ತು. ಶಾಂತಮ್ಮ ಸಿಹಿ ತಯಾರಿಸಿದ್ದಳು. ಮಲ್ಲು ಕೆಲವೊಂದು ಸಿಹಿ ತಿನಿಸುಗಳನ್ನು ತೆಗೆದುಕೊಂಡು ಕಾಡಿಗೆ ಹೋಗಿ ಗಜರಾಜನಿಗೆ ಕಾಯ್ದು, ಮನೆಯಿಂದ ತಂದಿದ್ದ ಸಿಹಿ ತಿನಿಸುಗಳು, ಬೆಲ್ಲ ಮತ್ತು ಇತರೇ ತಿನಿಸುಗಳನ್ನು ಕೊಟ್ಟನು. ಮಲ್ಲು 'ಗಜರಾಜನೇ ಈ ಸಿಹಿ ತಿನಿಸುಗಳನ್ನು ಸ್ವೀಕರಿಸಿ ನನ್ನ ಗೆಳೆಯನಾಗು. ಇವತ್ತು ನನ್ನ ಜನ್ಮದಿನವೆಂದು' ಹೇಳಿದನು. ನನ್ನ ಪ್ರೀತಿಯ ಸ್ನೇಹಿತನೆ, ನನಗೂ ನಿನ್ನ ಸ್ನೇಹದಿಂದ ಸಂತೋಷವಾಗಿದೆ. ನನ್ನ ಸ್ನೇಹಿತನಾಗಿದ್ದಕ್ಕೆ ಧನ್ಯವಾದಗಳು ಈಗ ನನ್ನೊಡನೆ ಬಾ' ಎಂದು ಆನೆ ಹೇಳಿತು. ಗಜರಾಜ ಮಲ್ಲುನನ್ನು ಅರಣ್ಯದೊಳಗೆ ಕರೆದುಕೊಂಡು ಹೋಗಿ ಖಾಲಿಯಿರುವ ಮರದ ಪೊಟರೆಯಿಂದ ಹಣ್ಣುಗಳ ಜೊತೆಗೆ ಕೆಲವೊಂದಿಷ್ಟು ವಸ್ತುಗಳನ್ನು ಕೊಟ್ಟಿತು. ಹೀಗೆ ಪ್ರತಿದಿನವೂ ಮಲ್ಲು, ಗಜರಾಜನಿಗೆ ಏನಾದರೊಂದು ಆಹಾರವನ್ನು ತಂದುಕೊಡುತ್ತಿದ್ದ. ಅದಕ್ಕೆ ಪ್ರತಿಯಾಗಿ ಗಜರಾಜನೂ ಕೂಡ ಸಾಕಷ್ಟು ಹಣ್ಣುಗಳನ್ನು, ಕಟ್ಟಿಗೆಗಳನ್ನು, ಹೂವುಗಳನ್ನು ಕೊಡುತ್ತಾನೆ. ಇದರಿಂದ ಹೇರಳವಾಗಿ ಮಲ್ಲು ಹಣವನ್ನು ಗಳಿಸುವುದರ ಮೂಲಕ ಒಂದು ಅಂಗಡಿಯ ಮಾಲೀಕನಾದನು. ಕೆಲವೊಮ್ಮೆ ಗಜರಾಜನೂ ಕೂಡ ಮಲ್ಲುವಿನ ಅಂಗಡಿಗೆ ಭೇಟಿ ಕೊಡುತ್ತಿದ್ದನು.

ಒಂದು ದಿನ ಗಜರಾಜ ಬೇಸರದಲ್ಲಿರುವಂತೆ ಕಂಡಿತು. 'ಮನುಷ್ಯರು ಅರಣ್ಯವನ್ನು ನಾಶಮಾಡುತ್ತಿದ್ದಾರೆ ನಮಗೆ ಜೀವಿಸಲು ಸ್ಥಳವೇ ಇಲ್ಲದಂತಾಗಿದೆ'. ನನ್ನ ಮಗ ಆಹಾರವನ್ನು ಅರಸಿ ಹೋದಾಗ ಆತನನ್ನು ಕೊಲ್ಲಲಾಯಿತು. ನಾವು ನಿಮಗೆಲ್ಲ ಏನು ತೊಂದರೆ ಮಾಡಿದ್ದೇವೆ ಮಲ್ಲು? ಎಂದು ಕೇಳಿತು. ಮಲ್ಲು ನಿರುತ್ತರನಾಗಿದ್ದನು.

**31. Mallu thanked Gajaraja because**

1) He hit him with his trunk
2) He told not harm him
3) He poured water on him
4) He allowed him to touch his body

**Ans : 2) He told not harm him**

Downloaded From: www.kpscvaani.com

**54. The corrcet sequence of facilitating a prose lesson by the teacher is**

1) Engage, Evaluate, Explain, Expand, Explore
2) Engage, Explain, Evaluate, Explore, Expand
3) Engage, Explore, Explain, Expand, Evaluate
4) Engage, Expand, Explore, Evaluate, Explain

**Ans : 3) Engage, Explore, Explain, Expand, Evaluate**

❖ ಶಿಕ್ಷಕರು ವಿದ್ಯಾರ್ಥಿಗಳಿಗೆ ಪಾಠ ಬೋಧಿಸುವಾಗ ಈ ಕೆಳಗಿನ ಆಯ್ಕೆಗಳಲ್ಲಿ ಯಾವ ಆಯ್ಕೆಯನ್ನು ಅನುಸರಿಸಿದರೆ ಕಲಿಕೆ ಸುಗಮಕರವಾಗುತ್ತಿದೆ? ಎಂದು ಪ್ರಶ್ನಿಸಲಾಗಿದೆ.

ಅಥವಾ

ಈ ಕೆಳಗಿನ ಯಾವ ಆಯ್ಕೆಯನ್ನು ಅನುಸರಿಸುವುದರ ಮೂಲಕ ಶಿಕ್ಷಕರು, ಪಾಠ ಬೋಧನೆಯನ್ನು ಪರಿಣಾಮಕಾರಿಯನ್ನಾಗಿ ಮಾಡಬಹುದೆಂದು ಕೇಳಲಾಗಿದೆ.

ಈ ಪ್ರಶ್ನೆಯು 5E ಗಳಿಗೆ ಸಂಬಂಧಿಸಿದೆ. ಇವುಗಳನ್ನು ಪಾಠ ಬೋಧನೆಯ ಪಂಚ ಸೋಪಾನಗಳೆಂದೂ ಕರೆಯಬಹುದು. ಅಲ್ಲದೆ ಇವು ಪಾಠಬೋಧನೆಯ 5 ಹಂತಗಳೂ ಕೂಡ ಆಗಿದೆ. ಅವುಗಳೆಂದರೇ

1. ತೊಡಗಿಸುವುದು 2. ಅನ್ವೇಷಿಸುವುದು
3. ವಿವರಿಸುವುದು 4. ವಿಸ್ತರಿಸುವುದು
5. ಮೌಲ್ಯಮಾಪನ ಮಾಡುವುದು

❖ 5E's are known as five phases of learning through out the learning process. In this process students study to observe. inverstigate, try to analyze and they become able to get a conclusion at the end of the lesson. In this process a teacher act as a facilitator and his guide wherever students lag in learning, Through these steps a teacher can make his teaching process as a fruitful one.

Hence option (3) is a correct sequence.

3) Sequencing (ಕ್ರಮಾನುಗತ) : Sequencing is a process which combines the things or events in a particular order as they happened.

ಯಾವುದಾದರೂ ಘಟನೆಯ ಪ್ರಕ್ರಿಯೆಯನ್ನು ಅದು ನಡೆದ ಕಾಲಾನುಕ್ರವಾದ ಹಂತದಲ್ಲೇ ಸೂಚಿಸುವುದಾಗಿದೆ. ಆದ್ದರಿಂದ ಆಯ್ಕೆ (3) ಸರಿ.

**55. Effective communication Involves**

1) Appropriate use of voice and body lan guage.
2) Use of good voice only.
3) Use of body language only.
4) Casual listening.

**Ans : 1) Appropriate use of voice and body language :**

❖ Appropriate use of voice and body language : ಪರಿಣಾಮಕಾರಿ ಸಂವಹನ ಯಾವುದನ್ನು ಒಳಗೊಂಡಿದೆ ಎಂಬುದು ಪ್ರಶ್ನೆಯ ಅರ್ಥವಾಗಿದೆ. ಪಾಠ ಮಾಡುವಾಗ ಶಿಕ್ಷಕರು, ವಿದ್ಯಾರ್ಥಿಗಳೊಂದಿಗೆ ಉತ್ತಮ ಬಾಂಧವ್ಯ ವೃದ್ಧಿಸಿಕೊಂಡಾಗ ಮಾತ್ರ ಪರಿಣಾಮಕಾರಿಯಾಗಿ ಪಾಠ ಬೋಧನೆಯನ್ನು ಮಾಡಬಹುದಾಗಿದೆ. ಈ ಪರಿಣಾಮಕಾರತ್ವಕ್ಕೆ ಶಿಕ್ಷಕರ, ಅಂಗೀಕ ಭಾಷೆ ಹಾಗೂ ಧ್ವನಿ ಏರಿಳಿತಗಳು ಅತ್ಯಂತ ಪ್ರಮುಖವಾದವುಗಳು. ಅಂತಹವುಗಳೆಂದರೇ

❖ ಪಾಠ ಮಾಡುವಾಗ ಶಿಕ್ಷಕರು ವರ್ಗದ ಎಲ್ಲ ಮಕ್ಕಳ ಕಡೆಗೂ ದೃಷ್ಟಿಹರಿಸಿ ಪಾಠ ಮಾಡಬೇಕು.

❖ ಉತ್ತಮವಾದ ಭಂಗಿಗಳ ಮೂಲಕ ಬೋಧಿಸಬೇಕು. ಅನಾವಶ್ಯಕ ಚಲನೆಗಳನ್ನು ಮಾಡದಿರುವುದು.

❖ ಮಾತನಾಡುವಾಗ ಧ್ವನಿಯು ಎಲ್ಲ ವಿದ್ಯಾರ್ಥಿಗಳಿಗೂ ಕೇಳುವಂತೆ ಸ್ಪಷ್ಟತೆಯಿಂದ ಕೂಡಿರಬೇಕು.

Downloaded From: www.kpscvaani.com

**ಉತ್ತರ : 2) ಹೊಸ ಆಲೋಚನೆಗಳನ್ನು ಬೆಳೆಸಿಕೊಳ್ಳುವುದು**

- **'ಹೊಸ ಆಲೋಚನೆಗಳನ್ನು ಬೆಳೆಸಿಕೊಳ್ಳುವುದು'** : ಸೃಜನಶೀಲತೆ (Creativity) ಸಂಕ್ಷಿಪ್ತ ಅರ್ಥದಲ್ಲಿ "ವಸ್ತುಗಳು ಅಥವಾ ವಿಚಾರಗಳ ನಡುವೆ ಈ ಮೊದಲು ಕಾಣದಂತಹ ಉಪಯುಕ್ತವಾದ ಉತ್ಪನ್ನ ಅಥವಾ ವಿಚಾರಗಳನ್ನು ಸೃಷ್ಟಿಸುವ ವ್ಯಕ್ತಿಯ ಸಾಮರ್ಥ್ಯವಾಗಿದೆ".
- ಸೃಜನಶೀಲತೆಯ ಮುಖ್ಯ ಅಂಶವೆಂದರೆ ಸೃಜನಶೀಲರೆಲ್ಲರೂ ಬುದ್ಧಿವಂತರು. ಆದರೆ ಬುದ್ಧಿವಂತರೆಲ್ಲ ಸೃಜನಶೀಲರಲ್ಲ ಎಂಬುದಾಗಿದೆ.
- ಸಾಧನೆಯಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳುವುದು ಸೃಜನಶೀಲ ವ್ಯಕ್ತಿಯ ಸಾಮರ್ಥ್ಯವೆಂದು ಪರಿಗಣಿಸಲಾಗಿಲ್ಲ.
- **ಹೊಸ ಆಲೋಚನೆಗಳನ್ನು ಬೆಳೆಸಿಕೊಳ್ಳುವುದು** : ನಿಸ್ಸಂಶಯವಾಗಿ ಸೃಜನಶೀಲ ವ್ಯಕ್ತಿಯ ಸಾಮರ್ಥ್ಯಗಳಲ್ಲಿ ಒಂದಾಗಿದೆ. ಇದು ಸೃಜನಶೀಲತೆಯ ಪ್ರಭಾವ ಬೀರುವ ಕಾರಕಗಳಲ್ಲಿ ಒಂದಾದ ನಮ್ರತೆ [Flexibility] ಯ ಅಂಶದೊಂದಿಗೆ ಸಹಸಂಬಂಧ ಹೊಂದಿದೆ. ಈ ರೀತಿಯ ಕಾರಕವು ಸಮಸ್ಯೆಯೊದಗಿದ ವ್ಯಕ್ತಿಯು ಹೇಗೆ ತಾನು ಸ್ವಯಂ ಪ್ರೇರಿತವಾಗಿ ಪರಿಹಾರ ಪಡೆಯಲು ವಿಭಿನ್ನ ದಿಸೆಗಳಲ್ಲಿ ಆಲೋಚಿಸುವುದಕ್ಕೆ ಸಂಬಂಧಿಸಿದೆ.

  ಉದಾ : ವ್ಯಕ್ತಿಯೊಬ್ಬ ತಾನು ಕೆಲಸಕ್ಕೆ ಹೋಗುವ ಮಾರ್ಗದಲ್ಲಿ ಅಡೆ-ತಡೆಯಿಂದಾಗಿ ಟ್ರಾಫಿಕ್ ಉಂಟಾದಾಗ ತಾನು ಹೇಗೆ ಬೇರೆ ಮಾರ್ಗವನ್ನು ತೆಗೆದುಕೊಳ್ಳಬೇಕು? ಅಥವಾ ಬೇರೆಯವರು ದ್ವಿಚಕ್ರ ವಾಹನದ ಸಹಾಯ ಪಡೆದುಕೊಳ್ಳಬಹುದೇ? ಅಥವಾ ಸಮೀಪದಲ್ಲಿರುವ ತನ್ನ ಸಹೋದ್ಯೋಗಿಗೆ ಕರೆ ಮಾಡಿ ಬರುವಂತೆ ತಿಳಿಸಲೇ? ಈ ರೀತಿಯಾಗಿ ಹೊಸ ಆಲೋಚನೆಯ ಮುಖಾಂತರ ಯಾವುದು ಸರಿಯಾದ ಮಾರ್ಗವೋ ಅದನ್ನು ಆರಿಸಿಕೊಂಡು ಆಫೀಸನ್ನು ತಲುಪುವುದು.

  ಆದ್ದರಿಂದ ಆಯ್ಕೆ (2) ಸರಿ ಉತ್ತರ.
- ಎಲ್ಲಾ ವಿಷಯಗಳಲ್ಲಿಯೂ ಉತ್ತಮ ಅಂಕಗಳನ್ನು ಗಳಿಸುವುದು ಸೃಜನಶೀಲತೆಗಿಂತ ಹೆಚ್ಚಾಗಿ ಬುದ್ಧಿವಂತಿಕೆಗೆ ಸಂಬಂಧಿಸಿದೆ ಎನ್ನಬಹುದು.
- ಒಂದೇ ದಿಸೆಯಲ್ಲಿಯ ಆಲೋಚನೆ ಸೃಜನಶೀಲತೆಯ ಲಕ್ಷಣವಾಗಲಾರದು.

**90. ಸ್ಮೃತಿಯ ಹಂತಗಳನ್ನು ಒಳಗೊಂಡ ಸರಿಯಾದ ಕ್ರಮ**

1) ಸ್ಮರಣೆ, ಗುರ್ತಿಸುವಿಕೆ, ದಾಖಲಿಸುವಿಕೆ, ಧಾರಣೆ
2) ಧಾರಣೆ, ದಾಖಲಿಸುವಿಕೆ, ಸ್ಮರಣೆ, ಗುರ್ತಿಸುವಿಕೆ
3) ದಾಖಲಿಸುವಿಕೆ, ಧಾರಣೆ, ಗುರ್ತಿಸುವಿಕೆ, ಸ್ಮರಣೆ
4) ದಾಖಲಿಸುವಿಕೆ, ಧಾರಣೆ, ಸ್ಮರಣೆ, ಗುರ್ತಿಸುವಿಕೆ

**ಉತ್ತರ :** * * *

- ಕಲಿತ ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳುವ ಪ್ರಕ್ರಿಯೆಯನ್ನು **"ಸ್ಮೃತಿ"** ಎಂದು ಕರೆಯುವರು.
- ಈ ಸ್ಮೃತಿಯು 4 ಹಂತಗಳ ಪ್ರಕ್ರಿಯೆಯಾಗಿದೆ.

1. **ಕಲಿಕೆ** : ಇದನ್ನು ದಾಖಲಿಸುವಿಕೆ ಎಂದು ಕರೆಯುವರು.
2. **ಧಾರಣೆ** : ಕಲಿತ ವಿಷಯಗಳು ಸಂಕೇತಗಳಾಗಿ ಸಂಗ್ರಹವಾಗುವ ಕ್ರಿಯೆ.
3. **ಪುನಃಸ್ಮರಣೆ** : ಕಲಿತ ವಿಷಯವನ್ನು ನಮಗೆ ಬೇಕಾದಾಗ ನೆನಪಿಗೆ ತಂದುಕೊಳ್ಳುವ ಕ್ರಿಯೆ
4. **ಗುರ್ತಿಸುವುದು** : ಧಾರಣೆಗೊಳಪಟ್ಟ ವಿಷಯಗಳನ್ನು ನೋಡಿ ಗುರುತಿಸುವ ಕ್ರಿಯೆ.

- ಇಲಾಖೆಯವರು ಆಯ್ಕೆ (3) ಅನ್ನು ಉತ್ತರವಾಗಿ ನೀಡಿರುತ್ತಾರೆ. ಆದರೆ ಆಯ್ಕೆ (4) ಸರಿಯಾದ ಕ್ರಮವಾಗಿರುತ್ತದೆ.

Downloaded From: www.kpscvaani.com

## ಭಾಗ – IV

# ಸಮಾಜ ವಿಜ್ಞಾನ

**91. ಯಜ್ಞ ಆಚರಣೆಯ ಕ್ರಮಗಳನ್ನು ವೇದದ ಭಾಗ**

1) ಬ್ರಾಹ್ಮಣ
2) ಸಂಹಿತ
3) ಆರಣ್ಯಕ
4) ಉಪನಿಷತ್ತು

**ಉತ್ತರ : 1) ಬ್ರಾಹ್ಮಣ**

- **ವೇದಗಳ ಸ್ವರೂಪ** : ವೇದಗಳನ್ನು ಸಂಹಿತೆಗಳು, ಬ್ರಾಹ್ಮಣಗಳು, ಆರಣ್ಯಕಗಳು ಹಾಗೂ ಉಪನಿಷತ್ತುಗಳೆಂದು ನಾಲ್ಕು ಸ್ಕಂಧಗಳಾಗಿ ವಿಭಾಗಿಸಿದ್ದಾರೆ. ಒಂದೊಂದು ವೇದಕ್ಕೂ ತನ್ನದೇ ಆದ ಸಂಹಿತೆ, ಬ್ರಾಹ್ಮಣ, ಆರಣ್ಯಕ ಹಾಗೂ ಉಪನಿಷತ್ತುಗಳಿವೆ.
- **ಸಂಹಿತೆ** : ವಿವಿಧ ದೇವತೆಗಳ ಸ್ತೋತ್ರಗಳನ್ನು ಒಳಗೊಂಡಿದೆ. ಇವು ದೇವತೆಗಳನ್ನು ಪ್ರಾರ್ಥಿಸುವ ಹಾಗೂ ಯಜ್ಞಕರ್ಮದ ಮೂಲಕ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳುವ ಸ್ತೋತ್ರಗಳು.
- **ಬ್ರಾಹ್ಮಣ** : ಯಜ್ಞ ಆಚರಣೆಯ ಕ್ರಮಗಳನ್ನು ತಿಳಿಸುವ ವೇದಭಾಗ.

ಎಂಬೆರಡು ಭಾಗಗಳಾಗಿ ವಿಂಗಡಿಸಿತು. ಮೀಸಲು ವಿಷಯಗಳ ಆಡಳಿತವನ್ನು ಪ್ರಾಂತ್ಯ ಗೌರ್‍ನರ್‌ಗಳು ತನ್ನ ಸಲಹಾ ಸಮಿತಿ ಸದಸ್ಯರ ಸಹಾಯದಿಂದ ನಿರ್ವಹಿಸುತ್ತಿದ್ದರು. ಪ್ರತಿ ಪ್ರಾಂತ್ಯಕ್ಕೆ ಚಕ್ರವರ್ತಿಯಿಂದ ನೇಮಕಗೊಂಡ ಒಬ್ಬೊಬ್ಬ ಗೌರ್‍ನರ್ ಇರುತ್ತಿದ್ದರು. ವರ್ಗಾಯಿಸಿದ ವಿಷಯಗಳ ಆಡಳಿತವನ್ನು ಗೌರ್‍ನರ್‌ಗಳಿಂದ ನೇಮಕವಾದ ಮಂತ್ರಿಗಳು ನೋಡಿಕೊಳ್ಳುತ್ತಿದ್ದರು. ಮಂತ್ರಿಗಳು ಪ್ರಾಂತ್ಯ ಶಾಸಕಾಂಗಗಳಿಗೆ ಜವಾಬ್ದಾರರಾಗಿದ್ದರು. ಶಾಸನ ಸಭೆಯ ಕೆಲವು ಸದಸ್ಯರನ್ನು ಮಂತ್ರಿಗಳಾಗಿ ನೇಮಿಸುವ ಅಧಿಕಾರ ಗೌರ್‍ನರ್‌ಗೆ ಇದ್ದಿತು. ಗೌರ್‍ನರ್ ವೈಸ್‌ರಾಯ್‌ಗೆ ಜವಾಬ್ದಾರನಾಗಿದ್ದನು.

**100. 'ತೀನ್ ಮೂರ್ತಿ ಹೈಫಾ ಚೌಕ್' ಸಂಬಂಧಿಸಿರುವುದು**

1) ಮೈಸೂರು, ಪುಣೆ ಮತ್ತು ಉದಯಪುರ ಲ್ಯಾನ್ಸರ್ಸ್
2) ಸತಾರ, ಜೋಧ್‌ಪುರ ಮತ್ತು ಪುಣೆ ಲ್ಯಾನ್ಸರ್ಸ್
3) ದೆಹಲಿ, ಹೈದರಾಬಾದ್ ಮತ್ತು ಜೈಪುರ ಲ್ಯಾನ್ಸರ್ಸ್
4) ಮೈಸೂರು, ಜೋಧ್‌ಪುರ ಮತ್ತು ಹೈದರಾಬಾದ್ ಲ್ಯಾನ್ಸರ್ಸ್

**ಉತ್ತರ : 4) ಮೈಸೂರು, ಜೋಧ್‌ಪುರ ಮತ್ತು ಹೈದರಾಬಾದ್ ಲ್ಯಾನ್ಸರ್ಸ್**

❖ ಮೊದಲ ವಿಶ್ವಯುದ್ಧದ ಸಂಯುಕ್ತ ಸೇನೆಯ ಭಾಗವಾಗಿ **ಮೈಸೂರು ಲ್ಯಾನ್ಸರ್ಸ್, ಜೋಧಪುರ ಅಶ್ವಸೇನೆ, ಹೈದರಾಬಾದ್ ಸೇನೆ** ಹಾಗೂ ಬ್ರಿಟಿಷರ 15ನೇ ಅಶ್ವದಳ ಸೇರಿ, ಈಗಿನ ಇಸ್ರೇಲ್‌ನಲ್ಲಿರುವ ಹೈಫಾ ನಗರದ ಸುತ್ತಮುತ್ತಲಿದ್ದ ಟರ್ಕಿ ನೆಲೆಗಳ ಮೇಲೆ ದಾಳಿ ನಡೆದಿದವು. ಹೈಫಾ ನಗರವನ್ನು ಮರಳಿಸುತ್ತೇವೆ ಎಂದು ಇಸ್ರೇಲಿಗೆ ಬ್ರಿಟಿಷರು ನೀಡಿದ್ದ ವಾಗ್ದಾನ ಈಡೇರಿಕೆಗಾಗಿ ನಡೆದ ಕದನ. ಭಾರತೀಯ ಸೈನಿಕರು ಕೇವಲ ಕುದುರೆ ಹಾಗೂ ಕತ್ತಿಗಳೊಂದಿಗೆ ಹೋರಾಟಕ್ಕಿಳಿದರೆ, ಅತ್ತ ಟರ್ಕಿ ಸೇನೆ ಬಳಿ ತುಪಾಕಿಗಳು ಹಾಗೂ ಮಷಿನ್ ಗನ್‌ಗಳಿದ್ದವು. ಅಂದಿನಿಂದ ನೂರು ವರ್ಷಗಳು ಕಳೆದಿವೆ.

ಮೈಸೂರು, ಜೋಧ್‌ಪುರ ಮತ್ತು ಹೈದರಾಬಾದ್ ಲ್ಯಾನ್ಸರ್‌ಗಳ ಅಶ್ವದಳದ ರೆಜಿಮೆಂಟ್‌ಗಳು ಈ ದಿನವನ್ನು (ಸೆಪ್ಟೆಂಬರ್ 23) ಹೈಫಾ ವಿಮೋಚನಾ ದಿನ ಎಂದು ಆಚರಿಸುತ್ತಿವೆ ಮತ್ತು 1918 ರಲ್ಲಿ ಒಟ್ಟೋಮನ್ ಸಾಮ್ರಾಜ್ಯದ ವಿರುದ್ಧ ಹೋರಾಡಿ ತಮ್ಮ ಪ್ರಾಣವನ್ನು ಅರ್ಪಿಸಿದ ವೀರ ಸೈನಿಕರನ್ನು ಗೌರವಿಸುತ್ತಿವೆ.

❖ ಈ ಮಹಾಯುದ್ಧದಲ್ಲಿ, ಮೈಸೂರು ಲ್ಯಾನ್ಸರ್‌ಗಳ ಕೊಡುಗೆಗಳು ವಿಶೇಷವಾಗಿ ಜಾಗತಿಕವಾಗಿ ಬಹಾಯಿ ಸಮುದಾಯಕ್ಕೆ ಮತ್ತು ಆಧುನಿಕ ಇಸ್ರೇಲ್ ರಾಜ್ಯದ ಅಸ್ತಿತ್ವಕ್ಕೆ ಗಮನಾರ್ಹ ಮತ್ತು ಅಪಾರವಾದದ್ದು.

ಒಟ್ಟೋಮನ್ ಮತ್ತು ಜರ್ಮನ್ ಸೈನಿಕರನ್ನು ಸೋಲಿಸಲು ಮತ್ತು ಆಯಕಟ್ಟಿನ ಪ್ರಮುಖ ಪಟ್ಟಣವಾದ ಡಮಾಸ್ಕಸ್, ಜೆರುಸಲೆಮ್, ಟಿಗ್ರಿಸ್, ಬಾಗ್ದಾದ್, ಮೆಸೊಪಟೋಮಿಯಾ ಮತ್ತು ಕುಟ್–ಅಲ್–ಅಮಾರಾವನ್ನು ಸ್ವತಂತ್ರಗೊಳಿಸಲು ಬ್ರಿಟಿಷ್ 15 ನೇ ಇಂಪೀರಿಯಲ್ ಸರ್ವೀಸ್ ಕ್ಯಾವಲ್ರಿ ಬ್ರಿಗೇಡ್‌ಗೆ ಮೊದಲನೆಯ ಮಹಾಯುದ್ಧವು ಅವಕಾಶ ಮಾಡಿಕೊಟ್ಟಿತು.

❖ ಜಾಗತಿಕವಾಗಿ ಸೆಪ್ಟೆಂಬರ್ 23ನ್ನು ಹೈಫಾ ದಿನವನ್ನಾಗಿ ಆಚರಿಸಲಾಗುತ್ತದಾದರೂ, ಭಾರತದಲ್ಲಿ, ವಿಶೇಷವಾಗಿ ಮೈಸೂರು ಲ್ಯಾನ್ಸರ್ ಕುಟುಂಬದವರು ಹಾಗೂ ಬಹಾಯಿ ಸಮುದಾಯದವರಿಗೆ ವೈಯಕ್ತಿಕವಾಗಿ ಬಹಳ ಆಪ್ತ ಸಂದರ್ಭ. ಬಹಾಯಿ ಪಂಥದ ಸ್ಥಾಪಕರಾದ ಬಹಾ–ಉ–ಲ್ಲಾಹ್ ಅವರ ಹಿರಿಯ ಪುತ್ರ ಅಬ್ದುಲ್ ಬಹಾ ಅವರನ್ನು ಮೈಸೂರು ಲ್ಯಾನ್ಸರ್ಸ್ ರಕ್ಷಣೆ ಮಾಡಿದ್ದರು. ಇಂದು ನವದೆಹಲಿಯಲ್ಲಿ ಪ್ರವಾಸಿ ಆಕರ್ಷಣೆ ಕೇಂದ್ರವೂ ಆಗಿರುವ ಲೋಟಸ್ ಟೆಂಪಲ್, ಇದೇ ಬಹಾಯಿ ಸಮುದಾಯದ ಪ್ರಾರ್ಥನಾ ಮಂದಿರ.

❖ 1892ರಲ್ಲಿ ರಚನೆಯಾಗಿದ್ದ ಮೈಸೂರು ಲ್ಯಾನ್ಸರ್ಸ್ ಹಾಗೂ ಜೋಧಪುರ ಅಶ್ವದಳದ ಸೈನಿಕರು, ಹೈದರಾಬಾದ್ ಅಶ್ವದಳ ಸುಮಾರು ಎರಡು ತಿಂಗಳು ಹೋರಾಡಿ ಬಹಾ ಅವರನ್ನು ರಕ್ಷಿಸುವಲ್ಲಿ ಯಶಸ್ವಿಯಾದರು. ಬ್ರಿಟಿಷರ ಅಡಿಯಲ್ಲಿದ್ದ ಎರಡು ಸೇನೆಗಳು ಸೆಣಸಿ ಬಂಧನದಿಂದ ಬಿಡಿಸಿದ್ದು ಒಂದೆಡೆಯಾದರೆ, ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅತ್ಯಂತ ಶೌರ್ಯವಂತರಾದ ಕರ್ನಲ್ ಜೆ. ದೇಶರಾಜ ಅರಸ್‌ರನ್ನು ಹಾಗೂ ಆಯ್ದ ಸೈನಿಕರನ್ನು ಕಳಿಸಿಕೊಟ್ಟಿದ್ದರು. ಇದಕ್ಕಾಗಿ ಬಹಾಯಿ ಸಮುದಾಯ ಇಂದಿಗೂ ಮೈಸೂರು ಲ್ಯಾನ್ಸರ್ಸ್‌ಗೆ ತನ್ನ ಕೃತಜ್ಞತೆ

Downloaded From: www.kpsvaani.com

ಮಾರ್ಚ್ 1667 ರಲ್ಲಿ ವಿಷಯವನ್ನು ಒತ್ತಾಯಿಸಿದಾಗ, ಅಹೋಮ್‌ಗಳು ಸ್ಥಳಾಂತರಗೊಳ್ಳಲು ಒತ್ತಾಯಿಸಲಾಯಿತು. ಆಗಸ್ಟ್ 1667 ರಲ್ಲಿ ಅಹೋಮ್ ಸೈನ್ಯವು ಲಚಿತ್ ಬೊರ್ಫುಕನ್ ನೇತೃತ್ವದಲ್ಲಿ ಮತ್ತು ಅಟಾನ್ ಬುರ್ಹಾಗೊಹೈನ್ ಜೊತೆಗೂಡಿ ಗುವಾಹಟಿಯನ್ನು ಮರಳಿ ಪಡೆಯಲು ಕೆಳಕ್ಕೆ ಸಾಗಿತು.

**103. ಸಂಸತ್ತಿನ ರಚನೆಗೆ ಅವಕಾಶ ಕಲ್ಪಿಸಿರುವ ಸಂವಿಧಾನದ ವಿಧಿ**

1) 352 2) 324

3) 52 4) 79

**ಉತ್ತರ : 4) 79**

❖ **(352 ನೇ ವಿಧಿ) ರಾಷ್ಟ್ರೀಯ ತುರ್ತುಪರಿಸ್ಥಿತಿ :** ಇಡೀ ದೇಶಕ್ಕೆ ಅಥವಾ ದೇಶದ ಯಾವುದೇ ಭಾಗದ ಭದ್ರತೆಗೆ, ಯುದ್ಧ, ಅಥವಾ ಹೊರಗಿನ ಆಕ್ರಮಣದಿಂದ ಧಕ್ಕೆ ಉಂಟಾದಾಗ ಅಥವಾ ಆಂತರಿಕ ಗಲಭೆಗಳಿಂದ ಧಕ್ಕೆ ಉಂಟಾದರೆ ತುರ್ತು ಪರಿಸ್ಥಿತಿ ಘೋಷಿಸಬಹುದು. ಉದಾ : 1962, 1971 ಮತ್ತು 1975ರಲ್ಲಿ ಘೋಷಿಸಿದೆ.

❖ ಸಂವಿಧಾನದ ವಿಧಿ 324 ಚುನಾವಣಾ ಆಯೋಗದ ರಚನೆ ಕುರಿತು ತಿಳಿಸುತ್ತದೆ. ಭಾರತ ಚುನಾವಣಾ ಆಯೋಗ 1950 ಜನವರಿ 25ರಂದು ಸ್ಥಾಪಿತವಾಯಿತು.

❖ ನಮ್ಮ ಸಂವಿಧಾನದ 52 ನೇ ವಿಧಿಯು ರಾಷ್ಟ್ರಪತಿ ಸ್ಥಾನಕ್ಕೆ ಅವಕಾಶ ಕಲ್ಪಿಸಿಕೊಟ್ಟಿದೆ. ಭಾರತದ ರಾಷ್ಟ್ರಪತಿಯವರು ಸಂವಿಧಾನ ಮುಖ್ಯಸ್ಥರೂ, ರಾಷ್ಟ್ರದ ಪ್ರಥಮ ಪ್ರಜೆಯೂ, ಕಾರ್ಯಾಂಗದ ಮುಖ್ಯಸ್ಥರೂ ಹಾಗೂ ಮೂರು ಸೇನಾಪಡೆಗಳ (ವಾಯುಪಡೆ, ಭೂಪಡೆ, ನೌಕಾಪಡೆ) ಮಹಾದಂಡನಾಯಕರು ಆಗಿದ್ದಾರೆ. ರಾಷ್ಟ್ರದ ಸಮಸ್ತ ಅಧಿಕಾರವೆಲ್ಲವೂ ಇವರಿಗೆ ಸೇರಿದ್ದು, ಸರ್ವೋನ್ನತ ಸ್ಥಾನವನ್ನು ಹೊಂದಿದ್ದಾರೆ. ಅವರ ಅಧಿಕಾರವನ್ನು ಯಾವ ನ್ಯಾಯಾಲಯದಲ್ಲಿಯೂ ಪ್ರಶ್ನಿಸುವಂತಿಲ್ಲ. ಇಂತಹ ಸ್ಥಾನವನ್ನು ಅಲಂಕರಿಸುವವರು ಭಾರತದ ಸತ್ಪ್ರಜೆಯಾಗಿರಬೇಕು

❖ ಭಾರತವು ಸಂಸದೀಯ ಮಾದರಿಯ ಸರ್ಕಾರವನ್ನು ಹೊಂದಿದ್ದು, ಕೇಂದ್ರ ಶಾಸಕಾಂಗವನ್ನು ಸಂಸತ್ತು ಎಂದು ಕರೆಯಲಾಗಿದೆ. ನಮ್ಮ ಸಂವಿಧಾನದ **79 ನೇ ವಿಧಿಯು** ಸಂಸತ್ತಿನ ರಚನೆಗೆ ಅವಕಾಶ ಮಾಡಿಕೊಟ್ಟಿದೆ. ಸಂಸತ್ತು ದ್ವಿಸದನ ಪದ್ಧತಿಯನ್ನು ಹೊಂದಿದ್ದು, **ಮೇಲ್ಮನೆಯನ್ನು ರಾಜ್ಯಸಭೆ ಎಂದು, ಕೆಳಮನೆಯನ್ನು ಲೋಕಸಭೆ** ಎಂದು ಕರೆಯಲಾಗುತ್ತದೆ.

**104. ಭಾರತದ ಸರ್ವೋಚ್ಚನ್ಯಾಯಾಲಯವು ಅಸ್ತಿತ್ವಕ್ಕೆ ಬಂದದ್ದು**

1) ನವೆಂಬರ್ 28, 1949

2) ಜನವರಿ 28, 1950

3) ಜನವರಿ 26, 1950

4) ಜನವರಿ 25, 1950

**ಉತ್ತರ : 2) ಜನವರಿ 28, 1950**

❖ ನಮ್ಮ ನ್ಯಾಯಾಂಗ ವ್ಯವಸ್ಥೆಯು ಹೆಚ್ಚು ಮಹತ್ವದ ಸ್ಥಾನ ಪಡೆದುಕೊಂಡಿದೆ. ಅಮೆರಿಕಾದಂತೆ ಕೇಂದ್ರ ಹಾಗೂ ಪ್ರಾಂತ್ಯಗಳಿಗೆ ಪ್ರತ್ಯೇಕ ನ್ಯಾಯಾಲಯಗಳಿರದೆ ಸಮಸ್ತ ರಾಷ್ಟ್ರಕ್ಕೆ ಒಂದೇ ನ್ಯಾಯಾಂಗ ವ್ಯವಸ್ಥೆ ಜಾರಿಯಲ್ಲಿದೆ. ನಮ್ಮ ನ್ಯಾಯಾಂಗವು ಶಾಸಕಾಂಗ ಮತ್ತು ಕಾರ್ಯಾಂಗಗಳಿಂದ ಸ್ವತಂತ್ರವಾಗಿದೆ. ಉಚ್ಚ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳು, ಸರ್ವೋಚ್ಚ ನ್ಯಾಯಾಲಯದ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತವೆ. ನ್ಯಾಯ, ಸಂವಿಧಾನ, ಶಾಸನ, ಸಂಪ್ರದಾಯ ಹಾಗೂ ಹಿಂದೆಯೇ ನಿರ್ಣಯಿಸಲಾದ ವಿಧಿಗಳು ನ್ಯಾಯ ನಿರ್ಣಯಗಳಿಗೆ ಆಧಾರಗಳು. ಈ ಎಲ್ಲಕ್ಕೂ ಸರ್ವೋಚ್ಚ ನ್ಯಾಯಾಲಯವೇ ರಾಷ್ಟ್ರದ ಅತ್ಯುನ್ನತ ನ್ಯಾಯಾಲಯವಾಗಿದೆ. ಇದರ ತೀರ್ಪೇ ಅಂತಿಮವಾದುದು.

❖ **ಸರ್ವೋಚ್ಚ ನ್ಯಾಯಾಲಯ** : ಸಂವಿಧಾನದಲ್ಲಿ ಹೇಳಿರುವಂತೆ ಸಂಸತ್ತಿನ ಶಾಸನದಿಂದ ರಚಿಸಲಾದ ಸರ್ವೋಚ್ಚ ನ್ಯಾಯಾಲಯವು ಜನವರಿ 28, 1950 ರಂದು ಅಸ್ಥಿತ್ವಕ್ಕೆ ಬಂದಿದೆ. ಇದು ದೆಹಲಿಯಲ್ಲಿದೆ. ಈ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮತ್ತು ಇತರೆ ನ್ಯಾಯಾಧೀಶರನ್ನು ರಾಷ್ಟ್ರಪತಿಯವರು ನೇಮಿಸುತ್ತಾರೆ. ಇಂದು ಮುಖ್ಯ ನ್ಯಾಯಾಧೀಶರನ್ನೊಳಗೊಂಡು 31 ಮಂದಿ ನ್ಯಾಯಾಧೀಶರಿದ್ದಾರೆ.

Downloaded From: www.kpscvaani.com

## ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳು

| ಕ್ರ.ಸಂ. | ಅಂಗ ಸಂಸ್ಥೆಗಳು | ಮುಖ್ಯ ಕಛೇರಿ | ಸ್ಥಾಪನೆ |
|---|---|---|---|
| 01. | ಆಹಾರ ಮತ್ತು ಕೃಷಿ ಸಂಸ್ಥೆ | ರೋಮ್ (ಇಟಲಿ) | 1945 |
| 02. | ವಿಶ್ವ ಆರೋಗ್ಯ ಸಂಸ್ಥೆ | ಜಿನಿವಾ | 1948 |
| 03. | ವಿಶ್ವ ಸಂಸ್ಥೆಯ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆ | ಪ್ಯಾರಿಸ್ (ಫ್ರಾನ್ಸ್) | 1946 |
| 04. | ಅಂತಾರಾಷ್ಟ್ರೀಯ ಕಾರ್ಮಿಕ ಸಂಘ | ಜಿನಿವಾ | 1946 |
| 05. | ವಿಶ್ವಸಂಸ್ಥೆ ಅಂತಾರಾಷ್ಟ್ರೀಯ ಮಕ್ಕಳ ತುರ್ತು ನಿಧಿ | ನ್ಯೂಯಾರ್ಕ್ | 1946 |
| 06. | ಅಂತಾರಾಷ್ಟ್ರೀಯ ಹಣಕಾಸು ನಿಧಿ | ವಾಷಿಂಗ್‌ಟನ್ | 1945 |
| 07. | ಅಂತಾರಾಷ್ಟ್ರೀಯ ಪುನರ್ ರಚನೆ ಮತ್ತು ಅಭಿವೃದ್ಧಿ ಬ್ಯಾಂಕ್ | ವಾಷಿಂಗ್‌ಟನ್ | 1945 |
| 08. | ವಿಶ್ವಸಂಸ್ಥೆ ವಾಣಿಜ್ಯ ಮತ್ತು ಅಭಿವೃದ್ಧಿ ಸಮ್ಮೇಳನ | ಜಿನಿವಾ | 1964 |
| 09. | ವಿಶ್ವ ವಾಣಿಜ್ಯ ಸಂಸ್ಥೆ | ಜಿನಿವಾ | 1995 |
| 10. | ಅಂತಾರಾಷ್ಟ್ರೀಯ ಅಣುಶಕ್ತಿ ಸಂಸ್ಥೆ | ವಿಯೆನ್ನಾ | 1957 |
| 11. | ವಿಶ್ವ ಹವಾಮಾನ ಸಂಸ್ಥೆ | ಜಿನಿವಾ | 1950 |
| 12. | ಅಂತರ್ ಸಹಕಾರ ಸಮುದ್ರ ಕುರಿತ ಸಲಹಾ ಸಂಸ್ಥೆ | ಲಂಡನ್ | 1958 |
| 13. | ವಿಶ್ವಸಂಸ್ಥೆಯ ಅಭಿವೃದ್ಧಿ ಯೋಜನೆ | ನ್ಯಾಯಾರ್ಕ | –– |
| 14. | ವಿಶ್ವ ಸಂಸ್ಥೆಯ ಪರಿಸರ ಕಾರ್ಯಕ್ರಮ | ನೈರೋಬಿ (ಕಿನ್ಯಾ) | 1972 |
| 15. | ಜನಸಂಖ್ಯಾ ಚಟುವಟಿಕೆಗಾಗಿ ವಿಶ್ವಸಂಸ್ಥೆಯ ನಿಧಿ | ನ್ಯೂಯಾರ್ಕ್ | 1967 |
| 16. | ವಿಶ್ವಸಂಸ್ಥೆಯ ನಿರಾಶ್ರಿತರಿಗಾಗಿ ರಾಜ್ಯ ತಾಂತ್ರಿಕರು | ಜಿನಿವಾ | 1951 |
| 17. | ವಿಶ್ವಸಂಸ್ಥೆಯ ಕೈಗಾರಿಕಾ ಅಭಿವೃದ್ಧಿ ಸಂಸ್ಥೆ | ವಿಯೆನ್ನಾ | 1967 |
| 18. | ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಘ | ವಾಷಿಂಗ್‌ಟನ್ | 1960 |
| 19. | ಅಂತಾರಾಷ್ಟ್ರೀಯ ಹಣಕಾಸು ನಿಗಮ | ವಾಷಿಂಗ್‌ಟನ್ | 1986 |
| 20. | ಅಂತಾರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆ | ಮಾಂಟ್ರಿಯಲ್ | 1947 |
| 21. | ವಿಶ್ವ ಅಂಚೆ ಸಂಸ್ಥೆ | ಬರ್ನ | 1947 |
| 22. | ಅಂತಾರಾಷ್ಟ್ರೀಯ ದೂರ ಸಂಪರ್ಕ ಸಂಘ | ಜಿನಿವಾ | 1947 |
| 23. | ಕೃಷಿ ಅಭಿವೃದ್ಧಿಗಾಗಿ ಅಂತರರಾಷ್ಟ್ರೀಯ ನಿಧಿ | ರೋಮ್ | 1977 |
| 24. | ತರಬೇತಿ ಮತ್ತು ಸಂಶೋಧನೆಗಾಗಿ ವಿಶ್ವಸಂಸ್ಥೆಯ ಕೇಂದ್ರ | ನ್ಯೂಯಾರ್ಕ್ | 1965 |
| 25. | ಪ್ಯಾಲಿಸ್ತೇನಿಯನ್ ನಿರಾಶಿತರಿಗಾಗಿ ವಿಶ್ವಸಂಸ್ಥೆಯ ಪರಿಹಾರ ಮತ್ತು ಕಾಮಗಾರಿ ನಿಯೋಗ | ನ್ಯಾಯಾರ್ಕ್ | 1949 |
| 26. | ವಿಶ್ವ ಬೌದ್ಧಿಕ ಆಸ್ಥಿ ಸಂಸ್ಥೆ | ಜಿನಿವಾ | 1974 |
| 27. | ಸುಂಕ ಮತ್ತು ವ್ಯಾಪಾರದ ಸಾಮಾನ್ಯ ಒಪ್ಪಂದ | ಜಿನಿವಾ | 1948 |

Downloaded From: www.kpscvaani.com

**108. ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ**

ಎ) ನಮ್ಮ ಸಂವಿಧಾನದ 42ರ ತಿದ್ದುಪಡಿಯಲ್ಲಿ ಮೂಲಭೂತ ಕರ್ತವ್ಯಗಳನ್ನು 1976 ರಲ್ಲಿ ಅಳವಡಿಸಲಾಗಿದೆ.

ಬಿ) ಸಂವಿಧಾನದ ಪರಿಚ್ಛೇದ 51(ಎ) ರಲ್ಲಿ ಮೂಲಭೂತ ಕರ್ತವ್ಯಗಳು ಸೇರಿಸಲ್ಪಟ್ಟಿವೆ.

1) (ಎ) ಮತ್ತು (ಬಿ) ಎರಡೂ ಸರಿ
2) (ಎ) ಮತ್ತು (ಬಿ) ಎರಡೂ ತಪ್ಪು
3) (ಎ) ಸರಿ ಆದರೆ (ಬಿ) ತಪ್ಪು
4) (ಎ) ತಪ್ಪು ಆದರೆ (ಬಿ) ಸರಿ

**ಉತ್ತರ : 1) (ಎ) ಮತ್ತು (ಬಿ) ಎರಡೂ ಸರಿ**

**131. ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ**

ಎ. ಶ್ರಮವನ್ನು ಸಂಗ್ರಹಿಸಲಾಗದು

ಬಿ. ಶ್ರಮವು ಒಂದು ಚಟುವಟಿಕೆಯ ಅಂಶವಾಗಿದೆ.

1) (ಎ) ಮಾತ್ರ ಸರಿ
2) (ಬಿ) ಮಾತ್ರ ಸರಿ
3) (ಎ) ಮತ್ತು (ಬಿ) ಎರಡೂ ಸರಿ
4) (ಎ) ಮತ್ತು (ಬಿ) ಎರಡೂ ತಪ್ಪು

**ಉತ್ತರ : 3) (ಎ) ಮತ್ತು (ಬಿ) ಎರಡೂ ಸರಿ**

❖ **ಶ್ರಮದ ಅರ್ಥ :** ಮಾನವರು ಸರಕು ಅಥವಾ ಸೇವೆಗಳ ಉತ್ಪಾದನೆಗಾಗಿ ಹಾಕುವ ಭೌತಿಕ ಅಥವಾ ಬೌದ್ಧಿಕ ಸಾಮರ್ಥ್ಯವನ್ನು ಶ್ರಮವೆಂದು ಕರೆಯಬಹುದು. ಅದು ಜೀವನೋಪಾಯ ಗಳಿಕೆಗಾಗಿ ಮಾನವರು ಮಾಡುವ ಎಲ್ಲ ಕಾರ್ಯಗಳನ್ನು ಒಳಗೊಂಡಿದೆ. ಅದು ಸರಕು ಅಥವಾ ಸೇವೆಗಳ ಉತ್ಪಾದನೆಯಲ್ಲಿ ಪರ್ಯಾವ ಸಾನಗೊಳ್ಳುತ್ತದೆ. ಆದರೆ ಸ್ವಸಂತೋಷಕ್ಕಾಗಿ ಅಥವಾ ಅನುಕಂಪದಿಂದ ಮಾಡಿದ ಕೆಲಸವನ್ನು ಶ್ರಮವೆಂದು ಪರಿಗಣಿಸಲಾಗುವುದಿಲ್ಲ. ತನ್ನ ಸೇವೆಗಳಿಗೆ ಸಂಬಳ ಪಡೆಯುವ ದಾದಿಯರ ಸೇವೆಯನ್ನು ಶ್ರಮ ಎಂದು ಪರಿಗಣಿಸಿದರೆ, ತನ್ನ ಅನಾರೋಗ್ಯಪೀಡಿತ ಮಗುವಿನ ಲಾಲನೆಗಾಗಿ ಮಾಡಿದ ಒಬ್ಬ ತಾಯಿಯ ಸೇವೆಯು ಶ್ರಮವೆಂದು ಪರಿಗಣಿತವಾಗುವುದಿಲ್ಲ. ಶ್ರಮವು ಮಾನವನಿಗೆ ಸಂಬಂಧಿತವಾದ್ದರಿಂದ ಅದರದ್ದೇ ಆದ ಕೆಲವೊಂದು ವಿಶಿಷ್ಟ ಲಕ್ಷಣಗಳಿವೆ :

1. ಶ್ರಮವನ್ನು ಶ್ರಮಿಕನಿಂದ ಬೇರ್ಪಡಿಸಲು ಆಗುವುದಿಲ್ಲ.
2. ಶ್ರಮವನ್ನು ಸಂಗ್ರಹಿಸಿ ಇಡಲು ಆಗುವುದಿಲ್ಲ
3. ಶ್ರಮದ ಪೂರೈಕೆಯು ಕಾಲಾಂತರದಲ್ಲಿ ಬದಲಾಗುತ್ತದೆ
4. ಶ್ರಮದ ವಲಸೆಯ ಪ್ರಮಾಣವು ಕಡಿಮೆ
5. ಶ್ರಮವು ದಕ್ಷತೆಯಲ್ಲಿ ಭಿನ್ನತೆ ಹೊಂದಿದೆ

**132. ಮಾನವ ಶಕ್ತಿ ಮತ್ತು ಭೌತಿಕ ಸಂಪನ್ಮೂಲಗಳನ್ನು ಒಂದೆಡೆ ಸೇರಿಸುವ ಪ್ರಕ್ರಿಯೆ**

1) ಯೋಜನೆ 2) ಸಂಯೋಜನೆ
3) ನಿಯಂತ್ರಣ 4) ಸಂಘಟನೆ

**ಉತ್ತರ : 4) ಸಂಘಟನೆ**

**(1) P-Planning ಯೋಜನೆ :** ಸರ್ಕಾರಿ ಯಂತ್ರ ಕೈಗೊಳ್ಳಬೇಕಾದ ಕಾರ್ಯಸೂಚಿ, ನಿರ್ವಹಿಸ ಬೇಕಾಗಿರುವ ಕಾರ್ಯಗಳು ಮತ್ತು ಅವುಗಳನ್ನು ಅನುಷ್ಠಾನಕ್ಕೆ ತರಲು ವಿಧಾನಗಳನ್ನು ಕುರಿತಂತೆ ಸ್ಥೂಲ ರೂಪರೇಖೆಯ ಯೋಜನೆ ಸಿದ್ಧಪಡಿಸುವುದು.

**(2) O- Organization ಸಂಘಟನೆ :** ಉದ್ದೇಶಿತ ಗುರಿ ಸಾಧನೆಗಾಗಿ ಇಲಾಖೆ, ನಿಗಮ, ವಿಭಾಗ, ಉಪವಿಭಾಗ, ಮುಂತಾದ ಆಡಳಿತ ವ್ಯವಸ್ಥೆಯನ್ನು ರೂಪಿಸುವುದು ಮತ್ತು ನಿರ್ವಹಿಸಬೇಕದ ಕಾರ್ಯಗಳನ್ನು ವಿವಿಧ ಇಲಾಖೆಗಳಿಗೆ ಹಂಚುವುದು.

**(3) S-Staffing ಸಿಬ್ಬಂದಿ ಪೂರೈಕೆ:** ಆಡಳಿತ ಕಾರ್ಯಗಳನ್ನು ನಿರ್ವಹಿಸಲು ಅಗತ್ಯವಾದ ಸಿಬ್ಬಂದಿಯ ನೇಮಕ, ತರಬೇತಿ ಹಾಗೂ ಸೇವಾ ನಿಯಮಗಳನ್ನು ನಿರ್ಧರಿಸುವುದು.

**(4) D-Direction ನಿರ್ದೇಶನ :** ಸರ್ಕಾರದ ವಿವಿಧ ಇಲಾಖೆಗಳಿಗೆ ನಿರ್ದೇಶನ ನೀಡುವುದು ಮತ್ತು ತೀರ್ಮಾನ ಕೈಗೊಳ್ಳುವುದು.

**(5) Co-Co-ordination ಸಂಯೋಜನೆ :** ಸರ್ಕಾರದ ವಿವಿಧ ಇಲಾಖೆಗಳಲ್ಲಿ ಘರ್ಷಣೆ, ಭಿನ್ನಾಭಿ ಪ್ರಾಯಗಳನ್ನು ನಿವಾರಿಸಿ ಅವುಗಳ ಕಾರ್ಯಗಳನ್ನು ಸಂಯೋಜನೆಗೊಳಿಸುವುದು.

**(6) R-Reporting ವರದಿ :** ಉನ್ನತಾಧಿಕಾರಿಗಳಿಗೆ ಅಧೀನಾಧಿಕಾರಿಗಳು ವಿವಿಧ ಇಲಾಖೆಗಳ ಕಾರ್ಯ ಚಟುವಟಿಕೆಗಳ ಬಗ್ಗೆ ವರದಿ ಸಲ್ಲಿಸುವುದು ಮತ್ತು ದಾಖಲೆ, ಸಂಶೋಧನೆ ಮತ್ತು ತನಿಖೆಯ ಮೂಲಕ ಶಾಸಕಾಂಗಕ್ಕೆ ವರದಿ ನೀಡುವುದು.

**(7) B-Budgeting ಆಯುವ್ಯಯ :** ಹಣಕಾಸಿನ ಯೋಜನೆ, ಆಯುವ್ಯಯ, ಲೆಕ್ಕಾಚಾರ, ಲೆಕ್ಕ ಪರಿಶೋಧನೆ, ಮುಂತಾದವುಗಳ ನಿರ್ವಹಣೆ ಯಾಗಿರುತ್ತದೆ.

**133. ಸಾಮಾನ್ಯವಾಗಿ ಒಂದು ಭೌಗೋಳಿಕ ಪ್ರದೇಶಕ್ಕೆ ಮಾತ್ರ ಸೀಮೀತವಾಗಿರುವ ಮಾರುಕಟ್ಟೆ**

1) ಸ್ಥಳೀಯ ಮಾರುಕಟ್ಟೆ
2) ಹಣಕಾಸು ಮಾರುಕಟ್ಟೆ
3) ಸರಕು ಮಾರುಕಟ್ಟೆ
4) ಸಗಟು ಮಾರುಕಟ್ಟೆ

**ಉತ್ತರ : 1) ಸ್ಥಳೀಯ ಮಾರುಕಟ್ಟೆ**

Downloaded From: www.kpscvaani.com

❖ **ವಿಸ್ತೃತ**: ಹಂತದಲ್ಲಿ ವಿದ್ಯಾರ್ಥಿಗಳು ಹೊಸ ಕೌಶಲ್ಯಗಳನ್ನು ಬಲಪಡಿಸುವಾಗ ಪರಿಕಲ್ಪನೆಗಳ ಹೊಸ ತಿಳುವಳಿಕೆಯನ್ನು ಅನ್ವಯಿಸಲು ಪ್ರೋತ್ಸಾಹಿಸಲಾಗುತ್ತದೆ (ಡುರಾನ್ ಮತ್ತು ಡುರಾನ್, 2004). ಪ್ರಕಾರ, "ವಿದ್ಯಾರ್ಥಿಗಳು ಹೆಚ್ಚುವರಿ ತನಿಖೆಗಳನ್ನು ನಡೆಸಬಹುದು, ಉತ್ಪನ್ನಗಳನ್ನು ಅಭಿವೃದ್ಧಿ ಪಡಿಸಬಹುದು, ಮಾಹಿತಿ ಮತ್ತು ಆಲೋಚನೆಗಳನ್ನು ಹಂಚಿಕೊಳ್ಳಬಹುದು, ಅಥವಾ ಅವರ ಜ್ಞಾನ ಮತ್ತು ಕೌಶಲ್ಯಗಳನ್ನು ಇತರ ವಿಭಾಗಗಳಿಗೆ ಅನ್ವಯಿ ಸಬಹುದು" ಕಲಿಕೆಯ ಚಕ್ರದಲ್ಲಿನ ಈ ಹಂತವು ಇತರ ವಿಷಯ ಕ್ಷೇತ್ರಗಳೊಂದಿಗೆ ವಿಜ್ಞಾನವನ್ನು ಸಂಯೋಜಿಸಲು ಶಿಕ್ಷಕರಿಗೆ ಅವಕಾಶಗಳನ್ನು ಒದಗಿಸುತ್ತದೆ

❖ **ಮೌಲ್ಯಮಾಪನ** : "ಮೌಲ್ಯಮಾಪನ ಹಂತವು ವಿದ್ಯಾರ್ಥಿಗಳು ತಮ್ಮ ತಿಳುವಳಿಕೆ ಮತ್ತು ಸಾಮರ್ಥ್ಯಗಳನ್ನು ನಿರ್ಣಯಿಸಲು ಪ್ರೋತ್ಸಾಹಿಸುತ್ತದೆ ಮತ್ತು ಶೈಕ್ಷಣಿಕ ಉದ್ದೇಶಗಳನ್ನು ಸಾಧಿಸುವ ಕಡೆಗೆ ವಿದ್ಯಾರ್ಥಿಗಳ ಪ್ರಗತಿಯನ್ನು ಮೌಲ್ಯಮಾಪನ ಮಾಡಲು ಶಿಕ್ಷಕರಿಗೆ ಅವಕಾಶಗಳನ್ನು ಒದಗಿಸುತ್ತದೆ". ಈ ಹಂತದಲ್ಲಿ ರಚನಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಮಾಪನ ಸೂಕ್ತವಾಗಿದೆ. ವಿದ್ಯಾರ್ಥಿಗಳ ತಿಳಿವಳಿಕೆ ಮತ್ತು ಕಾರ್ಯಕ್ಷಮತೆಯನ್ನು ಮೌಲ್ಯ ಮಾಪನ ಮಾಡಲು ಸೂಕ್ತವಾದ ಸಾಂಪ್ರದಾಯಿಕವಲ್ಲದ ಮೌಲ್ಯಮಾಪನದ ಪಟ್ಟಿಯನ್ನು ಒದಗಿಸುತ್ತದೆ: ಬಂಡವಾಳಗಳು, ಕಾರ್ಯಕ್ಷಮತೆ ಆಧಾರಿತ ಮೌಲ್ಯಮಾಪನ, ಪರಿಕಲ್ಪನೆ ನಕ್ಷೆಗಳು, ಭೌತಿಕ ಮಾದರಿಗಳು ಮತ್ತು ಜರ್ನಲ್ ಲಾಗ್‌ಗಳು.

**144. ಇದು ಸಮಾಜ ವಿಜ್ಞಾನ ಪಠ್ಯ ಪುಸ್ತಕದ ಉತ್ತಮ ಲಕ್ಷಣವಲ್ಲ.**

1) ನೈತಿಕ ಮೌಲ್ಯಗಳನ್ನು ಬೆಳೆಸುವಂತಿರಬೇಕು

2) ಭಾಷೆ ಮತ್ತು ಶೈಲಿ ಕಠಿಣವಾಗಿರಬೇಕು

3) ಮುಖಪುಟವು ಆಕರ್ಷಕವಾಗಿರಬೇಕು

4) ಉದಾಹರಣೆಗಳನ್ನು ಹಾಗೂ ಚಿತ್ರಪಟಗಳನ್ನು ಒಳಗೊಂಡಿರಬೇಕು

**ಉತ್ತರ : 2) ಭಾಷೆ ಮತ್ತು ಶೈಲಿ ಕಠಿಣವಾಗಿರಬೇಕು**

**ಪಠ್ಯ ಪುಸ್ತಕಗಳು:**

❖ ವಿವಿಧ ತರಗತಿಯಲ್ಲಿ ಬೋಧಿಸಲು ವ್ಯವಸ್ಥಿತ ರೀತಿಯಲ್ಲಿ ವಿಷಯ ಸೂಚಿಗಳನ್ನು ಹೊಂದಿಕೊಂಡಿರುವ ಪುಸ್ತಕಗಳಿಗೆ **'ಪಠ್ಯಪುಸ್ತಕ'** ಗಳೆಂದು ಕರೆಯುವರು. ಅವುಗಳ ಮೂಲಕ ಶಿಕ್ಷಕನು ವಿದ್ಯಾರ್ಥಿಗಳಿಗೆ ಜ್ಞಾನವನ್ನು ನೀಡಲು ಸಾಧ್ಯವಿದೆ.

❖ **ಸಮಾಜ ವಿಜ್ಞಾನ ಪಠ್ಯ ಪುಸ್ತಕದ ಲಕ್ಷಣಗಳು :**

1. ಕಾರಣ ಮತ್ತು ಪರಿಣಾಮ ತತ್ವದ ಆಧಾರದ ಮೇಲೆ ಇತಿಹಾಸದಲ್ಲಿ ಐತಿಹಾಸಿಕ ಘಟನೆಗಳ ವರ್ಣನೆಯನ್ನು ನಿರೂಪಿಸಬೇಕು.
2. ಪ್ರಚಲಿತ ಸಾಮಾಜಿಕ ಜೀವನದೊಂದಿಗೆ ಗತಕಾಲದ ಘಟನೆಗಳನ್ನು ಸಹ ಸಂಬಂಧೀಕರಿಸಲು ಪ್ರಯತ್ನಿಸಬೇಕು.
3. ಪುಸ್ತಕಗಳನ್ನು ಆಸಕ್ತಿಯುತ ಶೈಲಿಯಲ್ಲಿ ಬರೆದಿರಬೇಕು. ಅವುಗಳು ಮಕ್ಕಳ ಕುತೂಹಲವನ್ನು ಕೆರಳಿಸಬೇಕು.
4. ಇತಿಹಾಸ ಪಠ್ಯಪುಸ್ತಕದಲ್ಲಿಯ ಭಾಷೆ ಸರಳವಾಗಿರಬೇಕು. ಅದು ಮಕ್ಕಳ ಮಟ್ಟಕ್ಕೆ ಅನುಗುಣವಾಗಿರಬೇಕು.
5. ಪಠ್ಯಪುಸ್ತಕವು ಉತ್ತಮ ದೃಷ್ಟಾಂತಗಳನ್ನು ಒಳಗೊಂಡಿರಬೇಕು. ಅವು (ದೃಷ್ಟಾಂತ) ಗಳು ಚಾರ್ಟ, ನಕಾಶಗಳು ಹಾಗೂ ಚಿತ್ರಗಳನ್ನು ಒಳಗೊಂಡಿರಬೇಕು.
6. ಇತಿಹಾಸ ಪಠ್ಯಪುಸ್ತಕದಲ್ಲಿ ಆಯ್ಕೆ ಮಾಡಿದ ಘಟನೆಗಳ ವಿವರಣೆ ಇರಬೇಕು. ಪಠ್ಯಪುಸ್ತಕದಲ್ಲಿ ವಿಷಯ ವಸ್ತುವು **"ಮೂರ್ತದಿಂದ ಅಮೂರ್ತದೆಡೆಗೆ"** ಬೋಧನಾ ಸೂತ್ರವನ್ನು ಅನುಸರಿಸಿರಬೇಕು.
7. ಪಠ್ಯಪುಸ್ತಕವು ಯೋಗ್ಯ ಬೆಲೆಯನ್ನು ಹೊಂದಿರಬೇಕು.
8. ಶಿಕ್ಷಕರಿಗಾಗಿ ಮತ್ತು ಮಕ್ಕಳಿಗಾಗಿ ಉಪಯುಕ್ತವಾಗಿರಬೇಕು. ಅದು ಶಿಕ್ಷಕರಿಗೆ ಪಠ್ಯಕ್ರಮ ಮತ್ತು ವಿಧಾನವಾಗಿರಬೇಕು.
9. ಅಂತರರಾಷ್ಟ್ರೀಯ ತಿಳುವಳಿಕೆ ಮೂಡಿಸುವುದರಲ್ಲಿ ಸಹಾಯಕವಾಗಬೇಕು. ಅದು ಭಾವೈಕ್ಯವನ್ನು ವೃದ್ಧಿಗೊಳಿಸಬೇಕು.
10. ಪ್ರಾಥಮಿಕ (ಪ್ರೈಮರಿ) ತರಗತಿಗಳಿಗೆ ಪಠ್ಯ ಪುಸ್ತಕಗಳನ್ನು ಕಥೆಯ ರೂಪದಲ್ಲಿ ಬರೆಯಬೇಕು. ಉನ್ನತ ತರಗತಿಗಳಿಗೆ ಅದು ಜೀವನ ವೃತ್ತಾಂತ ಉಂಟಾದ ವಿಧಾನಗಳ ಮೇಲೆ ಆಧಾರಿತವಾಗಿ ಇರಬೇಕು.

Downloaded From: www.kpscvaani.com